ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಎಂ.ಫಿಲ್. ಪ್ರಬಂಧ)

ಸಂಶೋಧಕರು

ಮಾರುತಿ ಹೆಚ್

ನೋಂದಣಿ ಸಂಖ್ಯೆ: ೧೬೦೧೦೮೦೩೦೦೧೦

ಮಾರ್ಗದರ್ಶಕರು

ಡಾ.ಎಸ್.ವೈ. ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೭-೧೮

ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಎಂ.ಫಿಲ್. ಪ್ರೌಢಪ್ರಬಂಧ)

ಸಂಶೋಧಕರು

ಮಾರುತಿ ಹೆಚ್

ನೋಂದಣಿ ಸಂಖ್ಯೆ: ೧೭೦೧೦೮೦೩೦೦೧೦

ಮಾರ್ಗದರ್ಶಕರು

ಡಾ.ಎಸ್.ವೈ. ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೭-೧೮

ಮಾರ್ಗದರ್ಶಕರ ದೃಢೀಕರಣ ಪತ್ರ


ಮಾರುತಿ ಹೆಚ್ ಅವರು **"ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರೌಢಪ್ರಬಂಧವನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ಎಸ್.ವೈ. ಸೋಮಶೇಖರ್)
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ :

ಸ್ಥಳ : ವಿದ್ಯಾರಣ್ಯ



ಸಂಶೋಧಕರ ಪ್ರಮಾಣ ಪತ್ರ

"ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಪ್ರೌಢಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಎಸ್.ವೈ. ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ಪ್ರೌಢಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

(ಮಾರುತಿ ಹೆಚ್)
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ :

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ: ಒಂದು

ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಸಮೀಕ್ಷೆ ಮತ್ತು ವಿಧಾನ / ೧-೪

ಅಧ್ಯಾಯ: ಎರಡು

ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ / ೫-೨೦

ಅಧ್ಯಾಯ: ಮೂರು

ದೇವಾಲಯ, ಮೂರ್ತಿಶಿಲ್ಪ ಹಾಗೂ ವೀರಗಲ್ಲುಗಳು / ೨೧-೪೯

ಅಧ್ಯಾಯ: ನಾಲ್ಕು

ನಂಬಿಕೆ ಆಚರಣೆಗಳು / ೫೦-೭೪

ಅಧ್ಯಾಯ: ಐದು

ಸಮಾರೋಪ / ೭೫-೭೭

ಅನುಬಂಧ

ಪರಾಮರ್ಶನ ಗ್ರಂಥಗಳು

ವಕ್ತೃಗಳು

ನಕ್ಷೆಗಳು

ಛಾಯಾಚಿತ್ರಗಳು

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

೧.೧ ಪ್ರಸ್ತಾವನೆ

ಇತಿಹಾಸವೆಂದರೆ ಗತಿಸಿಹೋದ ಘಟನೆಗಳನ್ನು ದೊರೆತ ದಾಖಲೆಗಳಿಂದ ಅವಲೋಕಿಸುವುದರ ಮೂಲಕ ಇತಿಹಾಸವನ್ನು ಪುನರ್‌ರಚಿಸುವುದಾಗಿದೆ. ಇತಿಹಾಸದ ಅಧ್ಯಯನದಿಂದ ರಾಜಕೀಯ ಸಾಮಾಜಿಕ ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಕಲೆ, ವಾಸ್ತುಶಿಲ್ಪ ಹಾಗೂ ಇತರೆ ಸಾಂಸ್ಕೃತಿಕ ಅಂಶಗಳನ್ನು ತಿಳಿಯಬಹುದು. ಸಾಂಸ್ಕೃತಿಕವಾದ ಅಂಶಗಳೆಲ್ಲವು ಗತಿಸಿಹೋಗಿರುವಂತಹವು ಇಂತಹ ವಿವರಗಳನ್ನು ಪ್ರತಿಬಿಂಬಿಸುವ ಚಾರಿತ್ರಿಕ ದಾಖಲೆಗಳು ಹಾಗೂ ಸ್ಮಾರಕಗಳು ವಾಸ್ತವ ಅಧ್ಯಯನಕ್ಕೆ ಆಕರಗಳಾಗಿವೆ.

ಇತಿಹಾಸದ ಅಧ್ಯಯನವು ಇದುವರೆಗೆ ಕೇವಲ ರಾಜಮನೆತನಗಳ ಆಡಳಿತಕ್ಕೆ ಸೀಮಿತವಾಗಿತ್ತು. ಪ್ರಸ್ತುತ ಅಧ್ಯಯನವು ಸ್ಥಳೀಯ ಚರಿತ್ರೆಗೆ ಹೆಚ್ಚಿನ ಮಹತ್ವ ಕೊಡುವುದರ ಮೂಲಕ ಸೂಕ್ಷ್ಮ ಅಧ್ಯಯನದಿಂದ ಸಮಗ್ರತೆಯ ಸಾಂಸ್ಕೃತಿಕ ಅಂಶಗಳನ್ನು ತಿಳಿಯುವುದಾಗಿದೆ. ಈ ಸ್ಥಳ ಐತಿಹಾಸಿಕ ನೆಲೆಯೂ ವೈಶಿಷ್ಟ್ಯತೆಯನ್ನು ಹೊಂದಿದೆ. ಈ ಪ್ರದೇಶದಲ್ಲಿ ಕಂಡುಬರುವ ಐತಿಹಾಸಿಕ ಪ್ರಾಚ್ಯಾವಶೇಷಗಳು, ದೇವಾಲಯ, ಮೂರ್ತಿಶಿಲ್ಪ, ಸ್ಮಾರಕಶಿಲ್ಪ, ಶಾಸನ, ಕೆರೆಗಳು ಒಂದು ನೆಲೆಯ ಜನಜೀವನ ಅರಿಯಲು ಸಾಧ್ಯವಾಗುತ್ತದೆ. ಅಲ್ಲದೆ ಪ್ರಸ್ತುತ ಕಲ್ಲೇದೇವರಪುರ ಪ್ರದೇಶದ ಸ್ಥಳೀಯ ಐತಿಹಾಸಿಕ ಪ್ರಾಮುಖ್ಯತೆ ಗೋಚರವಾಗುತ್ತದೆ. ಈ ಪ್ರದೇಶದಲ್ಲಿ ದೊರೆತ ಪ್ರಾಚ್ಯಾವಶೇಷಗಳನ್ನು ಅಧ್ಯಯನ ಮಾಡುವುದರಿಂದ ಅಂದಿನ ಕಾಲದ ರಾಜರು ಯಾವ ರೀತಿಯ ಕೊಡುಗೆ ನೀಡಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ. ಅಲ್ಲದೇ ಈ ಪ್ರದೇಶದಲ್ಲಿ ನಡೆದಿರುವ ಸಂಶೋಧನೆಗಳು ವಿರಳವಾಗಿದ್ದು, ಪ್ರಸ್ತುತ ಕಲ್ಲೇದೇವರಪುರದ ಗ್ರಾಮಕ್ಕೆ ಸ್ವತಃ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳನ್ನು ವಿಶ್ಲೇಷಿಸಿ **ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ** ಎಂಬ ಶೀರ್ಷಿಕೆಯಡಿ ಅಧ್ಯಯನ ಮಾಡಲಾಗಿದೆ. ಸ್ಥಳೀಯ ಪರಿಸರವು ಚರಿತ್ರೆ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇತಿಹಾಸ ಶಾಸ್ತ್ರದ

ಬೆಳವಣಿಗೆಯ ಪರಿಣಾಮವಾಗಿ ಇತಿಹಾಸಕಾರರಿಂದ ಕಡೆಗಣಿಸಲ್ಪಟ್ಟ ಸ್ಥಳೀಯ ಇತಿಹಾಸಕ್ಕೆ ಹೆಚ್ಚಿನ ಮಹತ್ವ ದೊರೆತಿದೆ.

ಸ್ಥಳೀಯ ಇತಿಹಾಸ ತನ್ನದೇ ಆದ ಭೌಗೋಳಿಕ ಮಿತಿಗೊಳಪಟ್ಟರೂ ಸ್ಥಳೀಯ ಸಮುದಾಯಗಳ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಗತಿಗಳನ್ನು ವಿವರವಾಗಿ ಸಂಗ್ರಹಿಸಿಕೊಡುವ ವಿಪುಲ ಅವಕಾಶ ಅದಕ್ಕಿದೆ. ಆದ್ದರಿಂದ ಸ್ಥಳೀಯ ಇತಿಹಾಸ ಅಧ್ಯಯನದಿಂದ ವಿಸ್ತೃತವಾದ ಸಾಂಸ್ಕೃತಿಕ ಅಂಶಗಳನ್ನು ಅರಿಯಲು ಸಹಾಯಕವಾಗಿದೆ.

ಪ್ರಸ್ತುತ ಆಯ್ದುಕೊಂಡಿರುವ ವಿಷಯದ ಪರಿಸರದಲ್ಲಿನ ದೇವಾಲಯ, ಸ್ಮಾರಕಶಿಲ್ಪ, ಶಾಸನಗಳನ್ನು ಅವಲೋಕಿಸುವುದರ ಮೂಲಕ ಆ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಅರಿಯುವುದರ ಜೊತೆಗೆ ದೇವಾಲಯ ಕಲೆ ಮತ್ತು ಅದರ ವಾಸ್ತುಶೈಲಿಯನ್ನು ತಿಳಿಸಿಕೊಡುವುದು ಈ ಸಂಪ್ರಬಂಧದ ಪ್ರಮುಖ ಧ್ಯೇಯವಾಗಿದೆ.

೧.೨ ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದ ಉದ್ದೇಶ ಈ ಪರಿಸರದ ಒಟ್ಟಾರೆ ಸಾಂಸ್ಕೃತಿಕ ವಿಷಯಗಳನ್ನು ಕಟ್ಟಿಕೊಡುವ ಹಾಗೂ ಲಭ್ಯವಿರುವ ಆಕರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದಾಗಿದೆ. ಈ ಅಂಶಕ್ಕೆ ಸಂಬಂಧಿಸಿದಂತೆ ದೊರೆತಿರುವ ಪುರಾತತ್ವ ಆಕರಗಳನ್ನು ಸಂಗ್ರಹಿಸಿ ಹಾಗೂ ವಿಶ್ಲೇಷಣೆ ಮೂಲಕ ಸ್ಥಳೀಯ ಇತಿಹಾಸವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಈ ಪ್ರದೇಶದಲ್ಲಿ ಇದುವರೆಗೆ ದೊರೆತಿರುವ ಪ್ರಾಚ್ಯಾವಶೇಷಗಳ ಅಧ್ಯಯನದ ಜೊತೆಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಸಂದರ್ಶನಗಳ ಮೂಲಕ ಪ್ರಚಲಿತವಾಗಿರುವ ಐತಿಹ್ಯ ಹಾಗೂ ಮೌಖಿಕ ಆಕರಗಳನ್ನು ದಾಖಲಿಸಿಕೊಡುವುದಾಗಿದೆ. ಅಲ್ಲದೇ ಸಂಗ್ರಹಿತ ಸಂಪನ್ಮೂಲ ಆಕರಗಳನ್ನು ವಿಶ್ಲೇಷಣೆ ಮಾಡುವುದರ ಮೂಲಕ ಸಮಗ್ರ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನವನ್ನು ಪ್ರಸ್ತುತ ಈ ಪ್ರೌಢಪ್ರಬಂಧದಲ್ಲಿ ಮಾಡಲಾಗಿದೆ.

೧.೩ ಅಧ್ಯಯನದ ವ್ಯಾಪ್ತಿ

ಯಾವುದೇ ಸಂಶೋಧನೆಗೆ ಅಧ್ಯಯನದ ವ್ಯಾಪ್ತಿ ಬಹುಮುಖಿ, ನಿರ್ದಿಷ್ಟ ಹಾಗೂ ಉದ್ದೇಶಪೂರಿತವಾದ ಸಂಶೋಧನೆಯ ಯಶಸ್ಸಿಗೆ ಇದು ತುಂಬಾ ಸಹಯಕವಾಗಿರುತ್ತದೆ. ಹಾಗಾಗಿ ಪ್ರಸ್ತುತ ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕವಾಗಿ ಕಾಲಾವಧಿಯ ದೃಷ್ಟಿಯಿಂದ ನಿರ್ದಿಷ್ಟಪಡಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದ ಶೀರ್ಷಿಕೆ ಸೂಚಿಸುವಂತೆ ಕಲ್ಲೇದೇವರಪುರ ಸೀಮಿತ ಪ್ರದೇಶವನ್ನು ಮಾತ್ರ ಅಧ್ಯಯನಕ್ಕೆ ಹೆಚ್ಚು ಬಳಸಿಕೊಳ್ಳಲಾಗಿದೆ. ಕಾಲಾವದಿಯ ದೃಷ್ಟಿಯಿಂದ ಹಿಂದಿನ ಕಾಲದಿಂದ ಇಂದಿನ ಕಾಲದವರೆಗಿನ ಪ್ರಸ್ತುತ ಅಂಶಗಳನ್ನು ಒಳಗೊಂಡಂತೆ ಅಧ್ಯಯನ ವ್ಯಾಪ್ತಿಯನ್ನು ಸೀಮಿತಗೊಳಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಉದ್ದೇಶ ವ್ಯಾಪ್ತಿಯ ಅಂಶಗಳ ಹಿನ್ನೆಲೆಯಲ್ಲಿ ಈ ಸಂಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ.

ಮೊದಲ ಅಧ್ಯಾಯದಲ್ಲಿ ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ಸ್ವರೂಪ ಇದುವರೆಗಿನ ಅಧ್ಯಯನ ಸಮೀಕ್ಷೆ ಹಾಗೂ ಅಧ್ಯಯನದ ವಿಧಾನವನ್ನು ಸ್ಪಷ್ಟಪಡಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕಲ್ಲೇದೇವರಪುರದ ಪರಿಸರದ ಭೌಗೋಳಿಕ ಹಿನ್ನೆಲೆ, ಚಾರಿತ್ರಿಕ ಹಿನ್ನೆಲೆ, ಅಂಶಗಳನ್ನು ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಈ ಪರಿಸರದಲ್ಲಿ ಕಂಡುಬರುವ ದೇವಾಲಯ, ಮೂರ್ತಿಶಿಲ್ಪಗಳು, ವೀರಗಲ್ಲುಗಳು ಮುಂತಾದ ಅಂಶಗಳನ್ನು ಕುರಿತು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಈ ಪರಿಸರದಲ್ಲಿ ಕಂಡುಬರುವ ಸಾಂಸ್ಕೃತಿಕ ಮತ್ತು ಧಾರ್ಮಿಕ ನಂಬಿಕೆ ಆಚರಣೆಗಳನ್ನು ಕುರಿತು ಅಧ್ಯಯನದ ವಿವರವನ್ನು ಒಳಗೊಂಡಿದೆ.

ಐದನೇ ಅಧ್ಯಾಯವು ಸಮಾರೋಪವಾಗಿದ್ದು. ಇದು ಒಟ್ಟಾರೆ ಸಂಶೋಧನೆಯ ಫಲಿತಾಂಶವನ್ನು ಒಳಗೊಂಡಿದೆ.

೧.೫ ಅಧ್ಯಯನ ಸಮೀಕ್ಷೆ

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕಲ್ಲೇದೇವರಪುರ ಪರಿಸರಕ್ಕೆ ಸಂಬಂಧಿಸಿದಂತೆ ಅಲ್ಲಿನ ಚರಿತ್ರೆ ಮತ್ತು ಪ್ರಾಚೀನ ದೇವಾಲಯ ಮೂರ್ತಿಶಿಲ್ಪ ವೀರಗಲ್ಲು ಹಾಗೂ ಶಾಸನಗಳನ್ನು ಕುರಿತಂತೆ ಕಿರುಪರಿಚಯವನ್ನು ಮಾಡಿಕೊಡುವ ಬಿಡಿಲೇಖನಗಳು ಪ್ರಕಟಗೊಂಡಿರುವುದನ್ನು ಗಮನಿಸಬಹುದು. ಬಿ.ಎಲ್.ರೈಸ್‌ರವರು ಪ್ರಕಟಿಸಿದ ಎಪಿಗ್ರಾಫಿಯಾ ಕರ್ನಾಟಕ ಸಂಪುಟದಲ್ಲಿ ಕಲ್ಲೇದೇವರಪುರಕ್ಕೆ ಸಂಬಂದಿಸಿದ ಶಾಸನಗಳಿವೆ. ಟಿ. ಗಿರಿಜಾರವರ ದಾವಣಗೆರೆ ಇದು ನಮ್ಮ ಜಿಲ್ಲೆ, ಕಲ್ಲೇದೇವರಪುರಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು ನೀಡುತ್ತದೆ. ಎಸ್.ವೈ. ಸೋಮಶೇಖರ್ (ಸಂ) **ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ, ಜಗಲೂರು,** ಪುಸ್ತಕದಲ್ಲಿ ನಾಗರಾಜಪ್ಪ ಎಸ್. ಅವರು ಕಲ್ಲೇದೇವರಪುರ ಕುರಿತ ಲೇಖನದಲ್ಲಿ ದೇವಾಲಯ, ಆಚರಣೆಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಿದ್ದಾರೆ. ಹಾಗೂ ಹೆಚ್. ತಿಪ್ಪೇಸ್ವಾಮಿ ಅವರು **ದಾವಣಗೆರೆ ಜಿಲ್ಲೆಯ ದೇವಾಲಯಗಳು** (ಪ್ರಾಚೀನ ಮತ್ತು ಮಧ್ಯಕಾಲೀನ ಯುಗ) ಎಂಬ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಕಲ್ಲೇದೇವರಪುರದಲ್ಲಿ ಕಂಡುಬರುವ ದೇವಾಲಯಗಳ ಬಗ್ಗೆ ಜಿ. ಸಿದ್ದಪ್ಪ ಅವರು **ಜಗಲೂರು ಪರಿಸರದ ಸಾಂಸ್ಕೃತಿಕ ಅಧ್ಯಯನ** ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ವಿವರಿಸಿದ್ದಾರೆ. ಕಲ್ಲೇದೇವರಪುರಕ್ಕೆ ಸಂಬಂಧಿಸಿದಂತೆ ಕೆಲವು ಸಾಂಸ್ಕೃತಿಕ ವಿವರಗಳನ್ನು ನೀಡಿದ್ದಾರೆ. ಈ ಎಲ್ಲಾ ಅಧ್ಯಯನಗಳು ನಡೆದಿರುವ

ಹಿನ್ನೆಲೆಯಿಂದ ಕಲ್ಲೇದೇವರಪುರ ಪರಿಸರವನ್ನು ಕೇಂದ್ರವಾಗಿಸಿಕೊಂಡು ಸಮಗ್ರ ಅಧ್ಯಯನವು ನಡೆದಿಲ್ಲ, ಅದ್ದರಿಂದ ಪ್ರಸ್ತುತ ಅಧ್ಯಯನವು ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ವಿವರಗಳನ್ನು ಇತಿಹಾಸ ಮತ್ತು ಪುರಾತತ್ವ ಅಧ್ಯಯನದ ಹಿನ್ನೆಲೆಯಲ್ಲಿ ಸವಿಸ್ತಾರವಾಗಿ ಕಟ್ಟುವ ಉದ್ದೇಶವನ್ನು ಹೊಂದಿದೆ.

೧.೫.೧ ಅಧ್ಯಯನ ವಿಧಾನ

ಪ್ರಸ್ತುತ–ಅಧ್ಯಯನದಲ್ಲಿ ಕ್ಷೇತ್ರಕಾರ್ಯ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಕಲ್ಲೇದೇವರಪುರ ಪ್ರದೇಶಕ್ಕೆ ನೇರವಾಗಿ ಭೇಟಿ ಮಾಡಿ, ಅಲ್ಲಿ ದೊರೆತಿರುವ ಐತಿಹಾಸಿಕ ಅಥವಾ ಪ್ರಾಚ್ಯಾವಶೇಷಗಳನ್ನು ಕ್ರೋಢೀಕರಿಸಿ ದಾಖಲಿಸಿಕೊಳ್ಳುವುದರ ಮೂಲಕ ಮೌಖಿಕ ಕಥನಗಳನ್ನು ಹಾಗೂ ಐತಿಹ್ಯಗಳನ್ನು ತಿಳಿದಿರುವಂತಹ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯವನ್ನು ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ದೊರೆತಿರುವ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಚಲಿತದಲ್ಲಿರುವ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನದ ವಿಧಾನಗಳನ್ನು ಅಳವಡಿಸಿಕೊಂಡು ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ದೊರೆತಿರುವ ಆಕರಗಳನ್ನು ವಿಷಯಾನುಸಾರ ವಿಶ್ಲೇಷಿಸಿ ಚರ್ಚಿಸಿ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ವಸ್ತುನಿಷ್ಠವಾದ ವಿಧಾನಗಳನ್ನು ಈ ಸಂಪ್ರಬಂಧ ರಚನೆಯಲ್ಲಿ ಪ್ರಾಮಾಣಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ. ಅಧ್ಯಯನದ ಕೊನೆಯಲ್ಲಿ ಗ್ರಂಥಋಣ, ನಕ್ಷೆಗಳನ್ನು, ಛಾಯಚಿತ್ರಗಳ ವಿವರಗಳನ್ನು ನೀಡಲಾಗಿದೆ.

❖❖❖

ಅಧ್ಯಾಯ: ಎರಡು

ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕ ಪರಿಸರ

ಜಗಲೂರು ತಾಲ್ಲೂಕು ಇಂದು ದಾವಣಗೆರೆ ಜಿಲ್ಲೆಯಲ್ಲಿದೆ. ಕ್ರಿ.ಶ. ೧೯೯೭ಕ್ಕೂ ಮುಂಚೆ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿತ್ತು. ದಾವಣಗೆರೆ ಜಿಲ್ಲಾ ಕೇಂದ್ರದಿಂದ ಸುಮಾರು ೪೦ ಕಿ.ಮೀ. ಪೂರ್ವಕ್ಕಿರುವ ಜಗಲೂರು ತನ್ನದೇ ಆದ ಭೌಗೋಳಿಕ ಲಕ್ಷಣಗಳನ್ನು ಹೊಂದಿದ ತಾಲ್ಲೂಕು ಆಗಿದೆ. ಪೂರ್ವಕ್ಕೆ ಚಳ್ಳಕೆರೆ, ಪಶ್ಚಿಮಕ್ಕೆ ದಾವಣಗೆರೆ, ಹರಪನಹಳ್ಳಿ, ಉತ್ತರಕ್ಕೆ ಕೂಡ್ಲಿಗಿ, ದಕ್ಷಿಣಕ್ಕೆ ಚಿತ್ರದುರ್ಗ ತಾಲ್ಲೂಕುಗಳ ಗಡಿಗಳನ್ನು ಹೊಂದಿದೆ. ಇಂತಹ ತಾಲ್ಲೂಕಿನ ಭೌಗೋಳಿಕ ಲಕ್ಷಣಗಳಲ್ಲಿ ಗುಹೇಶ್ವರಬೆಟ್ಟ, ಕಂಬಾರಪ್ಪ ಕೋಟೆ, ಚಿನ್ನಹಗರಿ ನದಿ ಪ್ರಮುಖವಾದವು. ಕಣಕುಪ್ಪೆ, ಕಲ್ಲೇದೇವರಪುರ, ತೋರಣಗಟ್ಟೆ, ಅಸಗೋಡು, ಬಿಳಿಚೋಡು, ಕಸ್ತೂರಿಪುರ, ಕಾಮಗೇತನಹಳ್ಳಿ, ಕೆಂಚವ್ವನಾಗ್ತಿಹಳ್ಳಿ, ಗಡಿಮಾಕುಂಟೆ, ಗುತ್ತಿದುರ್ಗ, ಪಾಲನಾಯಕಕೋಟೆ, ಬೇಡರಬೆನಕನಹಳ್ಳಿ, ಮೆದಗಿನಕೆರೆ, ರಂಗಯ್ಯನದುರ್ಗ, ಬಿದರೆಕೆರೆ, ಚಿಕ್ಕಮಲ್ಲನಹೊಳೆ ಹೀಗೆ ಅನೇಕ ಗ್ರಾಮಗಳು ತಮ್ಮದೇ ಆದ ಸ್ಥಳಿಯ ಇತಿಹಾಸವನ್ನು ಹೊಂದಿವೆ.[೧]

ಜಗಲೂರು ತಾಲ್ಲೂಕಾಗಿ ಮಾರ್ಪಾಟು ಹೊಂದಿದ್ದು ಕ್ರಿ.ಶ. ೧೮೮೬ರಲ್ಲಿ ಇದಕ್ಕೂ ಮುನ್ನ ಕಣ್ವಕುಪ್ಪೆಯು ತಾಲ್ಲೂಕು ಕೇಂದ್ರವಾಗಿದ್ದಿತು. ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಜಗಲೂರು ತಾಲ್ಲೂಕು ೧೯೯೭ರಲ್ಲಿ ದಾವಣಗೆರೆ ಜಿಲ್ಲೆಗೆ ಸೇರಿತು ಜಗಲೂರು ಪರಿಸರವು ಭೌಗೋಳಿಕವಾಗಿ ೧೪° ೧೪° ೮೫° ಅಕ್ಷಾಂಶ ೭೬° ೩೫° ರೇಖಾಂಶದಲ್ಲಿದ್ದು ಸಮುದ್ರಮಟ್ಟದಿಂದ ಸುಮಾರು ೧೮೦೦ ಅಡಿಗಳಷ್ಟು ಎತ್ತರದಲ್ಲಿದೆ. ಶೇಕಡಾ ೧೫.೫೨ರಷ್ಟು ಹೆಕ್ಟೇರ್ ಭೂವಿಸ್ತೀರ್ಣ ಹೊಂದಿರುವ ಜಗಲೂರು ತಾಲ್ಲೂಕಿನ ಬಹುಭಾಗ ಕೆಂಪು ಮರಳು ಮಣ್ಣಿನಿಂದ ಕೂಡಿದ್ದು ಕೆಳಭಾಗ ಕಪ್ಪುಮಣ್ಣನ್ನು ಹೊಂದಿದೆ.[೨]

೨.೧.೧ ಭೂ ಸಂಪತ್ತು

ಇಲ್ಲಿನ ಪರಿಸರವು ಬೆಟ್ಟಗುಡ್ಡಳಿಂದ ಕಣಿವೆಗಳು ಹಳ್ಳಕೊಳ್ಳಗಳಿಂದ ಕೂಡಿದೆ. ಬೆಟ್ಟ ಶ್ರೇಣಿಗಳಲ್ಲಿ ಮುಖ್ಯವಾದವೆಂದರೆ ಗುಹೆಶ್ವರಬೆಟ್ಟ, ರಂಗಯ್ಯನ ಗುಡ್ಡಸಾಲು, ಕಣ್ವಕುಪ್ಪೆ, ಕಲ್ಲೇದೇವರಪುರ, ಕೆಳಗೋಟೆ, ಹಾಲೇಕಲ್ ಬೆಟ್ಟಶ್ರೇಣೆಗಳು, ಕೊಡದಗುಡ್ಡ, ಕೊಣಚಕಲ್ ಬೆಟ್ಟದ ಸಾಲುಗಳಿವೆ. ಈ ಭಾಗದ ಶಿಲಾವಲಯವನ್ನು ಧಾರವಾಡ ಶಿಲಾವಲಯವೆಂದು ಗುರುತಿಸಿರುವರು ಇಲ್ಲಿ ಹೇರಳವಾಗಿ ಕಣಶಿಲೆ ದೊರೆಯುತ್ತಿದ್ದು, ಅಲ್ಲಲ್ಲಿ ಕಾಂಗ್ಲಾಮರೇಟ್, ಬೆಣಚುಕಲ್ಲು ಅಥವಾ ಕ್ವಾರ್ಟ್‌ಜೈಟ್, ಡೊಲರೈಟ್, ಡೈಕ್, ಅಗ್ನಿಜನ್ಯಶಿಲೆ ಮತ್ತು ಸುಣ್ಣದ ಕಲ್ಲುಗಳು ದೊರೆಯುತ್ತದೆ.

ಇಲ್ಲಿನ ಭೌಗೋಳಿಕ ಪ್ರದೇಶ ಬಯಲು ಹಾಗೂ ಸಮತಲದಲ್ಲಿರುವುದರಿಂದ ವರ್ಷದ ಬಹುಕಾಲ ಒಣಹವೆಯಿಂದ ಕೂಡಿರುವುದು ತಾಲ್ಲೂಕಿನಲ್ಲಿ ಬೀಳುವ ಮಳೆಯ ಪ್ರಮಾಣ ವಾರ್ಷಿಕ ಸರಾಸರಿ ಪ್ರಮಾಣ ೫೫೦ ಮಿ.ಮೀ ಇದ್ದು ಇಲ್ಲಿನ ಅರಣ್ಯ ಪ್ರದೇಶವು ೧೨,೬೮೮ ಹೆಕ್ಟೆರ್ ವಿಸ್ತೀರ್ಣ ಹೊಂದಿದೆ. ಈ ಭಾಗದಲ್ಲಿ ಅಪರೂಪವಾಗಿ ಕೊಂಡುಕುರಿ ಕಂಡು ಬರುವುದು ವಿಶೇಷ ಜಗಲೂರು ತಾಲ್ಲೂಕಿನಲ್ಲಿ ಒಟ್ಟು ೧೭೧ ಗ್ರಾಮಗಳನ್ನು ಒಳಗೊಂಡ ಮೂರು ಹೋಬಳಿ ಕೇಂದ್ರಗಳಿವೆ, ೨೦೦೧ರ ಜನಗಣತಿಯ ಪ್ರಕಾರ ಜನಸಂಖ್ಯೆಯು ೧,೫೪,೮೨೯ ಇವೆ ಈ ರೀತಿಯ ಭೌಗೋಳಿಕ ಲಕ್ಷಣವನ್ನು ನೋಡಬಹುದು.[೩]

೨.೨ ಕಲ್ಲೇದೇವರಪುರದ ಸ್ಥಳನಾಮ

ಕಲ್ಲೇದೇವರಪುರವು ಒಂದು ಚಾರಿತ್ರಿಕ ನೋಟ ಅಂದರೆ ಕಲ್ಲೇದೇವರಪುರವು ಬಯಲು ಸೀಮೆಯ ಪ್ರಮುಖ ಊರು. ಕಲ್ಲೇದೇವರಪುರವು ಪುರ ಎಂಬ ಪದದಿಂದ ಗುರುತಿಸಿಕೊಂಡಿದೆ. ಕಲ್ಲೇದೇವರಪುರವು ಜಗಲೂರು ತಾಲ್ಲೂಕಿನಲ್ಲಿ ಪ್ರಸಿದ್ಧವಾದ ದಕ್ಷಿಣಾ ಕಾಶಿಯ ಕ್ಷೇತ್ರನಾಥ ಶ್ರೀ ಕಲ್ಲಿನಾಥಸ್ವಾಮಿಯ ನಾಮಾಂಕಿತದಿಂದ ಕಲ್ಲೇದೇವರಪುರ ಎಂಬುದಾಗಿ ಹೆಸರು ಬಂದಿದೆ. ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳ ವಾಸ್ತುಶಿಲ್ಪಗಳಿಂದ ಕೂಡಿದ ಕಲ್ಲಿನಾಥನ ದೇಗುಲವಾಗಿದೆ.

ಜಗಲೂರು ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಶ್ರೇಣಿಯ ಪ್ರತಿರೂಪವಾಗಿ ಗುರುತಿಸಿಕೊಂಡಿರುವ ಕಲ್ಲೇದೇವರಪುರದ ಕಲ್ಲಿನಾಥ ಅಥವಾ ಕಲ್ಲೇಶ್ವರ ಸ್ವಾಮಿಯ ಈಗಿರುವ ದೇವಾಲಯವು ಹಿಂದೆ ಅಡವಿಯಾಗಿತ್ತು. ಕಲ್ಲಿನಾಥ ದೇವಾಲಯ ಇರುವ ಜಾಗದಲ್ಲೂ ಹಿಂದೆ ಅಲ್ಲಿ ನೀರಿನ ಒಂದು ಸಣ್ಣ ಹಳ್ಳ ಇತ್ತು. ಅಲ್ಲಿ ಸೀಮೆಜಾಲಿ ಗಿಡಗಳು ಇದ್ದವು ಎಂದು ಈ ಊರಿನ ಹಿರಿಯರು ಹೇಳುತ್ತಾರೆ. ಆಗ ಒಬ್ಬ ಮಲ್ಲಶೆಟ್ಟಿ ಎಂಬ ವ್ಯಾಪಾರಿಯು ಈ ಸ್ಥಳದಲ್ಲಿ ಹಸಿವಿನಿಂದ ಬಳಲಿ ಅಡುಗೆ ಸಿದ್ಧಪಡಿಸಲು ಅಲ್ಲಿದ್ದ ದುಂಡಾದ ಕಲ್ಲಿನ ಜೊತೆಗೆ ಇನ್ನೆರಡು ಕಲ್ಲನ್ನು ಇಟ್ಟು ಒಲೆಯನ್ನಾಗಿ ಮಾಡಿ ಅಕ್ಕಿಯನ್ನು ತೊಳೆದು ಒಲೆಯ ಮೇಲೆ ಇಟ್ಟಾಗ ಕುದಿಯುವ ಮಡಿಕೆಯಲ್ಲಿ ಹಾಗೂ ಉದ್ಭವವಾದ ಕಲ್ಲಿನಿಂದ ರಕ್ತ ಬರಲು ಶುರುವಾದಾಗ

ಇದನ್ನು ಕಂಡ ವ್ಯಾಪಾರಿ ಗಾಬರಿಗೊಂಡು ಭಯ ಭಕ್ತಿಯಿಂದ ಶಿವಾ ಶಿವಾ ಎಂದು ಶಿವನಾಮ ಸ್ಮರಣೆ ಮಾಡಿದಾಗ ಒಬ್ಬ ಹುಡುಗನ ವೇಶದಲ್ಲಿ ಶ್ರೀ ಕಲ್ಲಿನಾಥ ಅಥವಾ ಕಲ್ಲೇಶ್ವರನು ಅವತರಿಸಿ, ಭಕ್ತ ಒಲೆಯ ಗುಂಡಾಗಿ ಬಳಸಿದ ಗುಂಡಕಲ್ಲನ್ನು ಶ್ರೀ ಕಲ್ಲೇಶ್ವರ ಸ್ವಾಮಿಯೇ ಕಲ್ಲಿನಾಥನಾಗಿ ಉದ್ಭವಿಸಲಿ! ಭಕ್ತಾ! ನಿನಗೆ ಮಂಗಳವಾಗಲಿ! ಎಂಬುದಾಗಿ ಆಶೀರ್ವದಿಸಿದಾಗ ವ್ಯಾಪಾರಿಯು ಮನದಲ್ಲೇ ಭಕ್ತಿಭಾವದಿಂದ ನಮಸ್ಕರಿಸಿದನು. ಹಾಗೂ ಸ್ವಯಂ ಪ್ರೇರಿತನಾಗಿ ಕಲ್ಲೇಶ್ವರನಿಗೆ ಚಿಕ್ಕ ಗುಡಿಯನ್ನು ನಿರ್ಮಿಸಿದನೆಂಬುದು ಸ್ಥಳೀಯ ಐತಿಹ್ಯವಿದೆ. ಹೀಗೆ ನಿರ್ಮಿಸಿರುವ ಕಲ್ಲಿನಾಥನ ದೇವಾಲಯದ ಪವಾಡ ಹಾಗೂ ಆಚರಣೆಗಳ ಹಿನ್ನೆಲೆಯಲ್ಲಿ ಆ ಪುರವೇ ಕಾಲಾಂತರದಲ್ಲಿ ಕಲ್ಲೇದೇವರಪುರವೆಂಬುದಾಗಿ ಹೆಸರು ಪಡೆದುಕೊಂಡಿರುವುದನ್ನು ಗಮನಿಸಬಹುದು.

ಪುರ ಎಂಬ ಪದವು ಹಳ್ಳಿ ಅಥವಾ ಊರಿಗಿಂತ ಗಾತ್ರದಲ್ಲಿ ದೊಡ್ಡದು. ಆದ್ದರಿಂದ ಪುರ, ಪಟ್ಟಣವೆಂದು ಕರೆಯುತ್ತಾರೆ. ಉದಾ: ಕಲ್ಲೇದೇವರಪುರ, ಹನುಮಂತಾಪುರ. ರಂಗಾಪುರ ಮುಂತಾದವುಗಳು ಒಂದು ಚಾರಿತ್ರಿಕ ನೋಟವು ಅಷ್ಟೇ ಉತ್ಕೃಷ್ಟವಾದ ಐತಿಹಾಸಿಕ ಸ್ಥಳವಾಗಿ ಮನ್ನಣೆಯನ್ನು ಗಳಿಸಿವೆ. ಈ ಊರಿನ ಬೆಳವಣಿಗೆಗೆ ಕಲ್ಲೇಶ್ವರನ ಕೃಪೆಯೇ ಕಾರಣವೆಂಬುದು ಸ್ಥಳೀಯರ ಅಭಿಪ್ರಾಯ. ಈ ಕಲ್ಲೇದೇವರಪುರದ ಪರಿಸರದ ಐತಿಹಾಸಿಕ ಚಿತ್ರಣದಿಂದ ಈ ಪರಿಸರದ ರಾಜಕೀಯ ಇತಿಹಾಸವು ಸಹ ಬೆಳವಣಿಗೆಯನ್ನು ಹೊಂದಿದೆ ಎಂಬುದನ್ನು ಈ ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೨.೩. ಪ್ರಾಗೈತಿಹಾಸ

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಹಂತ ಅಥವಾ ಪ್ರಾಗೈತಿಹಾಸ ಅಥವಾ ಪೂರ್ವ ಇತಿಹಾಸ ಎರಡನೆಯದು ಅಕ್ಷರ ಜ್ಞಾನವಿದ್ದ ಹಂತ ಅಥವಾ ರಾಜ ಮಹಾರಾಜರ ಕಾಲ ಅಥವಾ ಇತಿಹಾಸ ಕಾಲವೆಂದೂ ಹೇಳಬಹುದು. ಇವುಗಳಲ್ಲಿ ಪ್ರಾಗಿತಿಹಾಸದ ಕಾಲಮಾನ ಸುದೀರ್ಘವಾದುದುದಾಗಿದೆ. ಸುಮಾರು ಐದು ಲಕ್ಷ ವರ್ಷಗಳಿಂದ ಕ್ರಿಸ್ತಶಕದ ಆರಂಭದವರೆಗೂ ಅದು ರೂಢಿಯಲ್ಲಿದ್ದಿತೆಂದು ತಿಳಿಯುತ್ತದೆ. ಈ ಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುಗಳ ಆಧಾರದಿಂದ ಶಿಲಾಯುಗ ಸಂಸ್ಕೃತಿ ಮತ್ತು ಲೋಹ ಯುಗ ಸಂಸ್ಕೃತಿ ಎಂದು ಭಾಗಗಳನ್ನು ಮಾಡಲಾಗಿದೆ.

೧. ಹಳೆಯ ಶಿಲಾಯುಗ

೨. ಮಧ್ಯೆ ಶಿಲಾಯುಗ

೩. ನೂತನ ಶಿಲಾಯುಗ

೪. ಶಿಲಾ ತಾಮ್ರಯುಗ

೫. ಕಬ್ಬಿಣ ಯುಗ

೬. ಇತಿಹಾಸ ಆರಂಭ ಕಾಲ

ಚಿತ್ರದುರ್ಗದಿಂದ ತಾಲೂಕಿನ ಉತ್ತರಕ್ಕೆ ಹಾಗೂ ಜಗಳೂರು ತಾಲೂಕಿನ ಗಡಿಭಾಗದಲ್ಲಿರುವ ಸಂಗೇನಹಳ್ಳಿ ಕೆರೆಯು ಪ್ರಾಗಿತಿಹಾಸ ಕಾಲದ ಪ್ರಸಿದ್ಧ ನೆಲೆಯೆಂಬುದು ನಮ್ಮ ಹಿಂದಿನ ಸಂಶೋಧನೆಗಳಿಂದ ಈಗಾಗಲೇ ಪ್ರಕಟಿತವಾಗಿತ್ತು. ೧೯೯೬ರ ಅವಧಿಯಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಈ ನೆಲೆಯಲ್ಲಿ ಕಂಡುಬಂದ ಬೂದಿದಿಬ್ಬ, ಮಡಿಕೆ, ಕಲ್ಲಿನ ಕೊಡಲಿ ಮತ್ತಿತರ ಅವಶೇಷಗಳಿಂದ ಇದರ ಪ್ರಾಚೀನತೆಯನ್ನು ನವಶಿಲಾಯುಗದವರೆಗೆ ಗುರುತಿಸಲಾಗಿತ್ತು. ಆದರೆ ನವಶಿಲಾಯುಗಕ್ಕೂ ಪೂರ್ವದ ಯಾವುದೇ ಅವಶೇಷಗಳು ಅಂದು ಕಂಡುಬಂದಿರಲಿಲ್ಲ. ಆದರೆ ಇತ್ತೀಚೆಗೆ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ನವಶಿಲಾಯುಗಕ್ಕೂ ಪೂರ್ವದ ಅಂದರೆ ಮಧ್ಯ ಹಳೆಯ ಶಿಲಾಯುಗಕ್ಕೆ ಸೇರಿದ ಎರಡು ಕೈಗೊಡಲಿಗಳು ಪತ್ತೆಯಾಗಿವೆ. ಇದರಿಂದ ಸಂಗೇನಹಳ್ಳಿ ಕೆರೆಯ ನಡುಗಡ್ಡೆ ಹಾಗೂ ಸುತ್ತಮುತ್ತಲಿನ ಪರಿಸರವು ಹಳೆಯ ಶಿಲಾಯುಗದ ಮಾನವನ ವಾಸಕ್ಕೆ ಯೋಗ್ಯವಾದ ನೆಲೆಯಾಗಿತ್ತೆಂಬುದು ನಮ್ಮ ಈಗಿನ ಸಂಶೋಧನೆಯಿಂದ ದೃಢವಾದಂತಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಎರಡು ಸಂಗತಿಗಳನ್ನು ಪ್ರಮುಖವಾಗಿಟ್ಟುಕೊಂಡಿದೆ.

೧. ನವಶಿಲಾಯುಗದವರೆಗೆ ಇದ್ದ ಸಂಗೇನಹಳ್ಳಿಕೆರೆ ನೆಲೆಯ ಕಾಲವನ್ನು ಮಧ್ಯ ಹಳೆಯ ಶಿಲಾಯುಗದವರೆಗೆ ಕೊಂಡೊಯ್ಯುವುದು.

೨. ಈಗಾಗಲೇ ಶೋಧಿಸಲಾದ ಬಂಡೆಗಲ್ಲುಗಳ ಮೇಲೆ ಕುಟ್ಟಿ ಮೂಡಿಸಿದ ಚಿತ್ರಗಳ ತಾಂತ್ರಿಕತೆ ಮತ್ತು ವರ್ಣಚಿತ್ರದ ಪ್ರಭಾವವನ್ನು ಗುರುತಿಸುವುದಾಗಿದೆ.[೩]

ಸಂಗೇನಹಳ್ಳಿ ಗ್ರಾಮದ ದಕ್ಷಿಣಕ್ಕಿರುವ ಆಯಕಟ್ಟು ಜಾಗವನ್ನು ಬಳಸಿಕೊಂಡು ೧೯೬೦ರ ವೇಳೆಗೆ ಜನಗಿಹಳ್ಳಕ್ಕೆ ಅಡ್ಡಲಾಗಿ ಕೆರೆಯೊಂದನ್ನು ಕಟ್ಟಲಾಗಿದೆ. ಇದು ಈ ಭಾಗದ ಪ್ರಮುಖ ಕೆರೆಯಾಗಿದೆ. ಈ ಕೆರೆಯನ್ನು ಕಟ್ಟುವ ಪೂರ್ವದಲ್ಲಿ ಕೆರೆಯ ಮಧ್ಯದ ನಡುಗಡ್ಡೆಯು ಪ್ರಾಚೀನ ಮಾನವನ ಕಾಲದಿಂದ ಇಂದಿವರೆಗೆ ಜನವಸತಿ ಪ್ರದೇಶವಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಕಲ್ಲಿನ ಆಯುಧ, ಮಡಿಕೆ–ಕುಡಿಕೆ, ಬೂದಿದಿಬ್ಬ, ಕಟ್ಟಡದ ಅವಶೇಷಗಳು ಹಾಗೂ ವೀರಗಲ್ಲುಗಳನ್ನು ಇಂದಿಗೂ ಕಾಣಬಹುದು. ಈ ವಸತಿ ನೆಲೆಯನ್ನು ಹಿಂದೆ ಓಬಳಾಪುರವೆಂದು ಕರೆಯುತ್ತಿದ್ದರು. ಇಂದಿಗೂ ಅದೇ ಹೆಸರಿನಿಂದ ಹೆಸರಿಸಲಾಗಿದೆ.

ಈ ಓಬಳಾಪುರದ ನಡುಗಡ್ಡೆಯು ಇತ್ತೀಚಿನ ವಸತಿ ನೆಲೆ ಮಾತ್ರವಾಗಿರದೆ ಆದಿ ಕಾಲದಿಂದಲೂ ಮಾನವನ ಆವಾಸಸ್ಥಾನವಾಗಿತ್ತೆಂಬುದು ೧೯೯೬ ಹಾಗೂ ಇತ್ತೀಚೆಗೆ ಕೈಗೊಂಡ ಸಂಶೋಧನೆಗಳಿಂದ ದೃಢಪಟ್ಟಿದೆ. ೧೯೯೬ರಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಎತ್ತು, ಮನುಷ್ಯ, ಹಾವು ಮೊದಲಾದ ಕುಟ್ಟಿ ಮೂಡಿಸಿದ ಚಿತ್ರಗಳು ಕಂಡುಬಂದವು. ನಂತರ ಪ್ರೊ. ಲಕ್ಷ್ಮಣ್ ತೆಲಗಾವಿಯವರೊಂದಿಗೆ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಕಲ್ಲಿನ ಕೊಡಲಿ, ಬೂದಿದಿಬ್ಬ, ಮಡಿಕೆ–

ಕುಡಿಕೆಗಳು ಬೆಳಕಿಗೆ ಬಂದವು. ಈ ಎಲ್ಲ ಅವಶೇಷಗಳ ಹಿನ್ನೆಲೆಯಲ್ಲಿ ಈ ನೆಲೆಯ ಕಾಲವನ್ನು ಅಂದು ನವಶಿಲಾಯುಗದವರೆಗೆ ಕೊಂಡೊಯ್ಯಲಾಗಿತ್ತು. ಆದರೆ ಇತ್ತೀಚೆಗೆ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಮೇಲೆ ನಸುಗೆಂಪು ಬಣ್ಣದ ಡಾಲೋರೈಟ್ ಶಿಲೆಯಲ್ಲಿ ತಯಾರಿಸಲಾದ ಎರಡು ಕಲ್ಲಿನ ಕೊಡಲಿಗಳು ಕೆರೆಯ ಎಡದಂಡೆಯ ಮೇಲಿನ ಬಂಡೆಗಲ್ಲುಗಳ ಸಮೀಪ ದೊರೆತಿವೆ. ಅಲ್ಲದೆ ಈ ಬಂಡೆಗಲ್ಲು ಸಮೂಹದಲ್ಲೇ ನೂರಾರು ಕುಟ್ಟಿ ಮೂಡಿಸಿದ ಗೂಳಿ, ಹಾವು, ಮನುಷ್ಯ ಇನ್ನು ಮುಂತಾದ ಚಿತ್ರಗಳಿರುವುದು ಗಮನಾರ್ಹ.

ಡಾಲೊರೈಟ್ ಅಥವಾ ಉರುಟುಕಲ್ಲಿನ ನಸುಗೆಂಪು ಬಣ್ಣದ ಈ ಆಯುಧಗಳಲ್ಲಿ ಒಂದು ಆಯುಧವು ೯ ಸೆಂ.ಮೀ. ಅಗಲ ೧೦.೫ ಸೆಂ.ಮೀ. ಉದ್ದವಾಗಿದೆ. ಇನ್ನೊಂದು ಆಯುಧವು ೫ ಸೆಂ.ಮೀ. ಅಗಲ, ೧೧ ಸೆಂ.ಮೀ. ಉದ್ದವಿದೆ.[೪]

ಈ ಆಯುಧಗಳನ್ನು ತಯಾರಿಸಲು ಆದಿ ಹಳೇ ಶಿಲಾಯುಗದಲ್ಲಿ ಬಳಸುತ್ತಿದ್ದ ಕಲ್ಲಿನಿಂದ ಕಲ್ಲಿಗೆ ಹೊಡೆಯುವ ವಿಧಾನ, ಕಲ್ಲುಸುತ್ತಿಗೆ ವಿಧಾನ ಮತ್ತು ಲಘುಸುತ್ತಿಗೆ ವಿಧಾನಗಳ ಮೂಲಕ ಈ ಆಯುಧಗಳನ್ನು ತಯಾರಿಸಲಾಗಿದೆ. ಇವುಗಳನ್ನು ಪ್ರಾಣಿಗಳ ಬೇಟೆಗೆ, ನೆಲ ಅಗೆದು ಗೆಡ್ಡೆ-ಗೆಣಸುಗಳನ್ನು ತೆಗೆಯಲು ಹಾಗೂ ಮರದ ತೊಗಟೆಗಳನ್ನು ಬೇರ್ಪಡಿಸಲು ಹೆಚ್ಚಾಗಿ ಬಳಸಲಾಗುತ್ತಿತ್ತು.

ಕರ್ನಾಟಕದಲ್ಲಿ ಮಧ್ಯ ಹಳೆ ಶಿಲಾಯುಗದ ಕಾಲವನ್ನು ರಯೆಡಿಯೋ ಕಾರ್ಬನ್ ಕಾಲನಿರ್ಣಯ ವಿಧಾನದ ಮೂಲಕ ೪೦,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿರಬಹುದೆಂದು ವಿದ್ವಾಂಸರು ತರ್ಕಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಗೇನಹಳ್ಳಿಕೆರೆ ಪರಿಸರವು ೧೦,೦೦೦ ವರ್ಷಗಳಷ್ಟು ಹಿಂದೆ ಬಾಳಿದ ಮಧ್ಯ ಹಳೆ ಶಿಲಾಯುಗ ಮನುಷ್ಯನ ವಾಸದ ಸ್ಥಳವಾಗಿತ್ತೆಂಬುದು ಇಲ್ಲಿ ದೊರೆಯುತ್ತಿರುವ ಕೈಗೊಲಿಗಳಿಂದ ದೃಢವಾದಂತಾಗಿದೆ.[೫]

ಈ ಸ್ಥಳದ ಮತ್ತೊಂದು ವಿಶೇಷತೆಯೆಂದರೆ ಕೆರೆಯ ಎಡದಂಡೆಯ ಮೇಲೆ ನೂರಾರು ಕುಟ್ಟಿ ಮೂಡಿಸಿದ ಚಿತ್ರಗಳಿರುವುದು. ಇವುಗಳು ಹಿಂದಿನ ಮನುಷ್ಯನ ಶ್ರಮ ಮತ್ತು ಕಲೆಗಾರಿಕೆಯನ್ನು ಪ್ರತಿನಿಧಿಸುತ್ತವೆ. ಈ ಚಿತ್ರಗಳನ್ನು ಯಾವುದೇ ಕೊರೆಯುವ ಮೂಲಕ ರೇಖೆಗಳಿಂದ ರಚಿಸದೆ ಮೈತುಂಬಾ ಕುಟ್ಟಿದ ಚುಕ್ಕಿಗಳಿಂದ ಮೂಡಿಸಿರುವುದು. ಇದಕ್ಕೆ ಈ ಪೂರ್ವದಲ್ಲಿದ್ದ ಪ್ರಾಣಿ ದೇಹದ ತುಂಬಾ ಬಣ್ಣವನ್ನು ಹಚ್ಚುವ ಮೂಲಕ ಚಿತ್ರಗಳನ್ನು ರಚಿಸುತ್ತಿದ್ದುದರ ಪ್ರಭಾವ ಬಂಡೆಗಲ್ಲಿನ ಮೇಲೆ ಚಿತ್ರಿಸಲು ಪ್ರಾರಂಭಿಸಿದ ಚಿತ್ರಗಳ ಮೇಲೆ ಬೀರಿರುವುದನ್ನು ಗಮನಿಸಬಹುದು. ಇದರಿಂದ ಕುಟ್ಟಿ ಮೂಡಿಸಿದ ಚಿತ್ರಗಳು ಕೊರೆದ ಅಥವಾ ಗೀರಿನಿಂದ ಮಾಡಿದ ರೇಖಾಚಿತ್ರಗಳಿಗಿಂತ ಪ್ರಾಚೀನವೆಂಬುದನ್ನು ರೇಖಾಚಿತ್ರಗಳ ತಾಂತ್ರಿಕತೆ ಮತ್ತು ವರ್ಣಚಿತ್ರಗಳ ಸ್ವರೂಪಗಳಿಂದ ಸ್ಪಷ್ಟವಾಗುತ್ತದೆ. ಆದಿ ಮಾನವನಿಗೆ ರೇಖೆ, ಗೆರೆ, ಕುಟ್ಟಿ ಮೂಡಿಸಿದ ಚಿತ್ರಗಳಿಗೂ ಪೂರ್ವದಲ್ಲೇ ಬಣ್ಣದ ಬಳಕೆ ಇತ್ತು ಮತ್ತು ತನ್ನ ಅಭಿಪ್ರಾಯಗಳನ್ನು ಬಣ್ಣದ

ಮೂಲಕ ತೋರ್ಪಡಿಸುತ್ತಿದ್ದನು. ಬಣ್ಣದ ಚಿತ್ರಗಳಲ್ಲಿ ತಾನು ಬಿಡಿಸುವ ಚಿತ್ರದ ಮೈತುಂಬಾ ಬಣ್ಣ ತುಂಬುತ್ತಿದ್ದುದನ್ನು ಕಾಣುತ್ತೇವೆ. ಇದೇ ಬಗೆಯ ಚಿತ್ರಗಳನ್ನು ಬಂಡೆಗಲ್ಲಿನ ಮೇಲೆ ಮೂಡಿಸುವಾಗ ಪ್ರಾಣಿಯ ಮೈಯನ್ನು ರೇಖೆಗಳಲ್ಲಿ ಬಿಡಿಸದೆ ಅದರ ಮೈತುಂಬಾ ಕುಟ್ಟಿ ಮೂಡಿಸುವ ಪರಿಪಾಠವನ್ನು ರೂಢಿಸಿಕೊಂಡಿದ್ದಾನೆ. ಇದಕ್ಕೆ ಬಣ್ಣದ ನಂತರದ ಬೆಳವಣಿಗೆ ಕಾರಣವಾಗಿದೆ.

ಹೀಗೆ ಪ್ರಸ್ತುತ ಈ ಕೆರೆಯಲ್ಲಿ ಪ್ರಾಚೀನ ಕಾಲದಿಂದಲೂ ಮಾನವನ ವಾಸಯೋಗ್ಯ ಸ್ಥಳವಾಗುವಲ್ಲಿ ನೆರವಾಗಿದೆ ಎಂದರೆ ತಪ್ಪಾಗಲಾರದು.

ಶಿಲಾಯುಗ ಸಂಸ್ಕೃತಿ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನು ಅನುಸರಿಸಿ ಹಳೆಯ ಶಿಲಾಯುಗದ ಸಂಸ್ಕೃತಿ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿ ಮತ್ತು ನೂತನ ಶಿಲಾಯುಗದ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ. ಅಧ್ಯಯನದ ತೀವ್ರತೆ ಹಾಗೂ ಪ್ರತಿಯೊಂದು ಹಂತಗಳಲ್ಲಾದ ಬದಲಾವಣೆಗಳನ್ನು ಗುರುತಿಸಿ ಹೊಸ ಹೊಸ ವಿಷಯಗಳನ್ನು ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಹಳೆಯ ಶಿಲಾಯುಗವನ್ನು ಮೂರು ಉಪಗುಂಪುಗಳಾಗಿ ವಿಭಾಗಿಸಿ ಆದಿ ಹಳೆ ಶಿಲಾಯುಗ ಸಂಸ್ಕೃತಿ, ಮಧ್ಯ ಹಳೆ ಶಿಲಾಯುಗ ಸಂಸ್ಕೃತಿ ಮತ್ತು ಅಂತ್ಯ ಹಳೆ ಶಿಲಾಯುಗ ಸಂಸ್ಕೃತಿ ಎಂದು ವಿಭಾಗಿಸಲಾಗಿದೆ.

ಲೋಹಯುಗ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯೂ ಇದ್ದುದು ತಿಳಿಯುತ್ತದೆ. ಹಾಗಾಗಿ ಮೊದಲ ಹಂತವನ್ನು ತಾಮ್ರದ ಶಿಲಾಯುಗ ಸಂಸ್ಕೃತಿ ಎಂದು, ನಂತರದ ಹಂತದಲ್ಲಿ ಕಬ್ಬಿಣವನ್ನು ಎಲ್ಲಾ ಕಾರ್ಯಗಳಿಗೂ ಬಳಸುವುದರ ಜೊತೆಗೆ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ರೂಪಿಸಿದ್ದು, ಈ ಹಂತದಲ್ಲಿ ಕಬ್ಬಿಣ ಶಿಲಾಯುಗದ ಬೃಹತ್ ಗಾತ್ರದ ಕಲ್ಲುಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ರೂಪಿಸಿದ್ದು ಈ ಹಂತವನ್ನು ಕಬ್ಬಿಣ ಶಿಲಾಯುಗದ ಬೃಹತ್ ಶಿಲಾಗೋರಿ ಸಂಸ್ಕೃತಿ ಎಂದು ಕರೆಯಲಾಗಿದೆ. ದಾವಣಗೆರೆ ಜಿಲ್ಲೆ ಹಾಗೂ ಜಗಲೂರು ತಾಲ್ಲೂಕಿನಲ್ಲಿಯೂ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ಗುಹೇಶ್ವರ ಬೆಟ್ಟ, ಸಂಗೇನಹಳ್ಳಿ ಕೆರೆ ಹಾಗೂ ಆಕನೂರುಗಳಲ್ಲಿ ಪತ್ತೆಯಾಗಿವೆ.[೬]

ಜಗಲೂರು ತಾಲ್ಲೂಕಿನ ಇತಿಹಾಸವನ್ನು ಮಾನವನ ಜೀವನ ವಿಕಾಸ ಕ್ರಮದಿಂದಲೇ ಗುರುತಿಸಬಹುದು. ಇಲ್ಲಿನ ಶಿಲಾಯುಗದ ನಿವೇಶನಗಳು, ಆಯುಧ ಉಪಕರಣಗಳು, ಗುಹೆ, ನದಿ ಬೆಟ್ಟಗುಡ್ಡಗಳಲ್ಲಿ ಮಾನವ ಸಂಚರಿಸಿದ ಬಗ್ಗೆ ಮಾಹಿತಿಗಳು ದೊರೆಕುತ್ತವೆ.

ಇತಿಹಾಸ ಕಾಲ

ಈ ಪ್ರದೇಶದಲ್ಲಿ ಮೌರ್ಯರು, ಶಾತವಾಹನ, ಕದಂಬ, ಗಂಗರು, ಪಲ್ಲವರು, ಉಚ್ಚಂಗಿ ಪಾಂಡ್ಯರು, ಚಾಲುಕ್ಯರು, ಹೊಯ್ಸಳ, ರಾಷ್ಟ್ರಕೂಟ, ಕುಮ್ಮಟದುರ್ಗದ ನಾಯಕರು, ವಿಜಯನಗರದ

ಅರಸರು, ಪಾಳೆಗಾರರು ಆಳ್ವಿಕೆ ನಡೆಸಿದ್ದಾರೆ. ಆದ್ದರಿಂದ ಜಗಲೂರಿಗೆ ಬಹುಪುರಾತನ ಇತಿಹಾಸವಿದೆ ಎಂದು ನಮಗೆ ತಿಳಿದು ಬರುತ್ತದೆ. ಈ ರಾಜವಂಶಸ್ಥರು ಜಗಲೂರಿನಲ್ಲಿ ಆಳ್ವಿಕೆ ಮಾಡಿದ್ದರು ಎಂದು ಇಲ್ಲಿ ದೊರೆತಿರುವ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ.

ಭಾರತದ ಇತಿಹಾಸದಲ್ಲಿ ಪ್ರಾಗಿತಿಹಾಸವನ್ನು ಇದುವರೆಗೂ ಗಮನಿಸಿದ ನಂತರ ಸಾಂಸ್ಕೃತಿಕ ವಿಕಾಸದಿಂದ ಲಿಪಿಯ ಬಳಕೆ ಬಂದ ಹಂತವನ್ನು ಇತಿಹಾಸ ಆರಂಭಕಾಲವೆಂದು ಗಮನಿಸಬಹುದು. ಈ ಹಂತಕ್ಕೆ ಅಡಿಪಾಯ ಹಾಕಿರವರೆಂದರೆ ಮೌರ್ಯರು, ಇವರು ಕ್ರಿಪೂ. ೩ ರಿಂದ ೨ನೇ ಶತಮಾನದವರೆಗೆ ಆಳ್ವಿಕೆ ನಡೆಸಿದರು ಹಾಗೂ ಈ ಕಾಲವಧಿಯಲ್ಲಿ ಕರ್ನಾಟಕದಲ್ಲಿ ಶಾಸನಗಳನ್ನು ಹಾಕಿಸಿದರು. ಈವರೆಗೆ ಬ್ರಹ್ಮಗಿರಿ, ಸಿದ್ದಾಪುರ, ಜಟಂಗಿ ರಾಮೇಶ್ವರ ಹಾಗೂ ಉಳಿದ ಜಿಲ್ಲೆಗಳಲ್ಲಿ ಶಾಸನಗಳು ಬೆಳಕಿಗೆ ಬಂದಿವೆ.

೨.೩.೧ ರಾಜಕೀಯ ಇತಿಹಾಸ

ಮೌರ್ಯರು

ಕರ್ನಾಟಕದಲ್ಲಿ ಇತಿಹಾಸಯುಗ ಆರಂಭವಾಗುವುದೇ ಮೌರ್ಯರ ಕಾಲದಿಂದ ಇವರು ಉತ್ತರ ಭಾರತದಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದರು. ಅಲ್ಲಿ ಹೆಚ್ಚಾಗಿ ಶಾಸನಗಳು ಖರೋಷ್ಠಿ ಲಿಪಿಯಲ್ಲಿ ರಚಿತಗೊಂಡಿವೆ. ಅಲ್ಲಿ ಮಾತ್ರವಲ್ಲದೇ ಮೌರ್ಯರ ಅರಸರು ಕರ್ನಾಟಕದಲ್ಲಿನ ಬ್ರಹ್ಮಗಿರಿ, ಸಿದ್ಧಾಪುರ, ಜಟಂಗಿ ರಾಮೇಶ್ವರ, ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದಯಗೋಳಂ, ಕೊಪ್ಪಳ ಜಿಲ್ಲೆಯ ಗವಿಮಠ, ಪಾಲ್ಕಿಗುಂಡು ಹಾಗೂ ರಾಯಚೂರು ಜಿಲ್ಲೆಯ ಮಸ್ಕಿ ಇನ್ನಿತರ ಪ್ರದೇಶಗಳಲ್ಲಿ ಶಾಸನಗಳನ್ನು ಹಾಕಿಸಿದ್ದಾರೆ. ಇವುಗಳು ಕರ್ನಾಟಕದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿನ ಶಾಸನಗಳು ಮೌರ್ಯರ ಗಡಿ ಭಾಗಗಳನ್ನು ಗುರುತಿಸುತ್ತವೆ. ಈ ಹಿನ್ನೆಲೆಯಲ್ಲಿ ನಾವು ಅಶೋಕನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಮೌರ್ಯ ಸಾಮ್ರಾಜ್ಯದ ಗಡಿ ವಿಸ್ತರಣೆಯಾಯಿತು ಎಂಬುದನ್ನು ಗಮನಿಸಬಹುದು. ಆದರೆ ಬಿಂದುಸಾರನ ಕಾಲದಲ್ಲಿ ಕುಂತಲವು ಅಶೋಕ ಆಳ್ವಿಕೆಗೆ ಮೊದಲೇ ಸೇರಿತ್ತು. ಅಶೋಕನ ತನ್ನ ಸಾಮ್ರಾಜ್ಯದ ದಕ್ಷಿಣದಲ್ಲಿ ಸ್ನೇಹ ಬಾಂಧ್ಯವ್ಯ ಹೊಂದಿದ್ದನು. ಈ ಪ್ರದೇಶವು ಮಾತ್ರವಲ್ಲದೇ ಜಗಲೂರು ತಾಲ್ಲೂಕಿನ ಅಸಗೋಡು ಹಿಂದೆ ಅಶೋಕನ ಕಾಲದ ಪಟ್ಟಣವಾಗಿತ್ತೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ.[೭]

ಶಾತವಾಹನರು

ಮೌರ್ಯರೊಂದಿಗೆ ಹಾಗೂ ಅವರ ಪತನಾದನಂತರ ದಖ್ಖನ್‌ದಲ್ಲಿ ವಿಶಾಲವೂ ಪ್ರಬಲವಾದ ರಾಜ್ಯವನ್ನು ಸ್ಥಾಪಿಸಿ ಬೆಳೆಸಿದವರು ಶಾತವಾಹನರು, ಇವರನ್ನು ಆಂಧ್ರ ವಂಶದವರು ಅಥವಾ ಆಂಧ್ರ ಭೃತ್ಯರೆಂದು ಕರೆಯುವುದುಂಟು. ನಾಲ್ಕುವರೆ ಶತಮಾನಗಳಷ್ಟು ದೀರ್ಘಕಾಲ ಆಳಿದ ಇವರು ಇಂದಿನ ನಾಸಿಕ್‌ನ ಸುತ್ತಮುತ್ತ ಆಳ್ವಿಕೆಯನ್ನು ಆರಂಭಿಸಿದರು. ಮಹಾರಾಷ್ಟ್ರದ

ಔರಂಗ್‌ಬಾದ್ ಜಿಲ್ಲೆಯಲ್ಲಿರುವ ಪೈತಾನ್‌ನ್ನು ಇವರ ರಾಜಧಾನಿಯಾಗಿ ಮಾಡಿಕೊಳ್ಳಲಾಗಿತ್ತು. ಇವರ ರಾಜ್ಯ ಪೂರ್ಣಾಭಿಮುಖವಾಗಿ ವಿಸ್ತಾರವಾಗುತ್ತಾ ಕೃಷ್ಣ ಮತ್ತು ಗೋದಾವರಿ ನದಿಗಳ ಮುಖಜ ಭೂಮಿಯವರೆಗೂ ಹಬ್ಬಿತ್ತು. ಮೊದಲಿಗೆ ಇವರು ಮೌರ್ಯರ ಸಾಮಂತರಾಗಿದ್ದು ಅವರ ಪತನಾನಂತರ ಸ್ವಾತಂತ್ರ್ಯರಾದರು. ಗೌತಮಿಪುತ್ರ ಶಾತಕರ್ಣಿ, ವಾಸಿಷ್ಠಪುತ್ರ ಪುಲಮಾಯಿ ಮುಂತಾದ ಈ ವಂಶದ ಹೆಸರುಗಳನ್ನು ಗಮನಿಸಿದರೆ ಮಾತೃ ಪ್ರಧಾನವಾದ ಕುಲದೇವರೆಂದು ತಿಳಿಯುತ್ತದೆ. ಇವರು ಹಲವಾರು ಯಜ್ಞ-ಯಾಗಾದಿಗಳನ್ನು ಆಚರಿಸಿದರು. ಶಾತವಾಹನರು ಪ್ರಬಲರಾದಂತೆ ಶಕರು ಪ್ರಹ್ಲರು ಮತ್ತು ಯವ್ವನರನ್ನು ಹತ್ತಿತ್ತಿದರು. ದಖ್ಖನನ್ನು ಒಳಗೊಂಡಂತೆ ಆಂದ್ರ, ಕರ್ನಾಟಕ, ಉತ್ತರ ಭಾಗಗಳನ್ನು ಇವರು ಕ್ರಿಪೂ. ೨೩೫ ರಿಂದ ಕ್ರಿಶ. ೧೧೫ ರವರೆಗೆ ಆಳಿದರು. ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಅವಶೇಷಗಳು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಹಾಗೂ ಬ್ರಹ್ಮಗಿರಿ, ಚಿಪ್ಪಿನಕೆರೆಯಲ್ಲಿ ಈ ಕಾಲಘಟ್ಟಕ್ಕೆ ಸೇರುವ ಅನೇಕ ಅವಶೇಷಗಳು ಕಾಣಿಸಿವೆ. ಅವುಗಳಲ್ಲಿ ಮುಖ್ಯವಾಗಿ ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆಗಳು, ಸೀಸದ ನಾಣ್ಯಗಳು, ಶಾತವಾಹನರ ಸಮಕಾಲೀನ ರೋಮನ್ ನಾಣ್ಯಗಳು, ರೌಲೆಟೆಡ್ ಮೃತ್ಪಾತ್ರೆಗಳು ಮುಖ್ಯವಾಗಿವೆ. ಬ್ರಹ್ಮಗಿರಿಯಲ್ಲಿ ಚೈತ್ಯಾಲಯ ರೀತಿಯ ಗಜಪೃಷ್ಠಾಕಾರದ ಇಟ್ಟಿಗೆ ಕಟ್ಟಡ ದೊರೆತಿರುವುದು ಗಮನಿಸಬೇಕಾದ ಅಂಶವಾಗಿದೆ. ಈ ಭಾಗದಲ್ಲಿ ಹೆಚ್ಚಿನ ಸಂಶೋಧನೆಗಳನ್ನು ನಡೆಸಿದ ಡಾ. ಎಂ.ಎಚ್. ಕೃಷ್ಣ, ಸರ್ ಮಾರ್ಟಿಮರ್ ವೀಲರ್ ಹಾಗೂ ಇನ್ನಿತರರು ಈ ಪ್ರದೇಶವು ಶಾತವಾಹನರ ಪ್ರಮುಖ ನೆಲೆಯಾಗಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.[೮]

ಬನವಾಸಿಯ ಕದಂಬರು (ಕ್ರಿಶ. ೩೪೫-ಕ್ರಿಶ. ೫೪೦)

ಕರ್ನಾಟಕದ ಇತಿಹಾಸ ನಂದ-ಮೌರ್ಯರ ಆಳ್ವಿಕೆಯಿಂದ ಪ್ರಾರಂಭವಾಗುವುದಾದರೆ, ಕದಂಬರ ಆಳ್ವಿಕೆಯಲ್ಲಿ ಇಲ್ಲಿನ ಸಂಸ್ಕೃತಿ ನಿರ್ದಿಷ್ಟ ರೂಪವನ್ನು ಪಡೆದುಕೊಂಡಿತು. ಇವರೇ ಕನ್ನಡ ನಾಡನ್ನು ಆಳಿದ ಮೊದಲ ಅರಸು ಮನೆತನ ಕದಂಬ ರಾಜ್ಯವು ಉತ್ತರ ಕನ್ನಡ, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಒಳಗೊಂಡಿತ್ತು. ಕದಂಬರಾಜ್ಯವನ್ನು ಬನವಾಸಿ ೧೨೦೦೦ ನಾಡೆಂದು ಕರೆಯುತ್ತಾರೆ. ಸಿಂಹ ಲಾಂಛನ ಮತ್ತು ಪಂಚಧ್ವಜ ಇವರದಾಗಿತ್ತು. ಜಗಲೂರು ತಾಲ್ಲೂಕಿನಲ್ಲಿ ಇದರ ಕುರುಹುಗಳು ದೊರೆತಿಲ್ಲ.[೯]

ಆದರೆ ಬದಿಯ ಚಿತ್ರದುರ್ಗ ಜಿಲ್ಲೆಯಲ್ಲಿ ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಅನೇಕ ಕುರುಹುಗಳು ಕಾಣಿಸುತ್ತವೆ. ಅವುಗಳಲ್ಲಿ ಚಂದ್ರವಳ್ಳಿಯಲ್ಲಿ ದೊರೆತ ಶಾಸನ ಹಾಗೂ ಇಲ್ಲಿಯೇ ಬದಿಯಲ್ಲಿ ಸಿಕ್ಕರುವ ಶಿವಲಿಂಗ ಮತ್ತು ಹಾಯ್ಕಲ್ಲಿನಲ್ಲಿ ದೊರೆತ ವಿಷ್ಣುಶಿಲ್ಪ, ಚಂದ್ರವಳ್ಳಿಯಲ್ಲಿ ಮಯೂರಶರ್ಮ ಇಲ್ಲಿ ಶಾಸನ ಹಾಕಿಸಿರುವುದನ್ನು ಗಮನಿಸಿದರೆ ಪ್ರಾಯಶಃ ಈ ಭಾಗ ಅವರ ಆಡಳಿತದ ಆರಂಭ ಕಾಲದಿಂದಲೇ ಪ್ರಮುಖ ಸ್ಥಳವಾಗಿರಬೇಕು ಹಾಗೂ ಇಲ್ಲಿನ ಶಿವಲಿಂಗವನ್ನು ಗಮನಿಸಿ ಡಾ. ಅ. ಸುಂದರರವರು ಪ್ರಾಯಶಃ ಈ ಶಿವಲಿಂಗವು ಗುಡಿ ಇದ್ದಿರುವ ಸಾಧ್ಯತೆಯುಂಟು ಎನ್ನುವರು. ಅಂದರೆ ಮಯೂರವರ್ಮನ ಕಾಲದಲ್ಲಿ ಇಲ್ಲಿ

ದೇವಾಲಯ ನಿರ್ಮಾಣವಾಗಿದ್ದಿರಬೇಕು ಹಾಗೆಯೇ ಹಾಯ್ಕಲ್ಲಿನಲ್ಲಿ ಶಿಲ್ಪಗಳು ದೊರೆತಿರುವವು. ಈ ಎಲ್ಲಾ ಬೆಳವಣಿಗೆಯನ್ನು ಗಮನಿಸಿದರೆ ಪ್ರಾಯಶಃ ಈ ಕಾಲಘಟ್ಟಕ್ಕೆ ಸೇರಿದ ಈ ಪ್ರದೇಶದೊಂದಿಗೆ ಜಗಲೂರು ಪ್ರದೇಶವು ಸೇರಿರಬೇಕು.

ಬಾದಾಮಿ ಚಾಲುಕ್ಯರು (ಕ್ರಿ.ಶ. ೫೦೦–೫೫೭)

ಕರ್ನಾಟಕ ಇತಿಹಾಸದಲ್ಲಿ ಬಾದಾಮಿ ಚಾಲುಕ್ಯರ ಏಳಿಗೆ ಹೊಸ ಯುಗಕ್ಕೆ ನಾಂದಿಯನ್ನು ಹಾಡಿತು, ದಕ್ಷಿಣ ಭಾರತದಲ್ಲಿ ಮೊದಲಿಗೆ ಏಕ ಸಾಮ್ರಾಜ್ಯವನ್ನು ಸ್ಥಾಪಿಸಿದವರು. ಇವರು ಕ್ರಿ.ಶ. ೬ನೇಯ ಶತಮಾನದಲ್ಲೇ ಪ್ರಬುದ್ಧಮಾನಕ್ಕೆ ಬಂದ ಚಾಲುಕ್ಯರು ಕರ್ನಾಟಕ ಸಂಸ್ಕೃತಿಯ ಉತ್ಕರ್ಷಕ್ಕೆ ಕಾರಣವಾದರು. ಬಿಜಾಪುರ ಜಿಲ್ಲೆಯಲ್ಲಿರುವ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇನ್ನೂರು ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವಾಳಿದರು. ಆದರೆ ಇದೇ ಜಿಲ್ಲೆಯ ಹರಿಹರದ ಹರಿಹರೇಶ್ವರ ದೇವಾಲಯ ಇವರ ಕಾಲದಲ್ಲೇ ನಿರ್ಮಾಣವಾದದ್ದೆಂದು ಅಲ್ಲಿ ದೊರೆತಿರುವ ಶಾಸನಗಳು ತಿಳಿಸುತ್ತವೆ. ಉಚ್ಚಂಗಿದುರ್ಗದಲ್ಲಿ ಇವರ ಕಾಲಕ್ಕೆ ಸೇರಿರುವ ಸಾಕಷ್ಟು ಅವೇಷಗಳು ದೊರೆತಿರುವುದರಿಂದ ಈ ಪ್ರದೇಶವು ಇವರ ಆಳ್ವಿಕೆಗೆ ಸೇರಿರಬೇಕು ಎಂದು ತಿಳಿದುಬರುತ್ತದೆ.

ನೊಳಂಬರು ಕ್ರಿ.ಶ. ೭೫೦–೧೦೫೫

ಸ್ವಾತಂತ್ರ್ಯ ರಾಜಮನೆತನಗಳಾದ ಶಾತವಾಹನ, ಕದಂಬ, ಗಂಗ, ಪಲ್ಲವ, ರಾಷ್ಟ್ರಕೂಟ, ಚಾಲುಕ್ಯ, ಚೋಳ, ಹೊಯ್ಸಳ ಸಾಮ್ರಾಟರು, ಚಿತ್ರದುರ್ಗ–ದಾವಣಗೆರೆ ಜಿಲ್ಲೆಯಲ್ಲಿ ವೈಭವದಿಂದ ಆಳ್ವಿಕೆ ನಡೆಸಿದಂತೆ ಅನೇಕ ಸಾಮಂತ ರಾಜರು ಮಹಾಮಂಡಲೇಶ್ವರರು, ಪಾಳೆಯಗಾರರು, ಆಳ್ವಿಕೆ ನಡೆಸಿರುವರು. ಇವರು ಆಳುತ್ತಿದ್ದ ಪ್ರದೇಶಕ್ಕೆ ನೊಳಂಬವಾಡಿ ಅಥವಾ ನೊಳಂಬವಾಡ ೩೨,೦೦೦ ನಾಡು–ಎಂದು ಹೆಸರಿತ್ತು. ನೊಳಂಬರಿಗೆ ಸಂಬಂಧಿಸಿದ ಆಧಾರಗಳು ನಮಗೆ ದಾವಣಗೆರೆ ಜಿಲ್ಲೆಯಲ್ಲಿ ಹೇರಳವಾಗಿ ದೊರೆತಿವೆ. ನೊಳಂಬರಿಗೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ಅತ್ಯಂತ ಪ್ರಾಚೀನ ಶಿಲಾಶಾಸನವು ಅಣಜಿಯ ಗುಡ್ಡಪ್ಪ ಹೊಲದಲ್ಲಿ ದೊರೆತಿದೆ. ಇವರ ಕಾಲವು ಕ್ರಿ.ಶ. ೪೫೦ ಆಗಿದೆ. ಇದರಲ್ಲಿ ಪಲ್ಲವ ಅರಸನಾದ ಕೃಷ್ಣವರ್ಮರಾಜನ ಸೈನ್ಯವನ್ನು ಪರಾಭವಗೊಳಿಸಿದನೆಂದು ಉಲ್ಲೇಖವಾಗಿದೆ.

ಜಗಲೂರು ತಾಲ್ಲೂಕಿನ ಮುಸ್ಟೂರಿನಲ್ಲಿರುವ ಕಲ್ಲೇಶ್ವರ ದೇವಾಲಯದ ಕ್ರಿ.ಶ. ೯೨೦ರ ಶಾಸನವು ನೊಳಂಬಡಿವಾಡಿರಾಜ ಅಯ್ಯಪ್ಪದೇವ ನೊಳಂಬವಾಡಿ ಮತ್ತಿತರ ನಾಡುಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ. ೮೧೫ರ ಕಾಲಕ್ಕೆ ಸಂಬಂಧಿಸಿದ ಚಿಕ್ಕಮಧುರೆ ಮಲ್ಲೇಶ್ವರ ದೇವಾಲಯದಲ್ಲಿರುವ ಸ್ತಂಭ ಶಾಸನ ಸುಗಪೋತನಯುವ ಪರಮೇಶ್ವರ ಪಲ್ಲವಾದಿರಾಜ ಮತ್ತು ಅವನ ಮಗ ಪಲ್ಲವಮಲ್ಲ ಇವರು ರಾಷ್ಟ್ರಕೂಟರ ಸಾಮಂತರಾಗಿ ಕೆಲವು ನಾಡುಗಳಲ್ಲಿ ಆಡಳಿತ ನಡೆಸುತ್ತಿದ್ದರೆಂದು ತಿಳಿಸುತ್ತದೆ. ದಾವಣಗೆರೆ ಜಿಲ್ಲೆಯಲ್ಲಿ ಇವರಿಗೆ ಸೇರಿದ ಸಾಕಷ್ಟು ಶಾಸನಗಳು ದೊರೆತಿವೆ.[೧೦]

ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಅವಸಾನಗೊಂಡು ಕಲ್ಯಾಣದ ಚಾಲುಕ್ಯರು ಪ್ರಾಬಲ್ಯ ಹೊಂದಿದ್ದರಿಂದ ನೊಳಂಬರು ಕಲ್ಯಾಣಿ ಚಾಲುಕ್ಯರ ಆಶ್ರಯ ಪಡೆದು ಅವರ ಸಾಮಂತರಾಗಿ ತಮ್ಮ ಪ್ರಭುತ್ವವನ್ನು ಮುಂದುವರೆಸಿದರು. ಸಿದ್ದಾಪುರದ ರಾಮಚಂದ್ರೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೦೨೨ರ ಶಾಸನವು ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾಡಿಯ ಕಲ್ಯಾಣದ ಚಾಲುಕ್ಯರ ದೊರೆ ನಿಟ್ಟೂರು ಕಲ್ಲೇಶ್ವರ ದೇವಾಲಯದ ಕ್ರಿ.ಶ. ೧೦೩೫ರ ಶಾಸನವು ಪಲ್ಲವ ಕುಲಾಭರಣ ಉದಯಾದಿತ್ಯ ದೇವನೊಳಂಬ ಪಲ್ಲವ ಪೆರ್ಮಾಡಿದೇವ ಚಾಲುಕ್ಯ ಜಯಸಿಂಹದೇವನ ಸಾಮಂತನಾಗಿ ಆಳುತ್ತಿದ್ದನೆಂದು ಹೇಳುವುದು. ಕಂಪ್ಲಿಯ ಕ್ರಿ.ಶ. ೧೦೩೩ರ ಶಾಸನವು ಮತ್ತು ಅವರಗೆರೆಯ ಕ್ರಿ.ಶ. ೧೦೪೨ರ ಶಾಸನ ಜಗದೇಕಮಲ್ಲ ಇಮ್ಮಡಿ ನೊಳಂಬ ಪಲ್ಲವ ಪೆರ್ಮಾಡಿಯು ಹಲವು ಪ್ರಾಂತ್ಯಗಳನ್ನು ಅಪಾರ ಸಂಪತ್ತಿನೊಂದಿಗೆ ವಿವೇಕದಿಂದ ಶಾಂತಚಿತ್ತನಾಗಿ ಅಗತ್ಯ ಸೈನ್ಯದ ನೆರವಿನೊಂದಿಗೆ ಚಾಲುಕ್ಯ ಜಗದೇಕಮಲ್ಲದೇವನ ಮಹಾಸಾಮಂತನಾಗಿ ಆಳುತ್ತಿದ್ದನೆಂದು ತಿಳಿಸುವುದು ಕ್ರಿ.ಶ. ೧೦೪೨ರ ಹದಡಿ ಈಶ್ವರ ದೇವಾಲಯದ ಮತ್ತು ಕ್ರಿ.ಶ. ೧೦೪೨ರ ವಡ್ಡರಹಳ್ಳಿ ಶಾಸನಗಳು ತ್ರೈಲೋಕ್ಯಮಲ್ಲನನ್ನು ನೊಳಂಬ ಪಲ್ಲವನು ಹಲವು ಪ್ರಾಂತ್ಯಗಳನ್ನು ವೈಭವದಿಂದ ಆಳುತ್ತಿದ್ದನೆಂದು ಹೇಳುವವು ಮೊದಲನೇ ಶಾಸನವು ಪ್ರಧಾನ ಪಲ್ಲವ ಕುಲಾಭರಣ ಬ್ರಹ್ಮಧಿರಾಜನಿಂದ ರಚಿತವಾದದು ಎಂದು ತಿಳಿದುಬರುವುದು. ಎರಡನೇಯ ಶಾಸನದಲ್ಲಿ ನೊಳಂಬ ತ್ರೈಲೋಕ್ಯಮಲ್ಲನ ಸಾಮಂತನಾಗಿ ಬೆಳುವನೂರಿನಲ್ಲಿ ಆಳುತ್ತಿದ್ದ ಅತ್ಯಾತ್ರರಿಗೆ ದಾನ ಮಾಡುತ್ತಿದ್ದನೆಂದು ಉಲ್ಲೇಖವಾಗಿದೆ. ಕ್ರಿ.ಶ. ೧೦೫೪ರ ಅಸಗೋಡ ಶಂಭುಲಿಂಗ ದೇವಾಲಯದ ಶಾಸನದಲ್ಲಿ ಪಲ್ಲವನ್ವಯ ಪಲ್ಲವ ಕುಲ ವೈಭವ ನರಸಿಂಗ ದೇವನು ಚಾಲುಕ್ಯ ತ್ರೈಲೋಕದೇವನ ಪಾದ ಕಮಲಗಳಲ್ಲಿ ಆಶ್ರಯ ಪಡೆದು ಆನೇಕ ಪ್ರಾಂತ್ಯಗಳನ್ನು ವೈಭವದಿಂದ ಆಳುತ್ತಿದ್ದನೆಂದು ಉಲ್ಲೇಖವಾಗಿದೆ. ಜಗಲೂರು ಪ್ರದೇಶವು ನೊಳಂಬರ ನೇರ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು[೧೦] ಎಂದು ನಾವು ನಿಸ್ಸಂದೇಹವಾಗಿ ಹೇಳಬಹುದು. ದಾವಣಗೆರೆ, ಚಿತ್ರದುರ್ಗ, ಜಿಲ್ಲೆದುರ್ಗ, ಜಿಲ್ಲೆಗಳಲ್ಲಿ ಹಲವು ಶತಮಾನಗಳವರೆಗೆ ವೈಭವದಿಂದ ಆಳಿದ ನೊಳಂಬರು ಕರ್ನಾಟಕದ ಸಾಮಾಂತ ರಾಜ ಮನೆತನಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ.

ಮಾನ್ಯಖೇಟದ ರಾಷ್ಟ್ರಕೂಟರು (ಕ್ರಿ.ಶ. ೭೩೭-೯೭೨)

ರಾಷ್ಟ್ರಕೂಟರು ಏಳಿಗೆ ಇಂದು ಕಣ್ಮರೆಯಾದದ್ದು ಕರ್ನಾಟಕದ ಇತಿಹಾಸದಲ್ಲಿ ವೈಭವ ಪೂರ್ಣವಾದ ಪ್ರಕರಣ ಚಾಲುಕ್ಯರ ನಂತರ ಕ್ರಿ.ಶ. ೭೫೭ ರಲ್ಲಿ ಇವರು ಎರಡು ಶತಮಾನಗಳಿಗೂ ಹೆಚ್ಚು ಕಾಲ ಆಳಿದರು. ಇವರ ಸಾಮ್ರಾಜ್ಯ ಮಹಾರಾಷ್ಟ್ರ ಕರ್ನಾಟಕವನ್ನು ಸಮಗ್ರವಾಗಿ ಗುಜರಾತ್, ಮಧ್ಯಪ್ರದೇಶ, ಹಾಗೂ ಆಂದ್ರಪ್ರದೇಶಗಳ ಕೆಲ ಭಾಗಗಳನ್ನು ಒಳಗೊಂಡಿತ್ತು. ಚಾಲುಕ್ಯರು ಆರಂಭಿಸಿದ ಸಾಂಸ್ಕೃತಿಕ ಪರಂಪರೆಯನ್ನು ಇವರು ಮುಂದುವರೆಸಿದರೆ ಧ್ರುವ, ಮೂರನೇ ಗೋವಿಂದ, ಅಮೋಘವರ್ಷ, ಮೂರನೇ ಕೃಷ್ಣ ಈ ವಂಶದ ಪ್ರಖ್ಯಾತ ಅರಸರು,

ಕ್ರಿ.ಶ. ೮೧೪ ರಲ್ಲಿ ಕರ್ನಾಟಕದ ಸಿಂಹಾಸನವನ್ನೇರಿದ ಅಮೋಘವರ್ಷನು ಕೇವಲ ಹದಿಮೂರು ಅಥವಾ ಹದಿನಾಲ್ಕು ವರುಷಗಳ ಕಿರಿಯ ಬಾಲಕನಾಗಿದ್ದ ಎಂದು ತಿಳಿಸುತ್ತದೆ. ಆದರೂ ಇವನು ಹೆಚ್ಚು ಪ್ರಖ್ಯಾತನಾಗಿರುವುದು, 'ಅಮೋಘವರ್ಷ' ಮತ್ತು 'ನೃಪತುಂಗ' ನಂದೇ ಅತಿಶಯನಧವಳ, ಶ್ರೀವಲ್ಲಭ, ವೀರನಾರಾಯಣ ಎನ್ನುವ ಬಿರುದುಗಳನ್ನು ಧರಿಸಿದ್ದನು. ಇವನ ಆಳ್ವಿಕೆಗೆ ಸಂಬಂಧಿಸಿದ ಶಾಸನಗಳು ಇವನ ಕಾಲದ ದೇವಾಲಯಗಳು ಬಿಳಿಚೋಡು ಗ್ರಾಮದಲ್ಲಿದೆ. ಇವರ ಆಳ್ವಿಕೆಗೆ ಸಂಬಂಧಿಸಿದ ಶಿಲ್ಪಗಳು, ವೀರಗಲ್ಲುಗಳು ದೊರೆತಿವೆ. ಹಾಗಾಗಿ ಈ ಪ್ರದೇಶವು ಇವರ ಆಳ್ವಿಕೆಗೆ ಒಳಪಟ್ಟಿತು ಎಂದು ಹೇಳಬಹುದು.[೧೨]

ಕಲ್ಯಾಣದ ಚಾಲುಕ್ಯರು (ಕ್ರಿ.ಶ. ೯೭೩-೧೨೦೦)

ರಾಷ್ಟ್ರಕೂಟರು ಆಳ್ವಿಕೆಯನ್ನು ಕ್ರಿ.ಶ. ೯೭೩ರಲ್ಲಿ ಕೊನೆಗಾಣಿಸಿದ ಇಮ್ಮಡಿ ತೈಲ ಅಥವಾ ತೈಲಪನು ಕಲ್ಯಾಣದ ಚಾಲುಕ್ಯರ ವಂಶವನ್ನು ಸ್ಥಾಪಿಸಿದ ಇವರ ಸಾಮ್ರಾಜ್ಯ ಮುಂದೆ ಎರಡು ಶತಮಾನಗಳ ಕಾಲ ಕರ್ನಾಟಕದ ಸಂಸ್ಕೃತಿಯನ್ನು ಸಮೃದ್ಧವಾಗಿ ಬೆಳೆಸಿ ಮುಂದುವರೆಸಿತು. ಈ ವಂಶದ ಪ್ರಖ್ಯಾತ ಅರಸರಾದ ಇಮ್ಮಡಿ ತೈಲಪ, ಸತ್ಯಾಶ್ರಯ, ಒಂದನೇ ಸೋಮೇಶ್ವರ, ಆರನೇ ವಿಕ್ರಮಾದಿತ್ಯರು ಸಾಮ್ರಾಜ್ಯ ವಿಸ್ತರಣಾಕಾಂಕ್ಷೆಗಳು ಮಾತ್ರವೇ ಅಲ್ಲದೇ ಕಲೆ, ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ಧಾರ್ಮಿಕ ಪ್ರಗತಿಯ ದೃಷ್ಟಿಯಿಂದ ಇವರದ್ದು ಮಹತ್ವದ ಕಾಲ. ಕ್ರಿ.ಶ. ೯೭೩ರಲ್ಲಿ ಸೋಲಿಸಿ ಮಾನ್ಯಖೇಟವನ್ನು ಆಕ್ರಮಿಸಿದ ಇಮ್ಮಡಿ ತೈಲಪನು 'ಸತ್ಯಾಶ್ರಯ ತಿಲಕ' ಅಹವಮಲ್ಲ ರಾಮ ಮುಂತಾದ ಬಿರುದುಗಳನ್ನು ಹೊಂದಿದ್ದನು.[೧೩]

ಕಲ್ಯಾಣದ ಚಾಲುಕ್ಯರ ಪ್ರಸಿದ್ಧವಾದ ದೊರೆ ಆರನೇ ವಿಕ್ರಮಾದಿತ್ಯ ಅಥವಾ ವಿಕ್ರಮಾಂಕ. ಇವನು ಪಟ್ಟಾಭಿಷೇಕನಾದ ನೆನಪಿಗೆ ತನ್ನ ಹೆಸರಿನಲ್ಲಿ ಒಂದು ಕಾಲಗಣನೆಯನ್ನು ಆರಂಭಿಸಿದ ಇದೇ ಚಾಲುಕ್ಯ ವಿಕ್ರಮ ಶಕ ಇವನು ಕ್ರಿ.ಶ. ೧೦೭೭ರ ಫೆಬ್ರವರಿ ೨೬ ರಂದು ಸಿಂಹಾಸನಾರೂಢನಾದ ಇವನ ಖ್ಯಾತಿ ಎಲ್ಲೆಡೆಯೂ ಹಬ್ಬಿತ್ತು. ಇವನ ಅಸ್ಥಾನ ಕವಿಯೂ ಕಾಶ್ಮೀರದ ಪಂಡಿತನಾಗಿದ್ದ ಬಿಲ್ಹಣನು ಬರೆದ ಐತಿಹಾಸಿಕ ಕಾವ್ಯವಾದ ವಿಕ್ರಮಾಂಕದೇವ ಚರಿತ್ರೆ ಇವನ ಸಾಧನೆಯ ವಿವರವನ್ನು ನೀಡುತ್ತದೆ. ಜಗಲೂರು ತಾಲ್ಲೂಕಿನ ಅಸಗೋಡು ಗ್ರಾಮದಲ್ಲಿ ಇವನ ಕಾಲದ ಶಾಸನ ದೊರೆತಿರುವುದರಿಂದ ಈ ಪ್ರದೇಶ ಇವನ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು. ಮಹಾಸಾಮಂತನಾದ ಸುಧರಸನೊಳಂಬವಾಡಿ ೩,೬೦೦ ಈ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದನು. ಆಗ ಅಸಗೋಡಿನ ಶ್ರೀಸ್ವಯಂಭೂದೇವರಿಗೆ ದತ್ತಿ ನೀಡಿದ ವಿವರಣೆ ಇದೆ.

ಅದೇ ರೀತಿ ಕಲ್ಯಾಣದ ನೇರ ಆಡಳಿತಕ್ಕೆ ಈ ಪ್ರದೇಶವು ಒಳಪಟ್ಟಿತ್ತು ಎಂಬುದಕ್ಕೆ ಬಿಳಿಚೋಡು ಈಶ್ವರ ದೇವಾಲಯದ ಮುಂದಿನ ಶಾಸನಗಳು ಸಹ ಪುಷ್ಟಿ ನೀಡುತ್ತದೆ.

ಸೇವುಣರ ಆಳ್ವಿಕೆ (ಕ್ರಿ.ಶ. ೯೦೦-೧೨೩೯)

ದಾವಣಗೆರೆ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಕದಂಬ ಚಾಲುಕ್ಯ ರಾಷ್ಟ್ರಕೂಟ ಮನೆತನಗಳಂತೆಯೇ ದೇವಗಿರಿಯ ಸೇವುಣರೂ ಕೆಲವು ಕಾಲ ಇಲ್ಲಿ ತಮ್ಮ ಆಳ್ವಿಕೆ ನಡೆಸಿದರು. ತಮ್ಮ ಆಳ್ವಿಕೆಯ ಅವಧಿಯಲ್ಲಿ ಇತರ ರಾಜಮನೆತನಗಳೊಂದಿಗೆ ಅವರು ಇಟ್ಟುಕೊಂಡಿದ್ದ ಸಂಬಂಧ ಇತ್ಯಾದಿಗಳು ಇವರ ಶಾಸನಗಳಿಂದ ತಿಳಿದು ಬರುತ್ತದೆ.

ದೇವಗಿರಿಯ ಸೇವುಣರನ್ನು ಕುರಿತು ಶಾಸನಗಳು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಇವರ ಶಾಸನಗಳು ಸುಮಾರು ೩೦ ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಜಗಲೂರು, ಹೊಳಲ್ಕೆರೆ ತಾಲ್ಲೂಕುಗಳಲ್ಲೂ ಅವರ ಶಾಸನಗಳು ದೊರೆತಿರುವುದರಿಂದ ಈ ಜಿಲ್ಲೆಯ ಕೆಲವು ಭಾಗಗಳು ಅವರ ಅಧೀನಕ್ಕೊಳಪಟ್ಟಿದ್ದವೆಂಬುದು ಸ್ಪಷ್ಟಪಡಿಸುತ್ತದೆ.

ದಾವಣಗೆರೆ ಜಿಲ್ಲೆ ಬೇತೂರು ಗ್ರಾಮದ ಸಿದ್ಧೇಶ್ವರ ದೇವಾಲಯ ಬಳಿ ಇರುವ ಶಾಸನದಲ್ಲಿ ಪಾಂಡ್ಯ ದೇಶದ ಬೇತೂರನ್ನು ವರ್ಣಿಸಿದೆ. ಈ ಬೇತೂರು ಹೆಮ್ಮತ ಬೆತೂರಿನಿಂದ ಬಿನ್ನವೆಂಬುದು ಸ್ಪಷ್ಟ. ಇಲ್ಲಿ ವ್ಯಕ್ತವಾಗಿರುವ ಪಾಂಡ್ಯ ಉಚ್ಚಂಗಿಯಾಳುತ್ತಿದ್ದ ಸಾಮಂತ ಮನೆತನವನ್ನು ನಿರ್ದೇಶಿಸುತ್ತದೆ. ಈ ಪ್ರದೇಶವನ್ನು ಪಾಲಿಸುತ್ತಿದ್ದ ಕೊಜರಾಜ ತನ್ನ ಪತ್ನಿ ಮರಣ ಹೊಂದಿದಳು ಅವಳ ಸ್ಮರಣಾರ್ಥ ಲಕ್ಷ್ಮೀ ಜಿನಾಲಯವನ್ನು ಕಟ್ಟಿಸಿದ.[೧೪]

ಕ್ರಿ.ಶ. ೧೨೭೯ರ ಶಾಸನವು ಕಲ್ಲೇದೇವರಪುರದ ಅರಸನನ್ನು ಸೈನ್ಯ ಸುಮಾರು ಸುವರ್ಧನ ಸಕ್ಕ ಸಮಯ ಸಮುದ್ಧರಣ ಸರ್ಬಾಗಮ ಸಾರ್ಮಭೌಮ, ಚೌಟುನಾಟಕ, ಗೀತ ವಾದ್ಯ, ನೃತ್ಯಾದಿ ಚತುಸಿಷ್ಠಿ, ಕೂಪ್ರವೀಣ, ಚೇರ ಚೋಳ, ನಂದ, ದುರುಚಾರ ಧೌಶೀಚಿಯ ದಿಕ್ಕುಂಜರ ಮಾಹಕ ಧೂರ್ತ, ಧೂಮಕೇತು, ಚಿಕ್ಕ ಕಟ್ಟಚಲನ ಹೊಂನಬಂಕ, ಬಸವರಾಜ ಬೋಜಾದಿ, ಮತ್ಸ್ಯಲೋಕದ ಮಹಾಗಣಾಚಾರ ಇತ್ಯಾದಿ ಬಿರುದುಗಳಿಂದ ವರ್ಣಿಸಿದೆ. ಈ ರೀತಿಯಾಗಿ ಜಗಲೂರು ತಾಲ್ಲೂಕು ಸೇವುಣರ ನೇರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು ಎಂದು ತಿಳಿಯುತ್ತದೆ.

ಹೊಯ್ಸಳರು (ಕ್ರಿ.ಶ. ೧೦೦೫-೧೧೩೯)

ಕಲ್ಯಾಣದ ಚಾಲುಕ್ಯರು ಪತನದ ಹಾದಿಯಲ್ಲಿದ್ದಾಗ ಹೊಯ್ಸಳರು ಏಳಿಗೆ ಹೊಂದಿದ್ದರು. ಕ್ರಿ.ಶ. ೧೩೦೦ ರವರೆಗೂ ವೈಭವಯುತವಾಗಿ ಕರ್ನಾಟಕದ ದಕ್ಷಿಣ ಭಾಗ ಮತ್ತು ತಮಿಳುನಾಡಿನ ಉತ್ತರಭಾಗವನ್ನು ಆಳಿದರು. ಇವರು ಯಾದವ ವಂಶಕ್ಕೆ ಸೇರಿದ್ದವರಾದ್ದರಿಂದ ಯಾದವರೆಂದು ಹೇಳಿಕೊಂಡಿದ್ದಾರೆ. ನೃಪಕಾಮ ಕ್ರಿ.ಶ. ೧೦೦೦-೧೦೪೫ ಹೊಯ್ಸಳರ ಮೊದಲ ಅರಸ ಕಾಮ ಇವನನ್ನು ನೃಪಕಾಮನೆಂದು ಕರೆಯಲಾಗಿದೆ. ಇವನೇ ಸಳನಾಗಿರಬೇಕು ಅಥವಾ ಇವನು ಸಳನ ಮಗನೇ ಆಗಿರಬಹುದು ಎಂದು ಕವಿವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೧೫]

ಕಾಮನ ನಂತರ ಅವನ ಮಗ ವಿನಯಾದಿತ್ಯ ಕ್ರಿ.ಶ. ೧೦೪೫-೧೦೯೮ ರವರೆಗೆ ಹೊಯ್ಸಳರ ಅರಸನಾಗಿ ನಂತರ ಅವನ ಮಗ ಎರೆಯಂಗ ನಂತರ ಅವನ ಹಿರಿಯ ಮಗ

ಒಂದನೇ ಬಲ್ಲಾಳನು ಅಧಿಕಾರ ನಡೆಸಿದನು. ಹೊಯ್ಸಳರ ಹಿರಿಮೆ–ಗರಿಮೆಗಳನ್ನು ಎಲ್ಲೆಡೆಯೂ ಹರಸಿದ ಉನ್ನತ ವ್ಯಕ್ತಿ ವಿಷ್ಣುವರ್ಧನ ಇವನು 'ತಲಕಾಡು ಕೊಣ್ಡ' 'ನೊಳಂಬವಾಡಿಗೊಂಡ' ಎಂಬ ಮುಂತಾದ ಬಿರುದುಗಳನ್ನು ಧರಿಸಿದ್ದ, ಜಗಲೂರಿನಲ್ಲಿ ಹೊಯ್ಸಳರಿಗೆ ಸಂಬಂಧಪಟ್ಟ ಯಾವುದೇ ಕುರುಹುಗಳು ದೊರೆತಿಲ್ಲ ಆದರೂ ಚಿತ್ರದುರ್ಗ ದಾವಣಗೆರೆ, ಬಳ್ಳಾರಿ ಜಿಲ್ಲೆಗಳಲ್ಲಿ ದೊರೆತಿರುವುದರಿಂದ ಪಕ್ಕದಲ್ಲೇ ಇರುವ ಜಗಲೂರು ಸಹ ಇವರ ಆಡಳಿತಕ್ಕೆ ಒಳಪಟ್ಟಿತ್ತು.

ವಿಜಯನಗರ ಸಾಮ್ರಾಜ್ಯ (ಕ್ರಿ.ಶ. ೧೩೩೬–೧೬೪೫)

ಹದಿನಾಲ್ಕನೇ ಶತಮಾನದ ಎರಡನೇ ಪಾದದಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಹೊಸ ಮನ್ವಂತರಕ್ಕೆ ನಾಂದಿಯನ್ನು ಹಾಡಿತು ಅತ್ಯಂತ ಪ್ರಕ್ಷಬ್ಧ ಪರಿಸ್ಥಿತಿಯಲ್ಲಿ ಅಸ್ತಿತ್ವಕ್ಕೆ ಬಂದ ಈ ಸಾಮ್ರಾಜ್ಯವು ದಕ್ಷಿಣ ಭಾರತದ ಒಂದು ಪ್ರಮುಖ ರಾಜ್ಯವಾಗಿ ರೂಪಗೊಂಡಿತ್ತು. ಅದಕ್ಕೆ ಕಾರಣವೆಂದರೆ ಬಹುಮನಿ ರಾಜ್ಯ ಮಾತ್ರ ವಿಜಯನಗರ ಸಾಮ್ರಾಜ್ಯದ ಪ್ರಬಲ ಪೈಪೋಟಿ ಆಗಿತ್ತು. ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ವಂಶಗಳು ಆಳಿವೆ. ಅವುಗಳೇ ಅವನತಿಯ ಸಂದರ್ಭದಲ್ಲಿ ಅಳಿಯ ರಾಮರಾಯನು ಆಳ್ವಿಕೆ ಮಾಡುತ್ತಿದ್ದನು. ಸಂಗಮ, ಸಾಳುವ, ತುಳವ ಮತ್ತು ಅರವೀಡು ಸಾಮ್ರಾಜ್ಯದ ಕೊನೆಯ ವರ್ಷಗಳಲ್ಲಿ ಅರವೀಡು ವಂಶದ ಅಳಿಯ ರಾಯರಾಯ ಅಧಿಕಾರ ಪಡೆದಿದ್ದ.

ಜಗಲೂರು ತಾಲ್ಲೂಕು ವಿಜಯನಗರದ ಪ್ರಸಿದ್ಧ ಅರಸನಾದ ಕೃಷ್ಣದೇವರಾಯನ ಆಳ್ವಿಕೆಗೆ ಇದು ಒಳಪಟ್ಟಿತ್ತು ಎಂದು ನಾವು ಇಲ್ಲಿ ಸಿಗುವ ಶಾಸನಗಳಿಂದ ತಿಳಿಯಬಹುದು. ಕೊಡದಗುಡ್ಡದ ಒಂದು ಶಾಸನವು ಕ್ರಿ.ಶ. ೧೫೨೩ ಇವನ ಆಳ್ವಿಕೆಯ ಕಾಲ ಅವನ ಸಾಮಂತ ಭದ್ರದೇವ ಒಡೆಯರು ಈ ಶಾಸನದಲ್ಲಿ ಕೊಡದಗುಡ್ಡದ ವೀರಭದ್ರ ಹೊನ್ನನ್ನು ದಾನ ಮಾಡಿದ ವಿವರವನ್ನು ಕಾಣಬಹುದು. ಅದೇ ರೀತಿ ಬಿಳಿಚೋಡ ಗ್ರಾಮವು ಸಹ ಕೃಷ್ಣದೇವರಾಯನ ನೇರ ಆಡಳಿತಕ್ಕೆ ಒಳಪಟ್ಟಿದ್ದು ಆ ಗ್ರಾಮದ ರಾಮೇಶ್ವರ ದೇವಾಲಗಳ ಬಾಗಿಲಿನ ಪೂರ್ವ ಕಡೆ ನೆಟ್ಟ ಕಲ್ಲಿನಿಂದ ಸ್ಪಷ್ಟವಾಗುತ್ತದೆ.[೧೬] ಬಿಳಿಚೋಡು ಗ್ರಾಮ ದಾನ ಕೊಟ್ಟ ವಿವರವನ್ನು ಈ ಶಾಸನದಲ್ಲಿ ಕಾಣಬಹುದು. ಅದೇ ರೀತಿ ಅದೇ ಗ್ರಾಮದ ಶಾಸನದಲ್ಲಿ ಕೃಷ್ಣದೇವರಾಯನ ಅಧಿಕಾರಿಯಾದ ದಮ್ಮಪ್ಪನಾಯಕನು ಬಿಳಿಚೋಡು ಸೀಮೆಯಲ್ಲಿ ಹಿರಿಯ ಮೇಲಿನ ತೆರಿಗೆ ವಜಾಗೊಳಿಸಿದ ವಿವರ ಇದೆ ಮತ್ತೊಂದು ಹಾಗೂ ಬಿಳಚೋಡು ರಾಮದೇವರಿಗೆ ಬೇಲೂರು ರಾಮಪ್ಪನಾಯಕರು ಸ್ತಾನಿಕ ಮಹದೇವಪ್ಪ ದಾನ ಮಾಡಿದ್ದಾರೆ. ಕೊನೆಯಲ್ಲಿ ಶಾಪಾಶಯವಿದೆ. ಈ ರೀತಿಯಾಗಿ ಬಿಳಿಚೋಡು ಗ್ರಾಮವು ಕೃಷ್ಣದೇವರಾಯನ ನೇರ ಆಡಳಿತಕ್ಕೆ ಒಳಪಟ್ಟ ಗ್ರಾಮವಾಗಿತ್ತೆಂದು ತಿಳಿಯಬಹುದು. ಕ್ರಿ.ಶ. ೧೫೨೬ರ ನಿಬಗೂರು ಶಾಸನವು ತಿಳಿಸುವಂತೆ ಕಲ್ಲೇದೇವರಪುರದ ಅಧಿಪತಿಯಾದ ಕಲ್ಲೇಶ್ವರ ಸನ್ನಿಧಿಯಾಗಿತ್ತು ಎಂದು ತಿಳಿಸುತ್ತದೆ. ಈ ಕಾಲಕ್ಕೆ ಸೇರಿದ ದೇವಾಲಯಗಳು ಮತ್ತು ಶಿಲ್ಪಗಳು ಸಹ ಅಂದಿನ ಕಾಲದಲ್ಲಿ ನಿರ್ಮಾಣವಾದವೆಂದು ತಿಳಿಸುತ್ತವೆ.

ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆ (ಕ್ರಿ.ಶ. ೧೫೬೫–೧೭೭೯)

ವಿಜಯನಗರದ ಪತನದ ನಂತರ ಕರ್ನಾಟಕದಲ್ಲಿ ಪ್ರಬಲರಾದ ಪಾಳೆಯಗಾರರು ವಿಜಯನಗರದ ಅರಸರು ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿ ಅದಕ್ಕೆ ಸೇರಿದ ನಾನಾ ಭಾಗಗಳ ಮೇಲೆ ತಾವೇ ನೇರವಾಗಿ ಆಳ್ವಿಕೆ ನಡೆಸುವುದು ಕಷ್ಟವೆಂದೂ ಕಂಡು ಬಂದಾಗ ಆಯಾ ಪ್ರದೇಶಗಳ ಆಡಳಿತ ಉಸ್ತುವಾರಿ ನೋಡಿಕೊಳ್ಳಲು, ಕಂದಾಯ ವಸೂಲಿ ಮಾಡಲು, ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಲು ಯುದ್ಧ ಸಮಯದಲ್ಲಿ ಸಹಾಯ ಮಾಡಲು ಇವೆ ಮೊದಲಾದ ಉದ್ದೇಶಗಳಿಗಾಗಿ ಕೆಲವು ಬಲಿಷ್ಠ ಹಾಗೂ ಪ್ರಬಲ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಈ ಸಾಮಂತ ಅಧಿಕಾರಿಗಳೇ ಕ್ರಮೇಣ ಪಾಳೆಯಗಾರರು ಮುಂದೆ ಇವರು ಸ್ವತಂತ್ರರೆಂದು ಘೋಷಿಸಿಕೊಂಡರು.

ಈ ಪ್ರದೇಶದ ಪಾಳೆಗಾರರ ಇತಿಹಾಸ ನೋಡಿದಾಗ ಪ್ರಮುಖವಾಗಿ ಇಲ್ಲಿ ಎರಡು ವಂಶದ ಪಾಳೆಯಗಾರರು ಆಳ್ವಿಕೆ ಮಾಡಿರುವುದನ್ನು ನೋಡಬಹುದು. ಅವರೆಂದರೆ ಚಿತ್ರದುರ್ಗದ ಪಾಳೆಯಗಾರರು ಮತ್ತು ಬೇಲೂರು ಪಾಳೆಯಗಾರರು ಇವರುಗಳಲ್ಲಿ ಪ್ರಮುಖವಾಗಿ ಚಿತ್ರದುರ್ಗದ ಪಾಳೆಯಗಾರರ ಇತಿಹಾಸವನ್ನು ಗಮನಿಸಬಹುದು.

ಚಿತ್ರದುರ್ಗ ಪಾಳೆಯಗಾರರು ಈ ಜಿಲ್ಲೆಯಲ್ಲಿ ಸುಮಾರು ೨೧೧ ವರ್ಷಗಳ ಕಾಲ ಆಳ್ವಿಕೆ ನಡೆಸಿದರು ಇವರು ವಾಲ್ಮೀಕಿ ಮತಸ್ಥರು ಕಾಮಗೇತಿ ವಂಶಜರು ಆಗಿದ್ದು ಕಸ್ತೂರಿ ಎಂಬ ಅಭಿದಾನವನ್ನು 'ಶ್ರೀ ಮನ್‌ನಾಯಕಾಚಾರ್ಯ' ಎಂಬ ಬಿರುದನ್ನು ಧರಿಸಿಕೊಂಡಿದ್ದರು.[೧೨] ಈ ಮನೆತನದಲ್ಲಿ ಮುಖ್ಯವೆನಿಸಿದ ೧೪ ಜನ ಪಾಳೆಗಾರರು ಚಿತ್ರದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಆಳ್ವಿಕೆ ಮಾಡಿಕೊಂಡು ನಡೆಸಿದರು. ಇವರು ಇತಿಹಾಸದಲ್ಲಿ ಮದಕರಿ ನಾಯಕನು ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ.

ಈ ಪಾಳೆಗಾರರ ಮೂಲ ಪುರುಷ ಚಿತ್ರ ನಾಯಕನೆಂತಲೂ ದೆಹಲಿಯ ಸುತ್ತಾನರ ಬಳಿ ವಜೀರರನಾಗಿದ್ದನೆಂತಲೂ, ಆನೆ ಪಳಗಿಸಿದ ವೀರನಾಗಿದ್ದರಿಂದ 'ಮದಕರಿನಾಯಕ' ನೆಂಬ ಬಿರುದು ಪಡೆದಿದ್ದನೆಂತಲೂ, ಇವನ ವಂಶಸ್ಥರೆಲ್ಲರೂ ಮದಕರಿ ನಾಯಕರೆಂಬ ಅಭಿದಾನವನ್ನು ಪಡೆಯುವುದಕ್ಕೆ ಇದೇ ಜಡಕಲ್ಲು ಕೆರೆಮಲೆ ರಾಮದುರ್ಗಗಳಲ್ಲಿ ನೆಲೆಸಿದ್ದು ಅನಂತರ ಚಿತ್ರದುರ್ಗಕ್ಕೆ ಬಂದರೆಂದು ತಿಳಿದು ಬರುತ್ತದೆ. ಆದರೆ ಈ ವಂಶದ ಮೊದಲನೆಯ ದೊರೆ ಮತ್ತಿ ತಿಮ್ಮಣ್ಣ ನಾಯಕನ ಕಾಲದಿಂದ ಶಾಸನಗಳು ದೊರೆಯುವುದರಿಂದ ಖಚಿತ ಇತಿಹಾಸ ರಚನಾಕಾರ್ಯ ಇವನ ಕಾಲದಿಂದ ಪ್ರಾರಂಭಿಸಬೇಕಾಗುತ್ತದೆ. ಜಗಲೂರು ತಾಲ್ಲೂಕು ಈ ಪಾಳೆಯಗಾರರ ನೇರ ಆಡಳಿತಕ್ಕೆ ಒಳಪಟ್ಟಿತು ಎಂದು ನಾವು ತಿಳಿದುಕೊಳ್ಳಬಹುದು.

ಈ ರೀತಿಯಾಗಿ ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೇ ಜನವಾಸವಾಗಿದ್ದರ ಬಗ್ಗೆ ತಿಳಿದುಬರುತ್ತದೆ. ಹಾಗೆಯೇ ಇತಿಹಾಸಕಾಲದಲ್ಲಿ ಮೌರ್ಯ,

ಶಾತವಾಹನ, ಕದಂಬರ ಬಗ್ಗೆ ಪ್ರತ್ಯೇಕ್ಷವಾಗಿ ಆಧಾರಗಳು ದೊರೆತಿಲ್ಲವಾದರೂ ಅವರ ಆಳ್ವಿಕೆಗೆ ಈ ಪ್ರದೇಶ ಆಳ್ವಿಕೆಗೆ ಒಳಪಟ್ಟಿರಬೇಕು ನಂತರ ನೊಳಂಬ ರಾಷ್ಟ್ರಕೂಟ ಕಲ್ಯಾಣರ ಚಾಲುಕ್ಯ ಸೇವುಣ ವಿಜಯನಗರದ ಅರಸರು ಹಾಗೂ ಚಿತ್ರದುರ್ಗ ಪಾಳೆಯಗಾರರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವರು.

ಹೈದರಾಲಿ ಟಿಪ್ಪುಸುಲ್ತಾನರು ಈ ಪ್ರದೇಶದ ಮೇಲೆ ದಂಡೆತ್ತಿ ಬಂದಿದ್ದರು ಕಣ್ವಕುಪ್ಪೆ ಕೋಟೆಗೆ ಮುತ್ತಿಗೆ ಹಾಕಿ ೧೧ ದಿನ ಯುದ್ಧವಾಗಿ ಒಪ್ಪಂದ ನಡೆಯಿತು. ಕೋಟೆಯ ಮೇಲಿನ ಫಿರಂಗಿ ಹಾಗೂ ಕಬ್ಬಿಣ ವಾಸ್ತುಗನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸಿದನು. ಕ್ರಿ.ಶ. ೧೭೯೯ರಲ್ಲಿ ಮೈಸೂರು ಸಂಸ್ಥಾನದಲ್ಲಿ ಒಡೆಯರ ಆಳ್ವಿಕೆಗೆ ಜಗಲೂರು ಪ್ರದೇಶ ಸೇರಿತ್ತು. ೧೮೩೦ ರ ಪೌಜುದಾರಿಕೆಗೆ ಸೇರಿತ್ತು ಕ್ರಿ.ಸ. ೧೯೧೫ ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಚಿತ್ರದುರ್ಗ ರಸ್ತೆಯ ದೊಣೆಹಳ್ಳಿ ಹತ್ತಿರ ಜನಗಿಹಳ್ಳಕ್ಕೆ ದೊಡ್ಡ ಸೇತುವೆಯನ್ನು ನಿರ್ಮಿಸಿದ್ದರು ಈಗಲೂ ಅಲ್ಲಿರುವ ಶಿಲಾನ್ಯಾಸದ ಕಲ್ಲಿನಿಂದ ಗೊತ್ತಾಗುತ್ತದೆ.

ಜಗಲೂರು ತಾಲ್ಲೂಕಿನ ಆಧುನಿಕ ಚರಿತ್ರೆ ಬಹು ಮಹತ್ವವಾದುದು ಬಿಳಿಚೋಡಿನ ಅಂಚೆ ಭೀಮಪ್ಪನಾಯಕರು ವಕೀಲರಾಗಿ, ಶಾಸಕರಾಗಿ, ಸಾಹೇಬರಾಗಿ ದೊಡ್ಡ ಹೆಸರು ಮಾಡಿದವರು, ಹಾಗೆಯೇ ಜಗಲೂರಿನ ಗಾಂಧಿ ಎಂದು ಹೆಸರಾದ ಇಮಾಂಸಾಬರು ಶಾಸಕರಾಗಿ ಸಚಿವರಾಗಿ ಹಾಗೂ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅವರು ಮಾಡಿದ ಸೇವೆ ಶ್ಲಾಘನೀಯ ಅನಂತರ ಜಿ.ಎಚ್. ಅಶ್ವತ್ಥರೆಡ್ಡಿ ಎಂ, ಬಸಪ್ಪ ಡಿ, ಗುರುಸಿದ್ಧನಗೌಡ ಶಾಸಕರಾಗಿ ಮಹತ್ವ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಜಗಲೂರನ್ನು ಇಂದು ಪಟ್ಟಣ ಪಂಚಾಯಿತಿಯನ್ನು ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವನ್ನಾಗಿ ಮಾಡಿದ್ದರಿಂದ ಸಾಧ್ಯ ಎಸ್.ವಿ. ರಾಮಚಂದ್ರಪ್ಪ ಶಾಸಕರಾಗಿ ಆಯ್ಕೆ ಆಗಿ ಕಾರ್ಯ ನಿರ್ವಹಿಸುತ್ತಿರುವರು.

ಒಟ್ಟಾರೆ ಹೇಳುವುದಾದರೆ ಜಗಲೂರು ತಾಲ್ಲೂಕಿನ ಚರಿತ್ರೆ ಅಮೋಘವಾದುದು, ಸ್ಥಳೀಯ ಚರಿತ್ರೆಯ ಮೂಲಕ ಇಂತಹ ಅನೇಕ ಸಂಗತಿಗಳನ್ನು ಬೆಳಕಿಗೆ ತರುವ ಔಚಿತ್ಯವಿದೆ.

ಕೊನೆ ಟಿಪ್ಪಣಿಗಳು

೧. ಗಿರಿಜಾ ಟಿ., ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ದಾವಣಗೆರೆ

೨. ಎಫಿಗ್ರಾಫಿಯಾ ಕರ್ನಾಟಕ ಸಂಪುಟ, ಪು. ೬

೩. ವಿರೂಪಾಕ್ಷಿ ಪೂಜಾರಹಳ್ಳಿ, ಚಿನ್ನಹಗರಿ ಸಿರಿ ಪರಿಸರದ ಪ್ರಾಚ್ಯಾವಶೇಷಗಳು, ಪು. ೭

೪. ಸೋಮಶೇಖರ್ ಎಸ್.ವೈ., ೨೦೧೦, ಜಗಲೂರು(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧

೫. ಅದೇ ಪು. ೨

೬. ಅದೇ ಪು. ೨

೭. ಸೋಮಶೇಖರ್ ಎಸ್.ವೈ., ೨೦೧೭, ಪ್ರಾಗಿತಿಹಾಸ ಕಾಲದ ಕೈಗೊಡಲಿ ಪತ್ತೆ, ಸಂಶೋಧನಾ ಲೇಖನ, ಇತಿಹಾಸ ದರ್ಶನ, ಪು. ೩

೮. ಅದೇ ಪು. ೪

೯. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, ದಾವಣಗೆರೆ ಜಿಲ್ಲೆಯ ರಾಜಕೀಯ ಇತಿಹಾಸ, ೨೦೦೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೬

೧೦. ಅದೇ ಪು. ೧೪

೧೧. ಅದೇ ಪು. ೨೦

೧೨. ಗಿರಿಜಾ ಟಿ, ೧೯೯೧, ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ಪು. ೧೨

೧೩. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು. ೨೨

೧೪. ಸತ್ಯನ್ ಬಿ.ಎಸ್., ಚಿತ್ರದುರ್ಗ ಡಿಸ್ಟ್ರಿಕ್ ಗ್ಯಾಸೆಟಿಯರ್, ಪು. ೩೨

೧೫. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು. ೨೪

೧೬. ದಾವಣಗೆರೆ ಜಿಲ್ಲೆಯ ಗ್ಯಾಸೆಟಿಯರ್, ಪು. ೪೨

೧೭. ತಿಪ್ಪೇಸ್ವಾಮಿ ಹೆಚ್. ೨೦೦೧, ದಾವಣಗೆರೆ ಜಿಲ್ಲೆಯ ದೇವಾಲಯಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೫೨

❖❖❖

ಅಧ್ಯಾಯ: ಮೂರು

ದೇವಾಲಯ, ಮೂರ್ತಿಶಿಲ್ಪ ಹಾಗೂ ವೀರಗಲ್ಲುಗಳು

೩.೧ ದೇವಾಲಯ ಉಗಮ ಮತ್ತು ವಿಕಾಸ

ಕಲ್ಲೇದೇವರಪುರ ಪರಿಸರದ ದೇವಾಲಯಗಳ ಅಧ್ಯಯನ ಪೂರ್ವದಲ್ಲಿ ದೇವರು, ದೇವಾಲಯಗಳ ಉಗಮದ ಬಗ್ಗೆ ತಿಳಿಯುವುದಾದರೆ ವೇದಗಳ ಕಾಲದಿಂದಲೂ ಪ್ರಕೃತಿಯಲ್ಲಿರುವ ವಿಸ್ಮಯಗಳನ್ನೇ ಪೂಜಿಸುತ್ತಾ ಬಂದು, ಕೊನೆಯಲ್ಲಿ ಮೂರ್ತಿ ಪೂಜೆ ಮತ್ತು ಅದರ ರಕ್ಷಣೆಗಾಗಿ ಗುಡಿ ಅಥವಾ ದೇವಾಲಯಗಳ ನಿರ್ಮಾಣ ಮಾಡಲು ಆರಂಭಿಸಿದನು. ಮಾನವನು ತನ್ನ ಬದುಕಿಗಾಗಿ ಪ್ರಕೃತಿಯೊಡನೆ ನಡೆಸಬೇಕಾದ ನಿರಂತರ ಸೆಣಸಾಟದಲ್ಲಿ ಪ್ರಾಕೃತಿಕ ವಿಸ್ಮಯಗಳಾದ ಮಳೆ, ಗುಡುಗು, ಸಿಡಿಲು, ಕಾಡ್ಗಿಚ್ಚು ಮೊದಲಾದವು ಅವನಲ್ಲಿ ಭಯ ಮೂಡಿಸಿದವು. ತದನಂತರ ಪ್ರಕೃತಿಯಲ್ಲಿ ಯಾವುದೋ ಒಂದು ಅದ್ಭುತ ಶಕ್ತಿಯೊಂದು ಇದೆ ಎಂದು ಅರಿತ ನಂತರ ಆ ಶಕ್ತಿಯನ್ನು ದೇವರು ಎಂದು ನಂಬಿದನು. ಹಾಗೆಯೇ ಮಾನವನು ಆ ಶಕ್ತಿಗೆ ಒಂದು ಮೂರ್ತಿರೂಪವನ್ನು ನೀಡಿ ಪೂಜಿಸಲು ಆರಂಭಿಸಿದ ಭಾರತದಲ್ಲಿ ಮೂರ್ತಿಪೂಜೆಯ ಕಲ್ಪನೆಯನ್ನು ಹಾಗೂ ಅದರ ಪ್ರಾಚೀನತೆಯನ್ನು ಹರಪ್ಪ ಸಂಸ್ಕೃತಿಯಿಂದಲೇ ಗುರುತಿಸಬಹುದಾಗಿದೆ.

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ದೇವಾಲಯದ ರೂಪಗಳು ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದ ಬಳಿಕ, ಈ ಧರ್ಮಗಳಿಗಾಗಿ ಸಂಬಂಧಿಸಿದ ಸ್ತೂಪ ಮತ್ತು ಚೈತ್ಯಗಳು ಆರಂಭದ ಕಟ್ಟಡ ವಾಸ್ತುವಿಗೆ ಸಾಕ್ಷಿಗಳಾಗಿವೆ.[೧] ಸ್ತೂಪವು ಬೌದ್ಧಧರ್ಮದ ಒಂದು ಧಾರ್ಮಿಕ ಕಟ್ಟಡ, ಇದನ್ನು ಬೃಹತ್ ಶಿಲಾಸಂಸ್ಕೃತಿಯ ಸಮಾಧಿ ಕಲ್ಪನೆಯ ಮುಂದುವರೆದ ಹಂತವಾಗಿರುವುದನ್ನು ಗಮನಿಸಬೇಕು, ದಕ್ಷಿಣ ಭಾರತದಲ್ಲಿ ವೃತ್ತಾಕಾರದ ಈ ರೀತಿಯ ಸಮಾಧಿ ದಿಬ್ಬಗಳನ್ನು ಅವುಗಳ ಸುತ್ತಲೂ ಕಲ್ಲುಗಳಿಂದ ನಿರ್ಮಿತವಾದ ವೃತ್ತವನ್ನು ಕಾಣಬಹುದು, ಕ್ರಿಪೂ. ೨ನೇ ಶತಮಾನದಲ್ಲಿ ಹೆಲಿಯೋಡರಸ್ ಸ್ಥಾಪಿಸಿದ ಗರುಡ ಸ್ತಂಭದ ಉಲ್ಲೇಖ ವಾಸುದೇವನ ದೇವಾಲಯಕ್ಕೆ ಸಂಬಂಧಿಸಿದ್ದು, ಇದು ದೇವಾಲಯಕ್ಕೆ ಸಂಬಂಧಿಸಿದ ಪ್ರಾಚೀನ ಮಾಹಿತಿಯಾಗಿದೆ.[೨]

ಕರ್ನಾಟಕದಲ್ಲಿ ಕ್ರಿ.ಶ.ದ ಆರಂಭದಲ್ಲಿ ಕಟ್ಟಿದ ದೇವಾಲಯಗಳು ಉಳಿದಿಲ್ಲವಾದರೂ, ಕ್ರಿ.ಶ. ೧೫೦ರ ಕದಂಬರ ಪ್ರಾಕೃತ ಶಾಸನವು ದೇವಾಲಯಗಳು ರಚನೆಗೊಂಡಿರುವುದನ್ನು ದೃಢೀಕರಿಸುತ್ತದೆ. ಕರ್ನಾಟಕದ ಅತೀ ಪ್ರಾಚೀನ ಎನಿಸಿರುವ ಕ್ರಿ.ಶ. ೪೫೦ರ ತಾಳಗುಂದದ ದೇವಾಲಯವು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿರುವುದರಿಂದ ದೇವಾಲಯವಿತ್ತೆಂದು ದಾಖಲೆಯಾಗಿ ಉಳಿಯುತ್ತದೆ. ಇದು ದೇವಾಲಯದ ಸ್ವರೂಪದ ಬಗ್ಗೆ ಮಾಹಿತಿ ನೀಡುವುದಿಲ್ಲ. ಆದ್ದರಿಂದ ದೇವಾಲಯಗಳ ಉಗಮ ವಿಕಾಸವನ್ನು ಗುರುತಿಸುವ ಸಲುವಾಗಿ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮತ್ತು ಮಹಾಕೂಟಗಳಲ್ಲಿರುವ ರಚನೆಗಳನ್ನು ಪರಿಶೀಲಿಸಬಹುದು.[೩]

ಕನಿಷ್ಠ ಅವಶ್ಯಕತೆಯೊಡನೆ ನಿಂತ ಹಲವಾರು ರಚನೆಗಳನ್ನು ಮಹಾಕೂಟೇಶ್ವರ ದೇವಾಲಯದ ಅವರಣದಲ್ಲಿ ಬಾದಾಮಿಯ ಭೂತಭೂಥ ಗುಡಿಯ ಗುಂಪುಗಳಲ್ಲಿ ಹಾಗೂ ಐಹೊಳೆ ಪರಿಸರದಲ್ಲಿ ಕಂಡು ಬರುತ್ತವೆ, ಕೆಲವಡೆ ಕೇವಲ ಮಂಟಪ, ನಂತರ ಗರ್ಭಗೃಹದೊಂದಿಗೆ ಹೊಂದಿಕೊಂಡ ಎರಡು ಅಥವಾ ನಾಲ್ಕು ಸ್ತಂಭಗಳುಳ್ಳ ಮುಖಮಂಟಪ ಅಥವಾ ಗರ್ಭಗೃಹದೊಂದಿಗೆ ಕಕ್ಷಾಸನವುಳ್ಳ ಮಂಟಪ, ಮತ್ತೊಂದೆಡೆ ಮಧ್ಯಮಂಟಪವಿದ್ದು, ಇಕ್ಕೆಲಗಳಲ್ಲಿ ಗರ್ಭಗೃಹ ಮುಖಮಂಟಪ ಈ ರೀತಿಯ ರಚನೆಗಳನ್ನು ಕಾಣುತ್ತೇವೆ. ಆದ್ದರಿಂದ ದೇವಾಲಯಗಳ ಬೆಳವಣಿಗೆಯಲ್ಲಿ ಇವುಗಳನ್ನು ಅವಶ್ಯಕವಾಗಿ ಗಮನಿಸಬೇಕಾಗಿದೆ. ವಿದ್ವಾಂಸ ಪರ್ಸಿ ಬ್ರೌನ್‌ರವರು ವಾಸ್ತು ಮೂಲವನ್ನಾಧರಿಸಿ ಲಡಾಖಾನ್ ದೇವಾಲಯವನ್ನು ಅತಿ ಪ್ರಾಚೀನ ರಚನೆಯೆಂದು ಗುರುತಿಸಿದರು. ಕೆ.ವಿ. ಸುಂದರರಾಜನ್‌ರವರು ಐಹೊಳೆಯ ಜ್ಯೋತಿರ್ಲಿಂಗ ಗುಡಿಯ ನಾಲ್ಕು ಸ್ತಂಭಗಳ ರಚನೆಯನ್ನು ದೇವಾಲಯದ ಮೂಲವೆಂದು ವಿವರಿಸಿದರು. ಇದರೊಂದಿಗೆ ಮಹಾಕೂಟದ ಪುಷ್ಕರಣಿಯಲ್ಲಿರುವ ಮಂಟಪವನ್ನು ಮೂಲವೆಂದು ಗುರುತಿಸಿದರು. ದೇವಾಲಯಗಳ ಸುತ್ತ ತುಂಬಿದ್ದ ಮಣ್ಣಿನ ಸ್ತರಗಳ ಸರ್ವೇಕ್ಷಣೆಯಿಂದ ಇದಕ್ಕಿಂತ ಭಿನ್ನವಾದ ಅಂಶ ಬೆಳಕಿಗೆ ಬಂದಿದ್ದು, ಡಾ.ಎಸ್.ಆರ್. ರಾವ್‌ರವರು ಈ ಅಧ್ಯಯನ ರೀತಿ ಗೌಡರ ಗುಡಿಯನ್ನು ಪ್ರಾಚೀನವೆಂದು ಗುರುತಿಸಿದರು. ಇನ್ನೂ ದೇವಾಲಯದ ವಾಸ್ತುರಚನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಮೂರ್ತಿ ಆರಾಧನೆಯು ಆರಂಭವಾದ ಬಳಿಕ ಅದರ ರಕ್ಷಣೆಗಾಗಿ ವಾಸ್ತುರೂಪ ನೀಡಲಾಯಿತು. ರಕ್ಷಣೆಗಾಗಿ ನಿರ್ಮಿಸಿದ ಕಟ್ಟಡಗಳ ನಿರ್ಮಾಣಕ್ಕೆ ವಾಸ್ತುಶಿಲ್ಪವೆಂದು ಕರೆಯಬಹುದಾಗಿದ್ದು, ಭೂಮಿಯ ಮೇಲೆ ಕಟ್ಟಲ್ಪಟ್ಟ ವಾಸ್ತುಗಳನ್ನು ಗೃಹವಾಸ್ತು ಹಾಗೂ ದೇಗುಲವಾಸ್ತು ಎಂದು ಎರಡು ಪ್ರಕಾರಗಳನ್ನು ಕಾಣಬಹುದು.[೪] ಗುಪ್ತರ ಕಾಲದಲ್ಲಿ ದೇವಾಲಯ ಕಲ್ಪನೆ ಪರಿಪಕ್ವಗೊಂಡು, ಭಾರತದಲ್ಲಿ ಆರಂಭಿಕ ಹಂತದಲ್ಲಿ ದೇಗುಲ ವಾಸ್ತುಶಿಲ್ಪಕ್ಕೆ ವಿಶೇಷ ಪ್ರೋತ್ಸಾಹ ಮತ್ತು ಆದ್ಯತೆ ನೀಡಿದವರಲ್ಲಿ ಗುಪ್ತರು ಮುಖ್ಯರಾಗಿದ್ದಾರೆ ಪ್ರಾರಂಭದಲ್ಲಿ ದೇವಾಲಯಗಳನ್ನು ಮರ, ಬೊಂಬು, ಮಣ್ಣು, ಇಟ್ಟಿಗೆಗಳಿಂದ ನಿರ್ಮಿಸುತ್ತಿದ್ದುದು ನಂತರದಲ್ಲಿ ಅವುಗಳ ಬಾಳಿಕೆಯ ದೃಷ್ಟಿಯಿಂದ ಶಿಲೆಗಳನ್ನು ಬಳಸಿ ದೇವಾಲಯ ನಿರ್ಮಿಸಲು ಪ್ರಾರಂಭಿಸಿದರು. ಇವರ ಕಾಲದ ಮುಖ್ಯ ದೇವಾಲಯಗಳಲ್ಲಿ ಭೂಮಾರದ ಶಿವದೇವಾಲಯ, ನಾಚ್ನಾದ ಪಾರ್ವತಿ ದೇವಾಲಯ, ಜಬ್ಬಲಪುರದ ವಿಷ್ಣು ದೇಗುಲಗಳು ಮುಖ್ಯವಾಗಿವೆ.

ಹೀಗೆ ದೇವಾಲಯಗಳನ್ನು ಕಲ್ಲಿನಿಂದ ಕಟ್ಟಲು ಪ್ರಾರಂಭಿಸಿದ ಬಳಿಕ ಅವುಗಳ ವಾಸ್ತುರಚನೆಗಳನ್ನು ಕುರಿತು ತಿಳಿಸುವ ಹಲವಾರು ಸಾಂಪ್ರದಾಯಿಕ ವಾಸ್ತು ಗ್ರಂಥಗಳಾದ ಮಾನಸಾರ, ಮಾನಸೋಲ್ಲಾಸ, ಶಿಲ್ಪರತ್ನ, ವಾಸ್ತುಚಂದ್ರಿಕ, ಸುಪ್ರಬೇಧಕಾಮಿಕ, ಮಯಮತ ಮುಂತಾದವುಗಳು ರಚನೆಗೊಂಡವು, "ವಾಸ್ತುಶಿಲ್ಪದಲ್ಲಿ ಕರ್ನಾಟಕದಲ್ಲಿರುವಷ್ಟು ವೈವಿಧ್ಯ ಬಹುಶಃ ಭರತಖಂಡದ ಇನ್ನಾವ ಭಾಗದಲ್ಲೂ ಇಲ್ಲವೆನ್ನಬಹುದು ದೇವಾಲಯಗಳ ನಿರ್ಮಾಣದಲ್ಲಿ ಕರ್ನಾಟಕ ತೋರಿಸಿದ ಉದಾತ್ತವಾದ ಅಭಿರುಚಿ ಮತ್ತು ಅದನ್ನು ಬೆಳಸಿಕೊಂಡು ಬಂದ ಬಗೆ ವಿಶಿಷ್ಟವಾದುದು ಭರತ ಖಂಡದ ಎಲ್ಲ ಭಾಗಗಳ ಉತ್ತಮ ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳಲು ಕರ್ನಾಟಕ ಪ್ರಯತ್ನಪಟ್ಟಿದೆ, ಅವುಗಳ ಸಮನ್ವಯದಿಂದ ತನ್ನದೇ ಆದ ಮಾರ್ಗಗಳನ್ನು ರೂಪಿಸಿಕೊಂಡಿದೆ."

ಕಲ್ಲೇದೇವರಪುರ: ಸಾಂಸ್ಕೃತಿಕ ಹಿನ್ನೆಲೆ

ಆಂಗ್ಲ ಭಾಷೆಯ 'Culture' ಎಂಬ ಪದಕ್ಕೆ ಸಮನಾರ್ಥಕವಾಗಿ ಕನ್ನಡದಲ್ಲಿ 'ಸಂಸ್ಕೃತಿ' ಎಂಬ ಪದ ಬಳಕೆಯಲ್ಲಿರುವುದು ತಿಳಿದ ಸಂಗತಿ. ಸಂಸ್ಕೃತಿ ಮಾನವನ ಅವಿಭಾಜ್ಯ ಅಂಗ. ಇದರ ಅರ್ಥ ಮತ್ತು ವ್ಯಾಪ್ತಿ ವಿಶಾಲವಾದದ್ದು ಮತ್ತು ಬಹುಮುಖಿ ಆಯಾಮಗಳಿಂದ ಕೂಡಿರುವಂಥದ್ದು, ನಿರಂತರ ಬೆಳವಣಿಗೆ ಇದರ ವಿಶೇಷತೆ, ಸಂಸ್ಕೃತಿಯ ಕುರಿತು ವಿದ್ವಾಂಸರು ಬಹುಹಿಂದಿನಿಂದಲೇ ತಮ್ಮ ದೃಷ್ಟಿಕೋನಗಳಲ್ಲಿ ವ್ಯಾಖ್ಯಾನಿಸುವ ಪ್ರಯತ್ನಗಳನ್ನು ಮಾಡಿದ್ದಾರೆ. ಜನಪದರ ಪ್ರಾಚೀನ ನಡವಳಿಕೆ, ಆಚಾರ–ವಿಚಾರ ಹಾಗೂ ಜೀವನ ವಿಧಾನದ ಪ್ರತಿಬಿಂಬವೇ ಸಂಸ್ಕೃತಿ ಎನ್ನಬಹುದು. ಸಂಸ್ಕೃತಿಯಲ್ಲಿ ಜನರ ರೂಢಿ ಸಂಪ್ರದಾಯ, ವೇಷ–ಭಾಷೆ, ಆಚರಣೆ, ನಂಬಿಕೆಗಳು, ಐತಿಹ್ಯಗಳು, ಕಲೆ ಮತ್ತು ವಾಸ್ತುಶಿಲ್ಪ, ಮೂರ್ತಿಶಿಲ್ಪ, ಜಾತ್ರೆಗಳಲ್ಲಿ ಜನಸಮುದಾಯಗಳ ಸಹಭಾಗಿತ್ವವೂ ಸೇರಿದಂತೆ ಅನೇಕ ಅಂಶಗಳು ಸಮ್ಮಿಳಿತಗೊಂಡಿರುತ್ತವೆ. ಜಾಗತೀಕರಣದ ಪರಿಕಲ್ಪನೆ ಇಂದು ಹೆಮ್ಮರವಾಗಿ ಬೆಳೆದು ಜಗತ್ತಿನ ಎಲ್ಲ ರಂಗಗಳನ್ನೂ ತನ್ನೆಡೆಗೆ ಸೆಳೆಯುತ್ತಿರುವಾಗ ಸಂಸ್ಕೃತಿಯನ್ನು ಪರಿವರ್ತಿಸುವ ನಿಟ್ಟಿನಲ್ಲಿ ಇದು ತೀವ್ರತರವಾದ ಸಂಸ್ಕೃತಿಯನ್ನು ಪರಿವರ್ತಿಸುವ ನಿಟ್ಟಿನಲ್ಲಿ ಇದು ತೀವ್ರತರವಾದ ಪರಿಣಾಮವನ್ನು ಬೀರುತ್ತಿರುವುದು ಸ್ಪಷ್ಟ. ಈ ಹಿನ್ನೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಅಧ್ಯಯನಗಳು ಮಹತ್ವ ಪಡೆದುಕೊಳ್ಳುತ್ತಿರುವುದು ಗಮನೀಯ. ಪ್ರಸ್ತುತ ಜಗಲೂರು ತಾಲೂಕಿನಲ್ಲಿರುವ (ದಾವಣಗೆರೆ ಜಿಲ್ಲೆ) ಕಲ್ಲೇದೇವರಪುರ ಗ್ರಾಮವು ಪ್ರಾಚೀನ ಕಾಲದಿಂದಲೂ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹು ಮಹತ್ವ ಪಡೆದ ತಾಣ. ಜಗಲೂರಿನಿಂದ ೨೦ ಕಿ.ಮೀ. ದೂರದಲ್ಲಿರುವ ಇದು ಜನಗಿಹಳ್ಳದ ಬಲದಂಡೆಯಲ್ಲಿದೆ. ಈ ಗ್ರಾಮದ ದೇವಾಲಯಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಕಲ್ಲೇಶ್ವರ ದೇವರ ಜಾತ್ರಾ ವಿಶೇಷತೆ, ಆಚರಣೆಗಳನ್ನು ಕುರಿತು ಚರ್ಚಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸ ಮತ್ತು ಆದಿ ಇತಿಹಾಸ ಕಾಲದ ಅನೇಕ ನೆಲೆಗಳ ಜೀವಸೆಲೆಯಾಗಿದ್ದ ಜಿನಗಿಹಳ್ಳವು ಇದು ಕಲ್ಲೇದೇವರಪುರ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಹರಿಯುತ್ತದೆ.

ಶಾಸನಗಳಲ್ಲಿ ಈ ಹಳ್ಳವನ್ನು ಹಾನೆಯತೊರೆ ಎಂದು ಉಲ್ಲೇಖಿಸಲಾಗಿದೆ. ಇತ್ತೀಚಿನವರೆಗೆ ಪ್ರಾಗಿತಿಹಾಸ ಕಾಲದ ಯಾವುದೇ ಪ್ರಕಾರದ ಅವಶೇಷಗಳು ಈ ಗ್ರಾಮದಲ್ಲಿ ಪತ್ತೆಯಾಗಿಲ್ಲವಾದರೂ ಇದು ಪ್ರಾಗಿತಿಹಾಸ ಸಂಸ್ಕೃತಿಯ ಮಾನವನ ಚಟುವಟಿಕೆಗಳಿಗೆ ಒಳಪಟ್ಟಿತ್ತೆನ್ನಬಹುದು. ಇಲ್ಲಿಗೆ ಸಮೀಪದ ಸಂಗೇನಹಳ್ಳಿಯ ವಿಶಾಲ ಕೆರೆಯ ಮಧ್ಯೆ ಇರುವ ನಡುಗಡ್ಡೆಯಲ್ಲಿ ನೂತನ ಶಿಲಾಯುಗದ ಸಂಸ್ಕೃತಿಯನ್ನು ವಿವರಿಸುವಲ್ಲಿ ಪ್ರಧಾನ ಪಾತ್ರವಹಿಸುವ ಬೂದಿದಿಬ್ಬದ ಉಂಡೆಗಳು, ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಗಳು, ಬೂದು, ಕಪ್ಪು, ಕೆಂಪು ವರ್ಣದ, ಬಿಳಿ ವರ್ಣದ ರೇಖಾಚಿತ್ರಗಳಿರುವ ಹೊಳಪುಳ್ಳ ಮಡಿಕೆಯ ಚೂರುಗಳು ಮತ್ತು ಹುಟ್ಟು ಬಂಡೆಗಳ ಮೇಲೆ ಕುಟ್ಟಿ ಮೂಡಿಸಿದ ವಿವಿಧ ಪ್ರಾಣಿಗಳು, ಮನುಷ್ಯ ಹಾಗೂ ಇತರೆ ಜ್ಯಾಮಿತಿ ವಿನ್ಯಾಸದ ರೇಖಾಕೃತಿಗಳು ಪತ್ತೆಯಾಗಿವೆ. ಚಿತ್ರದುರ್ಗ ಸಮೀಪದ ಕುಂಚಿಗನಹಾಳು ಕಣಿವೆ, ಬೆಟ್ಟ ಗುಡ್ಡ ಪರಿಸರದ ಎದ್ದುಲಬಂಡೆ, ದೊಡ್ಡ ಸಿದ್ದವನಹಳ್ಳಿಯ ಪರಿಸರದಲ್ಲಿ ದೊರೆತ ರೇಖಾಚಿತ್ರಗಳಲ್ಲಿ ಮತ್ತು ಇಲ್ಲಿನ ರೇಖಾಕೃತಿಗಳಲ್ಲಿ ಬಹುಮಟ್ಟಿನ ಹೋಲಿಕೆ ಇರುವುದು ಗಮನಾರ್ಹ. ಕಲ್ಲೇದೇವರಪುರ ಗ್ರಾಮದ ಹೊರವಲಯದಲ್ಲಿ ಇತ್ತೀಚಿಗೆ ಆದಿ ಇತಿಹಾಸ ಕಾಲದ ಕೆಂಪು ವರ್ಣದ ಮೃತ್ಪಾತ್ರೆಯ ಚೂರುಗಳು ಲಭ್ಯವಾಗಿವೆ. ಚಂದ್ರವಳ್ಳಿ, ಚಿಜ್ಜಿನಕೆರೆ ಮತ್ತು ಆಕನೂರುಗಳಂತಹ ಆದಿ ಇತಿಹಾಸ ಕಾಲದ ನೆಲೆಗಳ ಪರಿಸರದಲ್ಲಿರುವ ಈ ಗ್ರಾಮ ಬಹು ಹಿಂದೆಯೇ ಮಾನವನ ಒಡನಾಟಕ್ಕೆ ಒಳಪಟ್ಟಿದ್ದು ದೃಢಪಡುತ್ತದೆ.

೩.೨ ಕಲ್ಲೇದೇವರಪುರದ ದೇವಾಲಯಗಳು

ಯಾವುದೇ ಒಂದು ಸ್ಥಳದ ಸಾಂಸ್ಕೃತಿಕ ಹಿನ್ನಲೆಯನ್ನಾಧರಿಸಿದ ಅಧ್ಯಯನದಲ್ಲಿ ದೇವಾಲಯಗಳ ಪಾತ್ರ ಅಮೂಲ್ಯವಾಗಿದ್ದು, ಮಹತ್ತರದ ವಿಮರ್ಶೆಗಳಿಗೆ ಒಳಪಡುತ್ತವೆ. ರಾಜ-ಮಹಾರಾಜರ ಆಶ್ರಯ, ಪಾಲನೆ ಮತ್ತು ಪೋಷಣೆಯ ಸಲುವಾಗಿ ಬೃಹತ್ ಗಾತ್ರದಲ್ಲಿ ಬೆಳವಣಿಗೆ ಹೊಂದಿದ ದೇವಾಲಯಗಳು ಮಧ್ಯಯುಗೀನ ಕಾಲದ ವೇಳೆಗೆ ಮಾನವನ ಪರಿಸರದ ಕೇಂದ್ರಬಿಂದುಗಳಾಗಿ ಜನರ ಮನಸ್ಸಿನಲ್ಲಿ ಎಂದಿಗೂ ಮರೆಯಲಾಗದ ಸ್ಥಾನವನ್ನು ಗಳಿಸಿದವು. ಕಲ್ಲೇದೇವರಪುರದ ಪರಿಸರದಲ್ಲಿ ಕಲ್ಲೇಶ್ವರ ದೇವಾಲಯ ತ್ರಿಕೂಟಲಿಂಗ ದೇವಾಲಯ, ಗೌರಮ್ಮ ದೇವಾಲಯ, ವೀರಭದ್ರಶ್ವೇರ ದೇವಾಲಯ, ವಿಗ್ನೇಶ್ವರ ದೇವಾಲಯ, ಅಳಳ್ಳಿ ಬಸವಣ್ಣ ದೇವಾಲಯ ಹಾಗೂ ಗುಗ್ಗರಿ ಬಸವಣ್ಣನ ದೇವಾಲಯಗಳಿವೆ.

೩.೨.೧. ಕಲ್ಲೇಶ್ವರ ದೇವಾಲಯ

ಕಲ್ಲೇದೇವರಪುರ ಮತ್ತು ಇದರ ಅಕ್ಕಪಕ್ಕದ ಊರಿನ ಅಸಂಖ್ಯಾತ ಜನರಿಗೆ ನೆಚ್ಚಿನ ದೈವವಾಗಿದೆ. ಈ ಕಲ್ಲೇಶ್ವರ ದೇಗುಲವು ಈ ಊರಿನ ಮಧ್ಯಭಾಗದಲ್ಲಿ, ಶಾಸನಗಳಿಂದ ತಿಳಿದು ಬರುವಂತೆ ಈ ಕಲ್ಲೇಶ್ವರನ ಮೂಲ ನಾಮ ಕಲ್ಲಿನಾಥ. ಈ ಕಲ್ಲಿನಾಥ ಎಂಬ ಹೆಸರಿನಿಂದ ಈ ಊರಿಗೆ ಕಲ್ಲಿನಾಥಪುರ, ಕಲ್ಲೇದೇವರಪುರ ಎಂಬ ಹೆಸರು ಬಂದಿದೆ.

ಪುರ ಎಂಬ ಪದವು ಹಳ್ಳಿ ಊರಿಗಿಂತ ದೊಡ್ಡದು. ಆದ್ದರಿಂದ ಕಲ್ಲೇದೇವರಪುರವನ್ನು 'ಪುರ' ಪಟ್ಟಣವೆಂದು ಕರೆಯುತ್ತಾರೆ.

ಕಲ್ಲೇಶ್ವರ ದೇವಾಲಯದ ಐತಿಹ್ಯ

ನಾಡಿನ ಎಲ್ಲಾ ಕಡೆಯೂ ದೇಗುಲಗಳ ಉಗಮಕ್ಕೆ ಸಂಬಂಧಿಸಿದ ಐತಿಹ್ಯಗಳಿರುವಂತೆ ಈ ಕಲ್ಲೇಶ್ವರ ದೇಗುಲಕ್ಕೆ ಸಂಬಂಧಿಸಿದಂತೆ ಜನಪದ ಐತಿಹ್ಯವೊಂದು ಪ್ರಚಲಿತದಲ್ಲಿದೆ. ಕಲ್ಲೇಶ್ವರ ಲಿಂಗವು ಉದ್ಬವ ಲಿಂಗವಾಗಿದೆ. ಈಗಿನ ದೇವಾಲಯ ಇರುವ ಸ್ಥಳವು ಹಿಂದೆ ಒಮ್ಮೆ ಕಾಡುಪಳೆಗಳಿಂದ ಅವೃತ್ತವಾಗಿತ್ತು. ದೂರದ ಪ್ರದೇಶದಿಂದ ಬಂದು ವ್ಯಾಪಾರ ಮಾಡುತ್ತಾ ಮಲ್ಲಸಟ್ಟ ಎಂಬ ವ್ಯಾಪಾರಿ ಆಯಾಸಗೊಂಡ ಕಾರಣ ಈ ಸ್ಥಳದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದನು. ತೀವ್ರವಾದ ಓಡಾಟದಿಂದ ಧಣಿದಿದ ಈತನು ತನ್ನ ಹಸಿವನ್ನು ನೀಗಿಸಲೆಂದು. ಅವನು ತಂಗಿದ ಪ್ರದೇಶದಲ್ಲಿ ಒಂದು ಲಿಂಗಾಕೃತಿಯ ಕಲ್ಲು ಉದ್ಭವವಾಗಿತ್ತು. ಈ ಉದ್ಭವ ಲಿಂಗಾಕೃತಿಯ ಕಲ್ಲಿಗೆ ಇನ್ನೂ ಎರಡು ಕಲ್ಲುಗಳನ್ನು ಜೋಡಿಸಿ ಒಲೆಯನ್ನು ನಿರ್ಮಿಸಿ ಮೃತ್ಪಾತ್ರೆಯಲ್ಲಿ ಅಡುಗೆ ಮಾಡುತ್ತಿದ್ದ ಇದ್ದಕ್ಕಿದ್ದಂಗೆ ಮೃತ್ಪಾತ್ರೆಯಲ್ಲಿ ಬೇಯುತ್ತಿದ್ದ ಅನ್ನವು ರಕ್ತವಾಗಿ ಮಾರ್ಪಟ್ಟಿತಂತೆ. ಇದನ್ನು ಬಿಸಡಿದ ವ್ಯಾಪಾರಿ ವರ್ತಕ ಮಲ್ಲಸಟ್ಟಿ ಇನ್ನೂ ಒಮ್ಮೆ ಅಡುಗೆ ಮಾಡಲು ಮುಂದಾದಾಗ ಇದೇ ಪರಿಸ್ಥಿತಿ ಪುನಃ ಮರುಕಳಿಸಿತು. ಇದರಿಂದ ಆಶ್ಚರ್ಯದಿಂದ ತೀವ್ರ ಚಿಂತೆಗೆ ಒಳಾಗದ ವ್ಯಾಪಾರಿ ದೇವರ ಮೊರೆ ಹೋದನು. ಆಗ ದೇವರು ಚಿಕ್ಕ ಬಾಲಕನಲ್ಲಿ ಮೈದುಂಬಿ ಬಂದು ನೀನು ಒಲೆಗುಂಡೆದು ಭಾವಿಸಿದ ನಾನು ಒಲೆಗುಂಡಲ್ಲ. ನಾನು ಕಲ್ಲಿನಾಥ, ಕಲ್ಲಿನಾಥನಾಗಿ ಉದ್ಭವಿಸಿದ್ದೇನೆ ಎಂದು ಹೇಳಿಕೆ ನೀಡಿದನಂತೆ ಮಲ್ಲಸೆಟ್ಟಿಯು ತನಗೆ ತಿಳಿಯದೆ ತನ್ನಿಂದ ತಪ್ಪಿಗಾಗಿ ದೇವರಲ್ಲಿ ಕ್ಷಮೆಯಾಚ್ಚಿಸಿದನು. ಆಗ ಲಿಂಗದ ಕಲ್ಲಿನಿಂದ ಒಂದು ತುಂಡು ಸಿಡಿದು 'ನೀನು ವ್ಯಾಪಾರ ಮಾಡುವಾಗ ಈ ಕಲ್ಲನ್ನೇ ತೂಕದ ಕಲ್ಲನ್ನಾಗಿ ಬಳಸು' ಎಂದು ಆದೇಶ ಮಾಡಿದನಂತೆ. ಈ ಕಲ್ಲು ಇವನ್ನು ತನ್ನ ವ್ಯಾಪಾರದಲ್ಲಿ ಯಾವ ಆಳತೆ ಹೇಳಿದರೂ ಅದೇ ಆಳತೆಯಾಗುತ್ತಿತ್ತು. ಇದರಿಂದ ಇವನ್ನು ತನ್ನ ವ್ಯಾಪಾರದಲ್ಲಿ ಹೆಚ್ಚಿನ ಲಾಭವನ್ನು ಗಳಿಸಿದನು. ಹೀಗೆ ತನ್ನ ವ್ಯಾಪಾರದಲ್ಲಿ ಲಾಭವಾಗಿ ಮಲ್ಲಸೆಟ್ಟಿಯು ದೇವಾಲಯವನ್ನು ನಿರ್ಮಿಸುವುದರ ಮೂಲಕ ಭಕ್ತಿಯನ್ನು ಪ್ರದರ್ಶಿಸಿದನು ಎಂಬ ಪ್ರತೀತಿ ಇದೆ.

ಊರು: ಕಲ್ಲೇದೇವರಪುರ	ಕಾಲ: ಕ್ರಿ.ಶ. ೧೧-೧೨ನೇ ಶತಮಾನ
ಸ್ಮಾರಕ: ಕಲ್ಲೇಶ್ವರ ದೇವಾಲಯ	ಶೈಲಿ: ಕಲ್ಯಾಣ ಚಾಲುಕ್ಯ
ಸ್ಥಳ: ಗ್ರಾಮದ ಮಧ್ಯೆ	ಸ್ಥಿತಿ: ಉತ್ತಮ
ಅಭಿಮುಖ: ಪೂರ್ವ	ಸಂರಕ್ಷಣೆ:.....

ಜಗಲೂರು ತಾಲೂಕಿನ ಪ್ರಸಿದ್ಧ ಪ್ರಾಚೀನ ದೇವಾಲಯಗಳಲ್ಲಿ ಕಲ್ಲೇಶ್ವರ ದೇವಾಲಯವೂ ಒಂದು ಇಲ್ಲಿ ಪ್ರತಿ ವರ್ಷ ಪ್ರಸಿದ್ಧವಾದ ಕಲ್ಲೇಶ್ವರ ಜಾತ್ರೆ ನಡೆಯುತ್ತದೆ. ಅಲ್ಲದೆ ಜಾತ್ರೆಯ ಬಳಿಕ ದನಗಳ ಜಾತ್ರೆಯೂ ನೆರೆಯುತ್ತದೆ. ಕಲ್ಲೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಮಹಾಮಂಟಪ, ಸಭಾಮಂಟಪ, ನಂದಿಮಂಟಪ, ಉಯ್ಯಾಲೆ ಕಂಬ ಹಾಗೂ ಮಹಾದ್ವಾರ ಗೋಪುರಗಳನ್ನು ಒಳಗೊಂಡ ವಿಸ್ತಾರವಾದ ದೇವಾಲಯವಾಗಿದೆ. ಇವು ಕಾಲಾಂತರದಲ್ಲಿ ಸೇರ್ಪಡೆಗೊಳ್ಳುತ್ತಾ ಹೋಗಿವೆ. ಇದರಲ್ಲಿ ಇತ್ತೀಚೆಗೆ ೨೦೧೪-೧೫ರಲ್ಲಿ ಮಹಾದ್ವಾರ ಗೋಪುರ ಸೇರಿದೆ. ಗರ್ಭಗೃಹದಲ್ಲಿ ಒಂದು ಅಡಿ ಎತ್ತರದ ಕಪ್ಪುಶಿಲೆಯಲ್ಲಿ ಕಡೆಯಲಾದ ನಯವಾದ ಶಿವಲಿಂಗವಿದೆ. ಇದಕ್ಕೆ ಬೆಳ್ಳಿಯ ಮುಖವಾಡವನ್ನು ಹಾಕಲಾಗಿದೆ. ಗರ್ಭಗೃಹ ಮತ್ತು ಅಂತರಾಳಗಳ ಬಾಗಿಲುವಾಡಗಳಿಗೆ ಹಿತ್ತಾಳೆಯ ತಗಡನ್ನು ಹೊಂದಿಸಲಾಗಿದ್ದು, ಇವುಗಳಲ್ಲಿ ಶೈವ ದ್ವಾರಪಾಲಕರು, ಹೂಬಳ್ಳಿಗಳು, ವಿವಿಧ ಶಾಖೆಗಳು ಹಾಗೂ ಲಲಾಟದಲ್ಲಿ ಗಜಲಕ್ಷ್ಮಿಯನ್ನು ಚಿತ್ರಿಸಲಾಗಿದೆ. ನವರಂಗದಲ್ಲಿ ದಕ್ಷಿಣ ಮತ್ತು ಪೂರ್ವ ಭಾಗಕ್ಕೆ ದ್ವಾರಬಾಗಿಲುಗಳಿವೆ. ಉತ್ತರಕ್ಕೆ ಚಿಕ್ಕ ಕೊಠಡಿಯಿದೆ. ನವರಂಗದಲ್ಲಿ ಹೊಯ್ಸಳ ಶೈಲಿಯ ನಾಲ್ಕು ಕಂಬಗಳಿವೆ. ಇವುಗಳನ್ನು ಕಪ್ಪುಬಣ್ಣದ ನಾರುಗಲ್ಲಿನಲ್ಲಿ ಕಡೆದು ನಯಗೊಳಿಸಿದ್ದಾರೆ. ತಿರುಗಣೆ ಯಂತ್ರದಲ್ಲಿ ಮಾಡಲಾದ ಈ ಕಂಬಗಳು ಗಂಟೆಯಾಕಾರದಲ್ಲಿವೆ. ಕಂಬಗಳ ದಿಂಡುಗಳ ಕೆಳಗೆ ಚಚ್ಚೌಕವಾದ ಪೀಠ, ಮೇಲೆ ವೃತ್ತಾಕಾರದಲ್ಲಿ ಬಳೆಗಳ ಅಲಂಕರಣೆ, ಘಂಟೆಯಾಕಾರವನ್ನು ದಿಂಡಿನಲ್ಲಿ ಚಚ್ಚೌಕಾಕಾರದ ಫಲಕ ಮತ್ತು ಮೇಲ್ಭಾಗದಲ್ಲಿ ಬೋದಿಗೆಗಳನ್ನು ಒಳಗೊಂಡಿವೆ.

ಭುವನೇಶ್ವರಿಯಲ್ಲಿ ಪದ್ಮವನ್ನು ಕಡೆದಿರುವರು. ನವರಂಗದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಿರುವರು. ನವರಂಗದಲ್ಲಿ ಗಣೇಶ ಹಾಗೂ ಪಶ್ಚಿಮಾಭಿಮುಖವಾಗಿ ಸ್ಥಾಪಿಸಲಾದ ಸೂರ್ಯನ ಮೂರ್ತಿ ಇದೆ. ಕಪ್ಪುಶಿಲೆಯಲ್ಲಿ ಕಡೆಯಲಾದ ಈ ಶಿಲ್ಪದ ಎರಡು ಕೈಗಳು ಭಗ್ನವಾಗಿವೆ. ಉಳಿದ ಎರಡು ಕೈಗಳಲ್ಲಿ ಪದ್ಮಗಳಿವೆ. ನವರಂಗದ ದಕ್ಷಿಣ ದಿಕ್ಕಿನ ಬಾಗಿಲುವಾಡವು ಇಕ್ಕೆಲಗಳಲ್ಲಿ ವಿವಿಧ ಶಾಖೆಗಳನ್ನು ಹೊಂದಿದ್ದು ಅವುಗಳಲ್ಲಿ ಲತೆ, ಸ್ತಂಭ ಹಾಗೂ ವ್ಯಾಳಶಾಕೆಗಳಿವೆ. ಕೆಳಭಾಗದಲ್ಲಿ ಶೈವ ದ್ವಾರಪಾಲಕರನ್ನು ಕಡೆದಿರುವರು. ನಾಲ್ಕು ಕೈಗಳನ್ನು ಹೊಂದಿರುವ ದ್ವಾರಪಾಲಕರು ತ್ರಿಶೂಲ, ಡಮರು, ಗದೆ ಮತ್ತು ಅಭಯ ಹಸ್ತಮುದ್ರೆಗಳನ್ನು ಹಿಡಿದು ನಿಂತಿದ್ದಾರೆ. ಲಲಾಟದಲ್ಲಿ ಗಜಲಕ್ಷ್ಮಿಯಿದ್ದಾಳೆ. ದಕ್ಷಿಣದ ದ್ವಾರಬಾಗಿಲಿನ ಮುಂಭಾಗದಲ್ಲಿ ನಾಲ್ಕು ಕಂಬಗಳ ಕಕ್ಷಾಸನ ಹಾಗೂ ಮುಂದೆ ನಾಲ್ಕು ಕಂಬಗಳ ಮುಖಮಂಟಪವಿದೆ. ಮುಖಮಂಟಪದ ಮುಂಭಾಗದಲ್ಲಿ ನಂದಿಯ ಇನ್ನೊಂದು ಶಿಲ್ಪವಿದೆ. ಇದನ್ನು ಅಂಕಲಿ ಬಸವಣ್ಣ ಎಂದು ಕರೆಯುತ್ತಾರೆ. ನವರಂಗದ ಭುವನೇಶ್ವರಿಯಲ್ಲಿ ಮುಗುಚಿದ ಪದ್ಮಗಳ ಅಲಂಕರಣೆಗಳಿವೆ. ನವರಂಗದ ಎಡಕ್ಕೆ ಚಿಕ್ಕ ಗರ್ಭಗೃಹವಿದೆ. ಇದರಲ್ಲಿ ಸುಖಾಸನದಲ್ಲಿ ಕುಳಿತು ಕೈಗಳಲ್ಲಿ ದಂಡವಿಡಿದು ಕುಳಿತ ಶಿಲ್ಪವಿದೆ. ಇದನ್ನು ಮರುಳಸಿದ್ದೇಶ್ವರ ಶಿಲ್ಪವೆಂದು ಹೇಳಲಾಗುತ್ತದೆ. ಇದರ ಬಳಿ ಎರಡು ನಂದಿ ಶಿಲ್ಪಗಳಿವೆ.

ನವರಂಗದ ಮುಂಭಾಗದಲ್ಲಿರುವ ಮಹಾಮಂಟಪವು ವಿಜಯನಗರೋತ್ತರ ಕಾಲದ ನಿರ್ಮಾಣವಾಗಿದೆ. ಇಲ್ಲಿನ ನಾಲ್ಕು ಕಂಬಗಳನ್ನು ಚಚ್ಚೌಕ ಹಾಗೂ ಅಷ್ಟಮುಖಗಳಲ್ಲಿ ಕಡೆದಿದ್ದಾರೆ. ಈ ಮಂಟಪದ ಇಕ್ಕೆಲಗಳಲ್ಲಿ ಗರ್ಭಗೃಹಗಳಿವೆ. ಉತ್ತರಾಭಿಮುಖವಾಗಿರುವ ಗರ್ಭಗೃಹದಲ್ಲಿ ವೀರಭದ್ರ ಹಾಗೂ ಇನ್ನೊಂದರಲ್ಲಿ ಗೌರಮ್ಮ ಶಿಲ್ಪವನ್ನಿಟ್ಟು ಪೂಜಿಸಲಾಗುತ್ತದೆ. ವೀರಭದ್ರ ಶಿಲ್ಪವು ಸುಮಾರು ಆರು ಅಡಿಗಳಷ್ಟು ಎತ್ತರವಾಗಿದೆ. ವೀರಭದ್ರನು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಗುರಾಣಿಗಳನ್ನು ಹಿಡಿದಿದ್ದಾನೆ. ಮುಖಮಂಟಪದ ಬಾಗಿಲುವಾಡದಲ್ಲಿ ಲತೆ ಮತ್ತು ಸ್ತಂಭಶಾಖೆಗಳು ಇಕ್ಕೆಲಗಳಲ್ಲಿದ್ದರೆ, ಲಲಾಟದಲ್ಲಿ ಗಣೇಶನ ಸುಖಾಸನದಲ್ಲಿ ಕುಳಿತಿದ್ದು, ತನ್ನ ನಾಲ್ಕು ಕೈಗಳಲ್ಲಿ ಶಂಖ, ಪಾಶ, ಅಭಯ ಹಾಗೂ ಕಳಸವನ್ನು ಹಿಡಿದಿರುವಳು. ಮಹಾಮಂಟಪದ ಬಾಗಿಲುವಾಡವನ್ನು ಶೈವ ದ್ವಾರಪಾಲಕರು, ಛಾಮರಧಾರಿಯರಿಂದ ಹಾಗೂ ಲಲಾಟದಲ್ಲಿ ಗಣೇಶನನ್ನು ಕಡೆದಿದ್ದಾರೆ.

ಮಹಾಮಂಟಪದ ಬಲಭಾಗದಲ್ಲಿ ಇದಕ್ಕೆ ಹೊಂದಿದಂತೆ ಹೊರಗೆ ಪೂರ್ವಾಭಿಮುಖವಾಗಿ ಇನ್ನೊಂದು ಚಿಕ್ಕ ಗರ್ಭಗೃಹವಿದೆ. ಇದರಲ್ಲಿ ಒಂದು ವೀರಗಲ್ಲಿದೆ. ಇದನ್ನು ಈರಗಾರ ಹುಚ್ಚೇಶ್ವರ ಎಂದು ಕರೆಯುವರು. ಇದರ ಹೊರಭಾಗದಲ್ಲಿ ಗೋಗ್ರಹಣ ವೀರಗಲ್ಲು ಇದೆ. ಮಹಾಮಂಟಪದ ಮುಂಭಾಗದಲ್ಲಿ ಇನ್ನೊಂದು ಸಭಾಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಈ ಮಂಟಪದ ಮುಂಭಾಗದಲ್ಲಿ ನಂದಿ ಮಂಟಪ, ಉಯ್ಯಾಲೆ ಕಂಬ ಹಾಗೂ ಇತ್ತೀಚೆಗೆ ಕಟ್ಟಲಾದ ವಿನೂತನವಾದ ದ್ರಾವಿಡ ಮಾದರಿಯ ಮಹಾದ್ವಾರ ಗೋಪುರವಿದೆ. ಇಲ್ಲಿನ ನಂದಿಯನ್ನು ತೊಟ್ಟಿಪೆಳೆ ಬಸವಣ್ಣ ಎಂದು ಕರೆಯುವುದು ರೂಢಿ. ಐದು ಅಡಿ ಉದ್ದ ಹಾಗೂ ನಾಲ್ಕು ಅಡಿ ಎತ್ತರವಿರುವ ನಂದಿಯನ್ನು ಕಪ್ಪುಶಿಲೆಯಲ್ಲಿ ಕಡೆದು ನಯಗೊಳಿಸಲಾಗಿದೆ. ನಂದಿಯ ಕೊರಳಲ್ಲಿ ದಂಡೆ ಹಣೆಪಟ್ಟಿ, ಗಂಡೆ ಮತ್ತು ಲೊಡಗ ಸರಗಳಿಂದ ಅಲಂಕೃತವಾಗಿದೆ.

ಗರ್ಭಗೃಹದ ಮೇಲೆ ಪಾಂಸನ ಮಾದರಿಯ ಶಿಖರವನ್ನು ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ಹೊಯ್ಸಳ ಲಾಂಛನವಾದ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪವನ್ನು ಸ್ಥಾಪಿಸಲಾಗಿದೆ.

ಈ ದೇವಾಲಯದ ಶಿಲಾಶಾಸನವೊಂದು ಅತಿ ಮುಖ್ಯವಾದುದಾಗಿದೆ. ಕ್ರಿ.ಶ. ೧೨೭೯ರ ಈ ಶಾಸನವು ದೇವಗಿರಿ ಯಾದವ ಅರಸ ರಾಮಚಂದ್ರನ ಕಾಲದ್ದಾಗಿದೆ. ಈ ಶಾಸನದ ಆರಂಭದಲ್ಲಿ ಇಲ್ಲಿನ ಯತಿಯನ್ನು ಅನನ್ಯವಾಗಿ ವರ್ಣಿಸಿದೆ. ಯತಿಯನ್ನು ಶಾಸನದಲ್ಲಿ ತ್ರಿಭುವನ ಪರಿಜನ ಪಾರಿಜಾತ ವರಗುರು ಶಿವಯೋಗಿ ಶ್ರೀಮತು ಯೋಗಿಚಕ್ರವರ್ತಿ ಪ್ರಶಾದದೇವರು ಎಂದು ಹೇಳಿದೆ. ಪ್ರಶಾದದೇವರು ಎಲ್ಲ ಧರ್ಮ, ಸಿದ್ಧಾಂತಗಳನ್ನು ಬಲ್ಲವನಾಗಿದ್ದನೆಂದು ಹೇಳಿದೆ. ಇದರಲ್ಲಿ ಶಿವಶರಣರಾದ ಚಿಕ್ಕ, ಕಕ್ಕ, ಚೆನ್ನ, ಹೊನ್ನ, ಬಂಕ, ಬಸವರಾಜ, ಭೋಜ ಮೊದಲಾದವರನ್ನು ಉಲ್ಲೇಖಿಸಿದೆ. ಅಲ್ಲದೆ ನಾಥ ಸಂಪ್ರದಾಯದ

ಆದಿಗದೆ ಎದುನಾಥ, ಚತುರರಗಿನಾಥ, ಗೋರಖನಾಥ, ವಿಸ್ರರಾದೇವಿನಾಥ, ಕಾಳಿನಾಥ, ಸುರ್ಪಾಣನಾಥ, ಲೋಕನಾಥ, ನರನಾಥರನ್ನು ಮತ್ತು ಅವರ ಪ್ರಭಾವವು ಪ್ರಶಾದದೇವರ ಮೇಲೆ ಆಗಿರುವುದನ್ನು ಬಣ್ಣಿಸಿದೆ. ಈ ಪ್ರಶಾದದೇವರಿಗೆ ಯಾದವ ಅರಸ ರಾಮಚಂದ್ರದೇವನ ಮಹಾದುರ್ಗಾಧಿಪತಿ, ಶರಣಾಗತವಜ್ರಪಂಜರ, ಮಲೆಯಮಾಂಡಲಿಕರಗಂಡ, ಸತ್ಯವ ತಪ್ಪುವ ರಾಯರಗಂಡನೆಂದು ಹೆಸರಾದ ಹೆಮ್ಮಾಡಿದೇವನು ತನ್ನ ಸಂವರಣೆಯ ಸ್ಥಳದೊಳಗಿನ ಕೊಟ್ಟೂರ ವ್ರಿತ್ತಿಯ ಕಲ್ಯಾಣಪುರದ ಕಲಿದೇವರ ಆಸ್ಥಾನಿಕರ ಹಾಗೂ ನೆರೆಯ ಬಿದರಕೆರೆಯ ರಂಗಗೌಡ, ಅರಜಿಯ, ಮಾರಯ ಬಿಚಯಗೌಡ, ಸಾಮಂತ ಬೊಮ್ಮಯ್ಯ, ಮಾರಯ್ಯ, ಕಂಪಣಾಚಾರ್ಯ ಮುಂತಾದವರ ಸಮ್ಮುಖದಲ್ಲಿ ಪ್ರಶಾದದೇವರ ಮುಂದಿಟ್ಟು ಕೊಟ್ಟ ಶಾಸನವಾಗಿದೆ. ಶಾಸನದ ಕೊನೆಯಲ್ಲಿ ಶ್ರೀಯೋಗಿನಾಥ ಎಂದು ಕೊನೆಗೊಂಡಿದೆ.

ಈ ಶಾಸನದಲ್ಲಿ ಬಸವಣ್ಣನನ್ನು ಬಸವರಾಜನೆಂದು ಹೇಳಿದೆ. ಬಸವಣ್ಣನ ಉಲ್ಲೇಖವಿರುವ ಅಪರೂಪದ ಶಿಲಾಶಾಸನಗಳಲ್ಲಿ ಇದೂ ಒಂದಾಗಿದೆ. ಇದೇ ದೇವಾಲಯದ ಇನ್ನೊಂದು ಶಾಸನದಲ್ಲಿ ಕಲ್ಲೇಶ್ವರನನ್ನು ಕಲಿನಾಥದೇವರೆಂದು ಕರೆದಿದೆ. ಇದರಲ್ಲಿ ಕಲಿನಾಥದೇವರ ಅಭಿಷೇಕದ ತಿರುಮಲಭಟರ ಗದ್ದೆಶ್ರೀ ಎಂದಿದೆ. ಕಲ್ಲೇಶ್ವರ ದೇವಾಲಯಕ್ಕೆ ವಿಜಯನಗರ ಅರಸ ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ದಾನವನ್ನು ನೀಡಿದ್ದುದು ನಿಬಗೂರು ಶಾಸನದಿಂದ ಸ್ಪಷ್ಟವಾಗಿದೆ. ಈ ಶಾಸನದ ಕಾಲ ಕ್ರಿ.ಶ. ೧೫೨೬ ಆಗಿದೆ. ಅರೆಯ ಕ್ಷತ್ರಿಯರಾದ ವಿಶ್ವನಾಥ ರಾವುತರ ಮಕ್ಕಳಾದ ರಂಗನಾಥ ರಾವುತರು ತಮಗೆ ನಾಯಕತನಕ್ಕೆ ಪಾಲಿಸಿದ ಜಗಲೂರ ಸೀಮೆಯ ನಿಬಗೂರನ್ನು ಶ್ರೀ ಜಮದಗ್ನಿ ಋಷಿಯೀಶ್ವರರ ಆಶ್ರಮವಾದ ಹನತೊರೆಯ ತೀರದಲ್ಲಿ ಕಲ್ಲಿನಾಥಪುರ ವರಾಧೀಶ್ವರ ಶ್ರೀಕಲ್ಲಿನಾಥದೇವರ ಸನ್ನಿಧಿಯಲ್ಲಿ ಶ್ರೀಕೃಷ್ಣದೇವರಾಯರಿಗೆ ಧರ್ಮವಾಗಬೇಕೆಂದು ಬ್ರಾಹ್ಮಣ ಭೋಜನ, ಷಡ್ದರ್ಶನ ಮೊದಲಾದವರಿಗೆ ಛತ್ರ ನಡೆಯುವುದಕ್ಕೆ ಬಿಟ್ಟುಕೊಟ್ಟುದಾಗಿ ಹೇಳಿದೆ. ಈ ಶಾಸನದಲ್ಲಿ ಜನಗಿಹಳ್ಳವನ್ನು ಹನಯತೊರೆ ಎಂದು ಕರೆದಿದೆ. ಹಾಗೆಯೇ ಇಲ್ಲಿ ಜಮದಗ್ನಿ ಋಷಿಯ ಆಶ್ರಮವೂ ಇದ್ದುದು ಸ್ಪಷ್ಟವಾಗುತ್ತದೆ.

ಶ್ರೀ ಕಲ್ಲೇಶ್ವರ ದೇವಸ್ಥಾನದ ಗೋಪುರ

೨೦೧೩-೧೪ನೇ ಸಾಲಿನಲ್ಲಿ ಈ ಮಹಾದ್ವಾರವು ನಿರ್ಮಾಣವಾಗಿದೆ. ಈ ಗೋಪುರಕ್ಕೆ ಒಂದು ಕೋಟಿ ರೂ. ಗಳನ್ನು ಭಕ್ತಾಧಿಗಳಿಂದ ಮತ್ತು ಸರ್ಕಾರದಿಂದ ಪಡೆದು ಇದನ್ನು ನಿರ್ಮಾಣ ಮಾಡಲಾಗಿದೆ. ಈ ಕಟ್ಟಡವು ದೇವಸ್ಥಾನದ ಕಮಿಟಿಯ ನೇತೃತ್ವದಲ್ಲಿ ರಚಿಸಲಾಗಿತ್ತು. ಕಮಿಟಿಯ ಸದಸ್ಯರು ಹಾಗೂ ಕಮಿಟಿಯ ಕನ್ವಿನರ್ ಎಚ್.ಬಿ. ನಾಗರಾಜ್‌ರವರು ಇದರ ಜವಾಬ್ದಾರಿಯನ್ನು ಹೊಂದಿದ್ದರು. ಇದಕ್ಕೆ ದ್ವಾರ ಬಾಗಿಲು ಇದೆ. ಈ ಗೋಪುರಕ್ಕೆ ಹಲವಾರು ಭಕ್ತಾದಿಗಳು ಸಹಾಯ ಧನ ನೀಡಿದ್ದಾರೆ. ಈ ಗೋಪುರವು ಸುಮಾರು ಮೂರು ವರ್ಷಗಳ ಕಾಲ ನಿರ್ಮಿಸಲ್ಪಟ್ಟಿತು.

ಈ ಗೋಪುರವನ್ನು ಕಟ್ಟಿಸಲು ಸುಮಾರು ೧೦ ಅಡಿ ಆಳ ಬುನಾದಿಯನ್ನು ತೆಗೆಸಲಾಗಿತ್ತು. ಈ ಗೋಪುರವನ್ನು ಕಟ್ಟಲು ತಮಿಳುನಾಡಿನಿಂದ ಬಂದಿದ್ದರು. ಈ ಗೋಪುರದಲ್ಲಿ ಅನೇಕ ಚಿತ್ತಾರಗಳು ಅಂದರೆ ದೇವರು ಮತ್ತು ನರ್ತಕಿಯರು, ರಾಮಾಯಣ, ಮಹಾಭಾರತದಲ್ಲಿ ಬರುವ ಕೆಲವು ಪಾತ್ರಗಳನ್ನು ಗೋಪುರದಲ್ಲಿ ಚಿತ್ರಿಸಿದ್ದಾರೆ. ಹಾಗೂ ಹಲವು ರೀತಿಯ ಕಲಾಕೃತಿಗಳನ್ನು ಪ್ರಕಾಶಮಾನವಾದ ಚಿತ್ರಾಕೃತಿಗಳನ್ನು ನಿರ್ಮಿಸಿದ್ದಾರೆ.

ಇದು ಗೋಪುರದ ಒಳಭಾಗ ಇಲ್ಲಿ ಗೋಪುರ ಕಟ್ಟಲು ಹಣ ನೀಡಿದ ಎಲ್ಲಾ ಭಕ್ತಾಧಿಗಳ ಹೆಸರನ್ನು ಬರೆಸಲಾಗಿದೆ. ಗೋಪುರ ನಿರ್ಮಾಣಗೊಂಡ ನಂತರ ೧೨-೫-೨೦೧೪ರಂದು ಕುಂಭಾಭಿಷೇಕ, ಹೋಮಗಳ ಮೂಲಕ ಇದನ್ನು ಪ್ರತಿಷ್ಟಾಪಿಸಲಾಯಿತು. ಶ್ರೀ ಕಣ್ವಕುಪ್ಪೆ ಮಹಾಸ್ವಾಮಿಗಳ ನೇತೃತ್ವದಲ್ಲಿ ಇದನ್ನು ನೆರವೇರಿಸಲಾಯಿತು. ಈ ಎಲ್ಲಾ ಮಾಹಿತಿಯನ್ನು ಪೂಜಾರ್ ರೇವಣ್ಣವನರು ನೀಡಿದರು.

ಉಯ್ಯಾಲೆ ಕಂಬ ಮತ್ತು ದೀಪಮಾಲೆ ಕಂಬ

ದೇವಸ್ಥಾನದ ಮಂಟಪದ ಮುಂಭಾಗದಲ್ಲಿ ೨೫ ಅಡಿ ಎತ್ತರದ ಒಂದು ದೀಪಮಾಲೆಯಿರುವ ಕಂಬವಿದೆ. ಈ ದೀಪಮಾಲೆ ಕಂಬಕ್ಕೆ ಪ್ರತಿವರ್ಷ ಕಾರ್ತಿಕ ಮಾಸದ ಕೊನೆಯ ದಿನ ದೀಪ ಹಚ್ಚುತ್ತಾರೆ. ಇದಕ್ಕೆ ಸುಮರು ೭೫ ಅಡಿ ದೂರದಲ್ಲಿ ಒಂದು ಉಯ್ಯಾಲೆ ಕಂಬವಿದೆ. ಆ ಕಂಬಗಳು ದುರ್ಗದ ಶಿಲೆಯನ್ನು ಹೋಲುತ್ತವೆ. ಈ ಕಂಬಗಳು ೪೫ ಅಡಿ ಎತ್ತರವಿದೆ. ಅದರ ಮೇಲ್ಬಾಗದಲ್ಲಿ ಅಡ್ಡಡ್ಡವಾಗಿ ತೊಲೆಗಳನ್ನು ಹಾಕಿ ಉಯ್ಯಾಲೆಯ ಸರ್ಪಣಿಗಳನ್ನು ಹಾಕಿರುತ್ತಾರೆ. ಈ ಹಿಂದೆ ದೇವರನ್ನು ಕೂರಿಸಿ ತೂಗಿರಬಹುದೆಂದು ಊಹಿಸಲಾಗಿದೆ. ಈಗ ಸರಪಳಿಗಳು ಬಿದ್ದು ಹೋಗಿವೆ. ಈಗ ಈ ಉಯ್ಯಾಲೆ ಕಂಬದಲ್ಲಿ ದೇವರನ್ನು ಪೂಜಿಸುವುದಿಲ್ಲ. ಆ ಕಂಬದ ಹಿಂಭಾಗದಲ್ಲಿ ೭೫ ಅಡಿ ಎತ್ತರದ ಗೋಪುರವನ್ನು ನಿರ್ಮಿಸಲಾಗಿದೆ. ಉಯ್ಯಾಲೆ ಕಂಬವು ತುಂಬಾ ಎತ್ತರವಾಗಿದ್ದು ಒಂದೇ ಕಲ್ಲಿನಲ್ಲಿ ನಿರ್ಮಿಸಿರುವಂತೆ ಇದೆ. ಇಲ್ಲಿ ಎರಡೂ ಕಂಬಗಳಿಗೂ ಒಂದೊಂದು ಕಟ್ಟೆಯನ್ನು ನಿರ್ಮಿಸಲಾಗಿದೆ. ಈ ಕಟ್ಟೆಯ ಮೇಲೆ ಹಲವು ಮಂದಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಕುಳಿತುಕೊಳ್ಳುತ್ತಾರೆ. ಹಾಗೂ ಈ ದೇವಸ್ಥಾನದಲ್ಲಿ ಪರಕೀಯರ ದಾಳಿ ನಡೆದಂತಹ ಸಂದರ್ಭದಲ್ಲಿ ವಿಗ್ರಹಗಳನ್ನು ಭಗ್ನಗೊಳಿಸಿದ್ದಾರೆ. ಆ ವಿಗ್ರಹಗಳನ್ನು ದೇವಸ್ಥಾನದ ಹೊರಭಾಗದಲ್ಲಿ ಜೋಡಿಸಲಾಗಿದೆ. ಎತ್ತರದ ಬಸವಣ್ಣನ ವಿಗ್ರಹವನ್ನು ಏಕಶಿಲೆಯಲ್ಲಿ ಕೆತ್ತಿಸಲಾಗಿದೆ. ಇದಕ್ಕೆ ಭಕ್ತಾದಿಗಳು ಈ ಬಸವಣ್ಣನ ಬಾಯಿಗೆ ಬಾಳೆಹಣ್ಣನ್ನು ಹಚ್ಚುತ್ತಾರೆ.

ಕಲ್ಲೇಶ್ವರ ದೇವಸ್ಥಾನದ ಚಂದ್ರಸಾಲೆಯ ಮುಂಭಾಗ ಮತ್ತೊಂದು ಕಂಬಗಳುಳ್ಳ ಪಡಸಾಲೆ ಇದೆ. ಅದರಲ್ಲಿ ಒಂದು ಕಂಬದಲ್ಲಿ ಚೌಡಾಂಬಿಕೆ ದೇವರ ವಿಗ್ರಹವನ್ನು ಕೆತ್ತಲಾಗಿದೆ. ನಂತರ ದೇವಸ್ಥಾನದ ಹೊರಭಾಗದಲ್ಲಿ ಕಂಬಗಳಿಂದ ಕೂಡಿದ ಒಂದು ಮಂಟಪವಿದೆ. ಅದರ ಮುಂಭಾಗದಲ್ಲಿ ಕಲ್ಲೇಶ್ವರನ ಗರ್ಭಗುಡಿಗೆ ಎದುರಿಗೆ ೪ ಅಡಿ ಎತ್ತರದ ಬಸವಣ್ಣ ಮಲಗಿರುವ

ವಿಗ್ರಹವಿದೆ. ಈ ವಿಗ್ರಹವನ್ನು ವಾಯುವ್ಯ ದಿಕ್ಕನ್ನೆ ನೋಡುವಂತೆ ನಿರ್ಮಿಸಲಾಗಿದೆ. ಬಸವಣ್ಣನು ತನ್ನ ಕಾಲಿನಿಂದ ಒಂದು ಮಗುವನ್ನು ತುಳಿದುಕೊಂಡಿರುವಂತಹ ದೃಶ್ಯವನ್ನು ಕಾಣಬಹುದು. ಏಕೆಂದರೆ ಆ ಹೆಣ್ಣುಮಗು ಗಿಣ್ಣವನ್ನು ಬಸವಣ್ಣನಿಗೆ ಎಡೆಯಾಗಿ ತಂದಿದ್ದಳು ಆದರೆ ಅದನ್ನು ತರುವಾಗಲೇ ತಿನ್ನುತ್ತಾ ಬಂದಿದ್ದಳು, ಅದೇ ಕಾರಣಕ್ಕೆ ಆ ಮಗುವನ್ನು ಬಸವಣ್ಣ ತನ್ನ ಕಾಲಿನಲ್ಲಿ ತುಳಿದುಕೊಂಡು ಅವಳ ಮನೆಯ ದಿಕ್ಕಿಗೆ ಮುಖ ಮಾಡಿರುವ ರೀತಿ ಈ ವಿಗ್ರಹವನ್ನು ನಿರ್ಮಿಸಲಾಗಿದೆ.

೩.೨.೨ ವಿಘ್ನೇಶ್ವರನ ದೇವಸ್ಥಾನ

ಕಲ್ಲೇಶ್ವರನ ದೇವಸ್ಥಾನದ ಮುಂಭಾಗವೇ ವಿಘ್ನೇಶ್ವರನ ಮಂಟಪವಿದೆ. ಒಂದು ಎತ್ತರವಾದ ಕಟ್ಟೆಯನ್ನು ನಿರ್ಮಿಸಿ ಅದರ ಮೇಲೆ ವಿಘ್ನೇಶ್ವರನ ಮೂರ್ತಿಯನ್ನು ಕೆತ್ತಲಾಗಿದ್ದು ಅದಕ್ಕೆ ೪ ಕಂಬಗಳುಳ್ಳ ಒಂದು ಮಂಟಪವನ್ನು ನಿರ್ಮಿಸಿ ಆ ನಂತರ ಅದರ ಮೇಲೆ ಒಂದು ಗೋಪುರವನ್ನು ನಿರ್ಮಿಸಲಾಗಿದೆ. ವಿಘ್ನೇಶ್ವರನಿಗೆ ಪ್ರತಿ ದಿನದ ಪೂಜೆಯ ಜೊತೆಗೆ ಸಂಕಷ್ಟ ಚತುರ್ಥಿಯಂದು ವಿಶೇಷವಾಗಿ ಪೂಜೆ ನಡೆಸಲಾಗುತ್ತದೆ. ಗಣೇಶನ ಮಂಟಪದ ಮುಂಭಾಗ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಮುಸ್ಸೂರೇಶ್ವರ ದೇವಸ್ಥಾನ ಮತ್ತು ಕಾಳೋಬ ಮತ್ತು ಕರಿಬಸವನ ದೇವಸ್ಥಾನ ಇದೆ. ದೇವಸ್ಥಾನವು ವಿಶಾಲವಾದ ಅವರಣವನ್ನು ಹೊಂದಿದೆ. ದೇವಸ್ಥಾನದ ಕಾಂಪೊಂಡಿನ ಒಳಭಾಗದಲ್ಲಿಯೇ ಎಲ್ಲಾ ದೇವಸ್ಥಾನಗಳೂ ಎಲ್ಲಾ ವಿಗ್ರಹಗಳು ಹಾಗೂ ಸಣ್ಣ ತೇರು, ಮತ್ತು ಮಂಟಪಗಳಿವೆ. ಈ ದೇವಸ್ಥಾನದ ಎಡಭಾಗಕ್ಕೆ ನವಗ್ರಹಗಳನ್ನು ಸ್ಥಾಪಿಸಿರುವ ನವಗ್ರಹ ದೇವಸ್ಥಾನವಿದೆ.

ಯಾವುದೇ ಪ್ರಸಿದ್ಧ ದೇವಾಲಯಗಳಲ್ಲಿ ಇರುವಂತೆ ಶಕ್ತಿದೇವತೆಗಳ ಪ್ರತಿರೂಪಗಳಾಗಿ ಗುರುತಿಸಿಕೊಂಡಿರುವ ಈ ನವಗ್ರಹ ದೇವತೆಗಳನ್ನು ಕಲ್ಲೇಶ್ವರ ದೇಗುಲದ ಎಡಭಾಗದಲ್ಲಿ ಪ್ರತ್ಯೇಕ ದೇಗುಲವನ್ನು ನಿರ್ಮಿಸುವುದರ ಮೂಲಕವಾಗಿ ಒಂಬತ್ತು ದೇವತೆಗಳ ಅಂದರೆ ನವಗ್ರಹ ದೇವತೆಗಳ ದೇಗುಲ ನಿರ್ಮಿಸಿರುವುದನ್ನು ಕಾಣಬಹುದಾಗಿದೆ.

೩.೨.೩ ವೀರಭದ್ರೇಶ್ವರ ದೇವಸ್ಥಾನ

ಇದು ನವರಂಗ ದಕ್ಷಿಣ ದಿಕ್ಕಿಗೆ ವೀರಭದ್ರ ದೇವಸ್ಥಾನ ಇದೆ. ವೀರಭದ್ರೇಶ್ವರ ವಿಗ್ರಹವು ೬ ಅಡಿ ಎತ್ತರವುಳ್ಳ ಬಿಳಿಯ ರೂಪವುಳ್ಳ ಶಿಲೆಯಿಂದ ಕೆತ್ತಿರುತ್ತಾರೆ. ಈ ವಿಗ್ರಹವು ಬಹಳ ಸುಂದರವಾಗಿದೆ.

ವೀರಭದ್ರೇಶ್ವರ ದೇವಸ್ಥಾನವು ಸಹ ಹೆಚ್ಚಿನ ವಿಶೇಷತೆಯನ್ನು ಪಡೆದಿದೆ. ಕಲ್ಲೇಶ್ವರನು ತನ್ನ ತಂಗಿಯಾದ ಹಿಟ್ಟಿನ ಮಲ್ಲಮ್ಮನನ್ನು ಹೊರಗೆ ಕಳಿಸಿದಾಗ ವೀರಭದ್ರೇಶ್ವರನು ತನ್ನ ತಂಗಿಯಾದ ಹಿಟ್ಟಿನ ಮಲ್ಲಮ್ಮನನ್ನು ಮನೆಗೆ ಕರೆದನಂತೆ ಆದ್ದರಿಂದ ಪ್ರತಿವರ್ಷ ವೀರಭದ್ರ ದೇವರ ದೇವಸ್ಥಾನದಲ್ಲಿ ಹಿಟ್ಟಿನ ಮಲ್ಲಮ್ಮನನ್ನು ಕೂರಿಸುತ್ತಾರೆ. ಹಿಟ್ಟಿನ ಹುಣ್ಣಿಮೆ ಹಬ್ಬವನ್ನು

ಆಚರಿಸುತ್ತಾರೆ. ಇದು ಐತಿಹಾಸಿಕವಾದ ಹಿನ್ನೆಲೆಯನ್ನು ಹೊಂದಿರುವುದನ್ನು ಗಮನಿಸಬಹುದು. ಇಲ್ಲಿನ ಸ್ಥಳೀಯರು ಹೇಳುವಂತೆ ಶ್ರೀಕಲ್ಲೇಶ್ವರ ದೇವರಿಗೆ ಯಾವ ರೀತಿಯಾಗಿ ಭಕ್ತಿಯನ್ನು ಸಲ್ಲಿಸುತ್ತಾರೋ ಅದೇ ಶ್ರೀ ವೀರಭದ್ರೇಶ್ವರ ಸ್ವಾಮಿಗೂ ಕೂಡ ಹೃದಯ ಪೂರ್ವಕ ಭಕ್ತಿನಮನಗಳನ್ನು ಸಲ್ಲಿಸಲಾಗುತ್ತದೆ ಎಂದು ಇಲ್ಲಿನ ಸಾರ್ವಜನಿಕರ ಅಭಿಪ್ರಾಯವಾಗಿದೆ.

೩.೨.೪ ಗೌರಮ್ಮನ ದೇವಸ್ಥಾನ

ಇದು ಕಲ್ಲೇಶ್ವರ ದೇವಸ್ಥಾನದ ನವರಂಗದ ಉತ್ತರ ದಿಕ್ಕಿಗೆ ಪೂರ್ವಾಭಿಮುಖವಾಗಿ ಗೌರಮ್ಮನ ಗುಡಿಯಿದೆ. ಈ ಗುಡಿಯಲ್ಲಿ ಗೌರಮ್ಮನ ವಿಗ್ರಹವಿದೆ. ಈ ವಿಗ್ರಹವೂ ಕೂಡ ಉತ್ತಮ ಶಿಲ್ಪಕಲೆಯಿಂದ ಕೂಡಿದೆ.

ಗೌರಮ್ಮ ಕಲ್ಲೇಶ್ವರನ ಪತ್ನಿ ಎಂದು ತಿಳಿಸಲಾಗಿದೆ. ಪ್ರತಿ ವರ್ಷ ಜಾತ್ರೆ ಸಮಯದಲ್ಲಿ ಕಲ್ಲೇಶ್ವರ ಮತ್ತು ಗೌರಮ್ಮನ ದೇವಸ್ಥಾನಗಳಲ್ಲಿ ದೇವರನ್ನು ಮದುಮಕ್ಕಳನ್ನು ಮಾಡುವ ಕಾರ್ಯಕ್ರಮ ನಡೆಸುತ್ತಾರೆ. ಗೌರಿ ಹಬ್ಬಗಳಲ್ಲಿ ಹೆಚ್ಚಿನ ಪೂಜೆ ಅಲಂಕಾರಗಳು ನಡೆಯುತ್ತವೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೀರೆ ಉಡಿಸುವ ಹರಕೆಯನ್ನು ಹೊತ್ತುಕೊಂಡಿರುತ್ತಾರೆ. ಆದ್ದರಿಂದ ಗೌರಮ್ಮನಿಗೆ ಹೆಚ್ಚಿನ ಸಂಖ್ಯೆಯ ಸೀರೆಗಳು, ಹುಡಿಯಕ್ಕಿ ಬಳೆಗಳನ್ನು ತೊಡಿಸಲಾಗುತ್ತದೆ. ಹಕ್ಕಿ ಹಿಟ್ಟಿನ ಆರತಿಯನ್ನು ಬೆಳಗುತ್ತಾರೆ. ಈ ರೀತಿ ಗೌರಮ್ಮನ ದೇವಸ್ಥಾನದ ಮಹತ್ವನ್ನು ಕಾಣಬಹುದು. ನಂತರ ಚಂದ್ರಸಾಲೆಯ ಮುಂಬಾಗಿಲು ಹೆಚ್ಚಿನ ಚಿತ್ತಾರವುಳ್ಳ ದ್ವಾರಬಾಗಿಲಾಗಿದೆ.

ಇಲ್ಲಿನ ಸ್ಥಳೀಯ ಕಲ್ಲೇಶ್ವರ ದೇವರಿಗೆ ಯಾವ ತೆರೆನಾದ ಭಕ್ತಿಯನ್ನು ಸಲ್ಲಿಸುತ್ತಾರೋ ಅದೇ ತೆರೆನಾಗಿ ಶ್ರೀ ಕಲ್ಲೇಶ್ವರನ ಧರ್ಮಪತ್ನಿ ಎಂದು ಭಾವಿಸಲಾಗಿರುವ ಗೌರಮ್ಮ ದೇವಿಗೂ ಸಹ ಅಷ್ಟೇ ಭಕ್ತಿಯಿಂದ ನಡೆದುಕೊಳ್ಳುತ್ತಾರೆ ಎಂಬುದು ಸ್ಥಳೀಯರ ಅಭಿಮತವಾಗಿದೆ.

೩.೨.೫ ತ್ರಿಕೂಟ ಲಿಂಗೇಶ್ವರ ದೇವಾಲಯ

ಕಲ್ಲೇಶ್ವರ ಸ್ವಾಮಿಯ ದೇಗುಲದ ಬಲಭಾಗದಲ್ಲಿ ಅಂಗಳಕ್ಕೆ ಹೊಂದಿಕೊಂಡಿರುವಂತೆ ಉತ್ತರ ದಿಕ್ಕಿಗೆ ಮುಖ ಮಾಡಿರುವುದೇ ತ್ರಿಕೂಟ ಲಿಂಗೇಶ್ವರ ದೇಗುಲ, ಇದರ ಹೆಸರೇ ಹೇಳುವಂತೆ ಇದು ತ್ರಿಕೂಟ ಅಂದರೆ ಮೂರು ಗರ್ಭಗೃಹವನ್ನು ಹೊಂದಿರುವಂತದ್ದು. ಶಾಸನದಲ್ಲಿ ಉಕ್ತವಾಗಿರುವಂತೆ ಈ ದೇಗುಲದ ಪ್ರಾಚೀನ ಹೆಸರು ಮಣಲೇಶ್ವರ.[೯] ಕಾಲಾಂತರದಲ್ಲಿ ಈ ಹೆಸರು ಮರೆತು ಹೋಗಿ ತ್ರಿಕೂಟೇಶ್ವರ ಎಂಬ ಹೆಸರು ಬಂದಿದೆ. ಈ ದೇಗುಲವು ತಲಾ ಮೂರು ಗರ್ಭಗೃಹ ಮತ್ತು ಅಂತರಾಳಗಳು ಹಾಗೂ ಇವುಗಳನ್ನು ಒಳಗೊಂಡಂತೆ ನವರಂಗವಿದೆ. ದೇಗುಲದ ಉತ್ತರ ದಿಕ್ಕಿಗೆ ಮುಖಮಾಡಿರುವುದೇ ಗರ್ಭಗೃಹದಲ್ಲಿರುವಂತಹ ಲಿಂಗ. ಇದನ್ನು ಬ್ರಹ್ಮ ಎಂದು ಕರೆಯಲಾಗುತ್ತದೆ. ಪಶ್ಚಿಮಾಭಿಮುಖ ಗರ್ಭಗೃಹದಲ್ಲಿ ಲಿಂಗವೇ ವಿಷ್ಣು ಎಂದು ಪೂರ್ವದಿಕ್ಕಿಗೆ ಮುಖ ಮಾಡಿರುವಂತಹ ಗರ್ಭಗೃಹದಲ್ಲಿರುವ ಲಿಂಗವನ್ನು ಮಹೇಶ್ವರ ಎಂದು ಕರೆಯುವುದು ರೂಢಿ, ಕಲ್ಯಾಣ ಚಾಲುಕ್ಯ ಶೈಲಿಯ ಈ ಲಿಂಗಗಳ ಎತ್ತರ ಕ್ರಮವಾಗಿ ೨.೫,

೨.೩, ೨.೮೫ ಅಡಿಗಳಿವೆ. ಈ ಮೂರು ಗರ್ಭಗೃಹಗಳ ಬಾಗಿಲುವಾಡದಲ್ಲಿ ಅರೆಗಂಬ ಪೂರ್ಣಕುಂಬಗಳ ರಚನೆಗಳಿವೆ. ಲಲಾಟ ಫಲಕದಲ್ಲಿ ಯಾವುದೇ ತೆರೆನಾದ ಬಿಂಬ ಕಂಡು ಬರುವುದಿಲ್ಲ. ಬಾಗಿಲುಗಳ ಮೇಲ್ಬಗದಲ್ಲಿ ಉತ್ತರಾಂಗ ಭಾಗದಲ್ಲಿರುವ ಶಿಖರದ ರಚನೆಗಳು ಔತ್ತರೇಯ ಮಾದರಿಯವು. ಅಂತರಾಳಕ್ಕೆ ಕೂಡಿಕೊಂಡಿರುವ ನವರಂಗದಲ್ಲಿ ತಿರುಗಣೆ ಯಂತ್ರದಿಂದ ಕಡೆದ ಗಂಟೆಯಾಕೃತಿಯ ನಾಲ್ಕು ಕಂಬಗಳಿವೆ.[೧೦] ಅವುಗಳ ನಿರ್ಮಾಣಕ್ಕೆ ಬಳಸಿದ ಶಿಲೆ ನಾರುಗಲ್ಲು. ಈ ಶಿಲೆಯನ್ನು ಬೇರೆ ಕಡೆಯಿಂದ ತಂದು ಈ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ಈ ದೇವಾಲಯದ ನವರಂಗದಲ್ಲಿ ಭಿತ್ತಿಯಲ್ಲಿ ೬ ದೇವಕೊಷ್ಟಗಳಿರುವುದನ್ನು ಕಾಣಬಹುದು. ಇವುಗಳ ಮೇಲೆ ನಾಗರ ಶೈಲಿಯ ಶಿಖರಗಳಿರುವುದನ್ನು ನೋಡಬಹುದು. ಈ ತ್ರಿಕೂಟ ದೇಗುಲದಲ್ಲಿ ಮಹಿಷಾಸುರ ಮರ್ದಿನಿ, ನಾರಾಯಣ, ಸರಸ್ವತಿಯ ಶಿಲ್ಪಗಳಿವೆ. ನವರಂಗದ ದ್ವಾರವು ಅತ್ಯಂತ ಅಲಂಕೃತ ಕೆತ್ತನೆಗಳಿಂದ ನಿರ್ಮಾಣಗೊಂಡಿದ್ದು. ಶೈವದ್ವಾರಪಾಲಕರು ತಮ್ಮ ಕೈಯಲ್ಲಿ ತ್ರಿಶೂಲ, ಡಮರು, ಗದೆ ಹಾಗೂ ಅಭಯ ಹಸ್ತದಲ್ಲಿ ನಿಂತಿರುವರು. ಉಳಿದಂತೆ ತ್ರಿಶಾಖೆಗಳಿರುವ ಬಾಗಿಲಿನಲ್ಲಿ ಬಳ್ಳಿಯ ಸುರುಳಿಗಳೊಡಗೆ ಚಿತ್ರಿಸಿರುವ ವ್ಯಾಳದಿಂದೊಡಗೂಡಿದ ವ್ಯಾಳಶಾಖೆ, ವಜ್ರದ ಪಟ್ಟಿಕೆಯಿಂದಾದ ವಜ್ರಶಾಖೆ, ಸ್ಥಂಭದಿಂದಾದ ಸ್ಥಂಭ ಶಾಖೆಗಳಿವೆ. ಲಲಾಟಪಲಕದಲ್ಲಿ ಸಂಪತ್ತಿಗೆ ಹೆಸರಾದ ಗಜಲಕ್ಷ್ಮಿಯ ಬಿಂಬವಿದೆ. ದ್ವಾರದ ಮೇಲಿನ ಕೈಪಿಡಿಯ ಗೋಡೆಯ ಕೂಡಿನಲ್ಲಿ ಕಾರ್ತಿಕೇಯನ ಮೂರ್ತಿಯನ್ನು ಪ್ರತಿಷ್ಠಾಪಿಸಿರುವರು.[೧೧] ದೇವಾಲಯದಲ್ಲಿನ ಅಧಿಷ್ಠಾನ ಮಣ್ಣಿನಲ್ಲಿ ಮುಚ್ಚಿಕೊಂಡಿದೆ. ದೇವಾಲಯದ ಭಿತ್ತಿಯ ಭಾಗ ಅಲಂಕಾರ ರಹಿತವಾಗಿ ಸರಳವಾಗಿದೆ. ಗರ್ಭಗೃಹದ ಮೇಲಿನ ಭಾಗದಲ್ಲಿ ಫಾಂಸನಾ ಮಾದರಿಯ ಶಿಖರಗಳಿದ್ದ ಸಾಕ್ಷಿಗಳಿವೆ. ಆದರೆ ಅವುಗಳು ಇಂದು ಭಗ್ನವಾಗಿವೆ.

ಕಾಲದ ದೃಷ್ಟಿಯಿಂದ ಈ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ರಚನೆಯಾಗಿದ್ದು, ಮಣಲೇಶ್ವರ ದೇವರಿಗೆ ಅಂಗಭೋಗ, ರಂಗಭೋಗ ಮತ್ತು ನಂದಾದೇವಿಗೆಗೆ ದತ್ತಿ ನೀಡಿದ್ದನ್ನು ಕ್ರಿ.ಶ. ೧೨೩೫ರ ಶಾಸನ ತಿಳಿಸುತ್ತದೆಯಾದರೂ, ಅದರ ಅಕ್ಷರಗಳು ತೃಟಿತವಾಗಿರುವುದರಿಂದ ಯಾರು ಏನನ್ನು ದಾನ ನೀಡಿದರು? ಅದನ್ನು ಯಾರು ಸ್ವೀಕರಿಸಿದರು? ಎಂಬುದನ್ನು ತಿಳಿಯಲಸಾಧ್ಯ.[೧೨]

ತ್ರಿಕೂಟ ಲಿಂಗ ದೇವಾಲಯದ ಹಿನ್ನೆಲೆಯಲ್ಲಿ

ಬ್ರಹ್ಮ-ದೇವ ಮಂದಿರದ ಎಡ ಭಾಗದಲ್ಲಿ ಗರ್ಭಗುಡಿಯಲ್ಲಿ ಚಿತ್ತಾರದ ಚಚ್ಚೌಕದ ಮೆಟ್ಟಿಲುಗಳಿಂದ ಕೂಡಿದ ಪೀಠದಲ್ಲಿರುವ ತೆಂಗಿನಕಾಯಿ ಗಾತ್ರದ ಬ್ರಹ್ಮ ಸ್ವರೂಪಿಯಾದ ಶಿವಲಿಂಗವಿದೆ. ಬ್ರಹ್ಮದೇವರ ಪೀಠದ ಎಡಭಾಗದಲ್ಲಿ ಜಲಹರಿ ಇದೆ.

ಶಿವ-ಬ್ರಹ್ಮದೇವರ ಎದುರಿನ ಗರ್ಭಗುಡಿಯಲ್ಲಿ ಬಲಗಡೆ ಜಲಹರಿ ಇರುವ ಶಿವಲಿಂಗವಿದೆ. ಎದುರಿಗೆ ಕೊರಳಮಾಲೆಯ ಅಲಂಕಾರದಿಂದ ಕಣ್ಣು ಸೆಳೆಯುವ ಬಸವನ ವಿಗ್ರಹವಿದೆ.

ವಿಷ್ಣು–ಪ್ರವೇಶ ದ್ವಾರದ ಎದುರಿನ ಗರ್ಭಗುಡಿಯಲ್ಲಿ ಸುಂದರ ಪಾಣಿಪೀಠದಲ್ಲಿರುವ ಶಿವಲಿಂಗವಿದೆ.

ಮೂರು ಲಿಂಗಗಳ ಸಂಗಮದಿಂದಾಗಿಯೇ ಬ್ರಹ್ಮ, ವಿಷ್ಣು, ಶಿವ ಎಂದೂ ತ್ರಿಕೂಟಲಿಂಗ ದೇವಾಲಯವೆಂದು ಹೆಸರು ಬಂದಿದೆ ಎಂದು ಹೇಳಬಹುದು.

ಸಪ್ತಮಾತೃಕೆಯರ ಶಿಲ್ಪಪಟಿಕೆ ವಿಷ್ಣು ಗುಡಿಯ ಒಂದು ಕಡೆಯಲ್ಲಿ ಒಂದೇ ಕಲ್ಲಿನಲ್ಲಿ ಕೆತ್ತಲಾಗಿರುವ ನವಗ್ರಹ ವಿಗ್ರಹಗಳಿವೆ. ಎಣ್ಣೆ ಹಾಕಿರುವುದರಿಂದ ಮಿರಮಿರನೆ, ಮಿಂಚುತ್ತವೆ. ಈ ಗುಡಿಯಲ್ಲಿ ಹಲವಾರು ಗೂಡುಗಳಿದ್ದು ಒಂದು ಕಡೆ ಮಾತ್ರ ಸಪ್ತಮಾತೃಕೆಯರ ಶಿಲ್ಪಟ್ಟಿಕೆಯಿದ್ದು ಉಳಿದ ಎಲ್ಲ ಕಡೆ ಗೂಡುಗಳು ಖಾಲಿ ಇವೆ.

ಶಿವ, ವಿಷ್ಣು, ಬ್ರಹ್ಮ ದೇವರೆಂದು ಹೇಳುತ್ತಿದ್ದರೂ ಈ ಮೂರು ಲಿಂಗಗಳಿಗೆ ಕಲ್ಲಿನಾಥ, ಮಲ್ಲಿನಾಥ, ಅಲ್ಲಣ ದೇವರೆಂದೂ ಸ್ಥಳೀಯರು ಹೇಳುತ್ತಾರೆ. ಈ ದೇವರ ಗುಡಿ ತುಂಬಾ ಪ್ರಶಾಂತವಾದ ವಾತಾವರಣವನ್ನು ಹೊಂದಿದೆ.

ಉಗ್ರಾಣ

ಮೊದಲು ಈ ತ್ರಿಕೂಟೇಶ್ವರ ದೇವಾಲಯ ಹೆಚ್ಚು ಬೆಳಕಿಲ್ಲದೆ ಕೆತ್ತಲೆಯಿಂದ ಕೂಡಿತ್ತು ಹಾಗೂ ಜೀರ್ಣಾವಸ್ಥೆಯಲ್ಲಿದ್ದುದರಿಂದ ಸುಮಾರು ವರ್ಷಗಳಿಂದ ದೇವಾಲಯದೊಳಕ್ಕೆ ಯಾರು ಹೋಗುತ್ತಿರಲಿಲ್ಲ. ದೇವರಿಗೆ ಭಕ್ತಿಯಿಂದ ಕಾಣಿಕೆಯಾಗಿ ಎಣ್ಣೆ ತುಪ್ಪ ವಿಪರೀತ ಬರುತ್ತಿದ್ದುದರಿಂದ ಎಣ್ಣೆ ಮುಂತಾದವುಗಳನ್ನು ಇಲ್ಲಿಯೇ ಇಡುತ್ತಿದ್ದುದರಿಂದ ಎಣ್ಣೆ ಜಿಗಿದು ಒಂದು ರೀತಿಯ ಜಾರಿಕೆಯಿಂದ ಜನ ಒಳಗೆ ಕಾಲಿಡಲೇ ಹೆದರುತ್ತಿದ್ದು. ಈ ದೇವ ಮಂದಿರ ಒಂದು ರೀತಿಯ ಅಲಕ್ಷಣೆಗೆ ಗುರಿಯಾದಾಗ, ಹೇಗೋ, ಏನೋ, ಶಿವಮಂದಿರದ ಶಿವಲಿಂಗದ ಸುತ್ತ ಗೆದ್ದಲು ಹತ್ತಿ, ಗೆದ್ದಲೇ ಹುತ್ತವಾಗಿ ಶಿವಲಿಂಗ, ಶಿವಮಂದಿರ ಹುತ್ತದಿಂದ ಮುಚ್ಚಿಕೊಂಡು ಬಿಟ್ಟಿತಂತೆ, ಕ್ರಮೇಣ ಹುತ್ತದಲ್ಲಿ ಹಾವುಗಳಿರಬಹುದೆಂದು ಬೆಳೆಯಲು ಕಾರಣವಾಯಿತು. ಒಳಗೆ ಯಾರು ಹೋಗದೇ ತುದಿಯಲ್ಲಿಯೇ ಎಣ್ಣೆ–ತುಪ್ಪ ಇಟ್ಟು ಬಾಗಿಲು ಹಾಕುತ್ತಿದ್ದರಂತೆ, ಹೀಗೆ ದೇವಾಲಯದ ಕ್ರಮೇಣ ಉಗ್ರಾಣವಾಯಿತು. ಜೊತೆಗೆ ಶಿವಮಂದಿರದಲ್ಲಿ ಹೊಕ್ಕವರು ಯಾರು ಹಿಂತಿರುಗಿ ಬರುವುದಿಲ್ಲ ಎನ್ನುವ ಸ್ಥಳೀಯ ನಂಬಿಕೆಯಿತಂತೆ ಹಾಗೂ ಹಾಗೆ ಪ್ರತೀತಿಯೂ ಬೆಳೆಯಿತಂತೆ ಎಂದು ಸ್ಥಳೀಯರು ಹೇಳುತ್ತಾರೆ. ಈ ರೀತಿಯಾಗಿ ಧಾರ್ಮಿಕವಾಗಿ ಈ ಒಂದು ಸ್ಥಳವು ಐತಿಹಾಸಿಕವಾದ ಮಹತ್ವವನ್ನು ಪಡೆದುಕೊಂಡಿದೆ ಎಂದು ಹೇಳಬಹುದು.

೩.೨.೬ ಗುಗ್ಗರಿ ಬಸವೇಶ್ವರನ ದೇವಾಲಯ

ಕಲ್ಲೇದೇವರಪುರ ಗ್ರಾಮದ ಉತ್ತರಾಭಿಮುಖ ದಿಕ್ಕಿಗೆ ಇದೆ. ಈ ದೇವಾಲಯವು ಪೂರ್ವಾಭಿಮುಖವಾಗಿರುವುದನ್ನು ನೋಡಬಹುದಾಗಿದೆ. ಈ ದೇವಾಲಯದಲ್ಲಿ ಎರಡು ಅಡಿ ಎತ್ತರವಿರುವ ಚಿಕ್ಕ ನಂದಿಯ ಶಿಲ್ಪವಿದೆ. ಈ ನಂದಿ ಶಿಲ್ಪವನ್ನು ಜನಪದರು ಬಸವ, ಬಸವಣ್ಣ

ಎಂದು ಸಹ ಕರೆಯುವುದನ್ನು ಜನಪದರ ಹಿನ್ನೆಲೆಯಲ್ಲಿ ಹಾಗೂ ಇಂದಿಗೂ ಹಾಗೆ ಕರೆಯಲಾಗುವುದನ್ನು ಕಾಣಬಹುದು. ಕಲ್ಲೇದೇವರಪುರ ಗ್ರಾಮದಲ್ಲಿ ಪ್ರತಿವರ್ಷದಂತೆ ಹಂಪೆಯ ಹುಣ್ಣಿಮೆ ದಿನದಂದು ಗುಗ್ಗರಿ ಉತ್ಸವದ ಆಚರಣೆಯನ್ನು ಅತ್ಯಂತ ವಿಜೃಂಭಣೆಯಿಂದ ಈ ದೇವಾಲಯದಲ್ಲಿ ಆಚರಿಸಲಾಗುತ್ತದೆ. ಆದ್ದರಿಂದ ಇದಕ್ಕೆ ಗುಗ್ಗರಿ ಬಸವಣ್ಣ ಎಂಬ ಹೆಸರು ಪಡೆದಿದೆ.[೧೩]

೩.೨.೭ ಅಳ್ಳಳ್ಳಿ ಬಸವಣ್ಣ ದೇವಾಲಯ

ಕಲ್ಲೇದೇವರಪುರ ಗ್ರಾಮದ ದಕ್ಷಿಣ ದಿಕ್ಕಿಗಿರುವ ಊರಿನ ಹೊರ ಪ್ರದೇಶದ ಹೊಲದಲ್ಲಿ ಪೂರ್ವಾಭಿಮುಖ ಮಾಡಿರುವ ಚಿಕ್ಕ ಗುಡಿಯಿದೆ. ಇದು ಸರಿಸುಮರು ೬ ಅಡಿ ಎತ್ತರದ ಸ್ಥಂಭದ ಮೇಲೆ ಕಲ್ಲು ಚಪ್ಪಡಿಗಳನ್ನು ಬಳಸಿಕೊಂಡು ಪೆಟ್ಟಿಗೆ ಅಕೃತಿಯ ಚಿಕ್ಕದೇವಾಲಯವನ್ನು ಸ್ಥಳೀಯ ಗ್ರಾಮಸ್ಥರ ನೆರವಿನಿಂದ ನಿರ್ಮಿಸಲಾಗಿದೆ. ಇದು ಸಹ ಕಲ್ಲೇಶ್ವರ ದೇವರಿಗೆ ನೀಡುವಷ್ಟು ಪ್ರಾಮುಖ್ಯತೆಯನ್ನು ಈ ದೇವರಿಗೂ ಸ್ಥಳೀಯ ನೀಡುತ್ತಿದ್ದರು. ಇದನ್ನು ನೋಡಿದ ತಕ್ಷಣ ಚಿತ್ರದುರ್ಗ ಬೆಟ್ಟದಲ್ಲಿನ ಒಂಟಿಕಲ್ಲು ಬಸವನ ದೇಗುಲವು ನೆನಪಾಗುವುದು.[೧೪] ಈ ದೇವಾಲಯದಲ್ಲಿ ಚಿಕ್ಕ ನಂದಿ ವಿಗ್ರಹವನ್ನು ಇಡಲಾಗಿದೆ.

೩.೨.೮ ಪಾಂಡುರಂಗ-ರುಕ್ಮಿಣಿ ದೇವಾಲಯ

ಕಲ್ಲೇದೇವರಪುರ ಗ್ರಾಮದ ಪೂರ್ವ ದಿಕ್ಕಿಗೆ ಇದೆ. ಈ ದೇವಾಲಯುವು ಪೂರ್ವಾಭಿಮುಖವಾಗಿರುವುದನ್ನು ನೋಡಬಹುದು. ಈ ದೇವಾಲಯವು ಚೌಕಾಕಾರವಾಗಿದ್ದು, ಗರ್ಭಗೃಹ, ನವರಂಗ ಹಾಗೂ ಅಂತರಾಳವನ್ನು ಒಳಗೊಂಡಿದೆ. ಸರಳವಾದ ಭಿತ್ತಿಯನ್ನು ಒಳಗೊಂಡಂತೆ ಸರಳವಾದ ಅಲಂಕಾರ ರಚನೆಯನ್ನು ಒಳಗೊಂಡಿದೆ. ಪ್ರತಿ ತಿಂಗಳು ಏಕಾದಶಿಯಂದು ವಿಶೇಷವಾದ ಪೂಜಾಚರಣೆಗಳು ಜರುಗುತ್ತವೆ. ಈ ದೇವರು ಸಹ ಕಲ್ಲೇದೇವರಪುರದ ಪ್ರಮುಖ ದೈವವಾಗಿ ಗುರುತಿಸಿಕೊಂಡಿದೆ.

೩.೨.೯ ಆಂಜನೇಯ ದೇವಾಲಯ

ಕಲ್ಲೇದೇವರಪುರದ ಗ್ರಾಮ ದೇವರೆಂದೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ತೆರೆದ ಅಂತರಾಳವನ್ನು ಹೊಂದಿದ್ದು ಸರಳ ಅಲಂಕಾರ ರಚನೆಗಳಿಂದ ನಿರ್ಮಾಣಗೊಂಡಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ೯-೧೦ ಅಡಿ ಎತ್ತರದ ಗರುಡ ಗಂಭವನ್ನು ನಿಲ್ಲಿಸಲಾಗಿದೆ. ಪ್ರತಿ ಶನಿವಾರದಂದು ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಪ್ರತಿ ವರ್ಷ ರಾಮನವಮಿಯೆಂದು ವಿಶೇಷ ಅಭಿಷೇಕ ಪೂಜೆಗಳನ್ನು ನೆರವೇರಿಸಲಾಗುತ್ತದೆ.

ಶಾಸನಗಳು

ಕಲ್ಲೇದೇವರಪುರದ ಕಲ್ಲೇಶ್ವರ ದೇವಾಲಯದ ಪಕ್ಕದಲ್ಲಿ ಒಂದು ಶಿಲಾ ಶಾಸನವಿದೆ. ದೇವಾಲಯದ ಹಿಂಭಾಗದಲ್ಲಿ ಎರಡು ಶಿಲಾಶಾಸನಗಳಿವೆ. ದೇವಾಲಯದ ಒಳಗಡೆ ಒಂದು ಶಿಲಾಶಾಸನವಿದೆ. ಇದು ಸಂರಕ್ಷಿತವಾಗಿದೆ. ದೇವಾಲಯದ ಹೊರಗಡೆ ಇರುವ ಶಾಸನಗಳು ಯಾವುದೇ ರೀತಿಯ ರಕ್ಷಣೆಗಳಿಲ್ಲದೇ ತುಂಬಾ ಶಿಥಿಲಗೊಂಡ ಸ್ಥಿತಿಯಲ್ಲಿವೆ.

ಊರು–ಕಲ್ಲೇದೇವರಪುರ

ಸ್ಥಳ–ಕಲ್ಲೇಶ್ವರ ದೇವಾಲಯದ ಹಿಂಭಾಗದಲ್ಲಿ (ಜಗಲೂರು ೩೩ನೇ ಶಾಸನ)

ಕ್ರಿ.ಶ. ೧೨೩೫ನೇ ಕಾಲಮಾನದಲ್ಲಿ ಶ್ರೀ ಹೊಯ್ಸಳ ಸೋಮೇಶ್ವರನ ಬಗ್ಗೆ ದಾವಣಗೆರೆ ಜಿಲ್ಲೆಯಲ್ಲಿಯೇ ದೊರೆತ ಪ್ರಥಮ ಶಾಸನವಾಗಿದೆ. ಈ ಶಾಸನವು ಸೋಮೇಶ್ವರನ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಸೋಮೇಶ್ವರನು ನೊಳಂಬವಾಡಿ ಮೂವತ್ತುಸಾವಿರ ಹಾಗೂ ಗಂಗವಾಡಿ ತೊಂಭತ್ತಾರು ಸಾವಿರ ಪ್ರದೇಶಗಳನ್ನು ಆಳುತ್ತಿದ್ದು ಹೊಯ್ಸಳರ ಅನೇಕ ಬಿರುದಾವಳಿಗಳನ್ನು ಧರಿಸಿದ್ದನೆಂದು ತಿಳಿದುಬರುತ್ತದೆ.

ನಾರಸಿಂಹ ನಾಯಕ ಮತ್ತು ಮಲ್ಲಯ್ಯ ನಾಯಕರು ಬೊಮ್ಮತ್ತನೂರು (ಚಿತ್ರದುರ್ಗ ಸೀಮೆ) ಸೀಮೆಯನ್ನು ಆಳುತ್ತಿದ್ದರೆಂದು ಬೊಮ್ಮತ್ತನೂರ ಸ್ವಯಂಭು ಮಣಲೇಶ್ವರ ದೇವರಿಗೆ ದತ್ತಿಯನ್ನು ಕೊಟ್ಟ ದಾನದ ಬಗ್ಗೆ ಉಲ್ಲೇಖವನ್ನು ಈ ಶಾಸನವು ತಿಳಿಸುತ್ತದೆ ಎಂದು ಹೇಳಬಹುದು.

ಊರು–ಕಲ್ಲೇದೇವರಪುರ

ಸ್ಥಳ–ಕಲ್ಲೇಶ್ವರ ದೇವಾಲಯದಲ್ಲಿ ದಕ್ಷಿಣ ದಿಕ್ಕಿಗೆ ಇದೆ. (ಜಗಲೂರಿನ ೩೨ನೇ ಶಾಸನ)

ಕಲ್ಲೇದೇವರಪುರದ ಕಲ್ಲೇಶ್ವರ ದೇಗುಲದ ದಕ್ಷಿಣಕ್ಕೆ ನೆಟ್ಟಕಲ್ಲು ಸಹ ದಾನಶಾಸನವಾಗಿದೆ.

ದೇಗುಲದ ಪ್ರಕಾರದಲ್ಲಿ ನೆಟ್ಟ ಒಂದನೇ ಕಲ್ಲಿನಲ್ಲಿ ಕಲ್ಲೇದೇವರಪುರದ ಕಲ್ಲಿನಾಥ ದೇವರಿಗೆ ಅಭಿಷೇಕಕ್ಕಾಗಿ ತಿರುಮಲಭಟ್ಟರು ಗದ್ದೆ ದಾನ ನೀಡಿದ ಬಗ್ಗೆ ಉಲ್ಲೇಖವಿದೆ. (೩೧ನೇ ಶಾಸನ) ದೇವಸ್ಥಾನದ ಒಳಗಡೆ ಉತ್ತರ ದಿಕ್ಕಿನಲ್ಲಿ ನೆಟ್ಟ ಶಾಸನ (ಶ.ವ ೧೨೦೧) ಕ್ರಿ.ಶ. ೧೨೭೯ರಲ್ಲಿ ಪುತ್ರೋತ್ಸವವಾದ ಸಮಯದಲ್ಲಿ ನೀಡಿದ ದಾನ ಶಾಸನವಾಗಿದೆ. ಮಹಾದುರ್ಗಾಧಿಪತಿಯ ಹೆಮ್ಮಾಡಿದೇವನು ಕೊಟ್ಟೂರು ವಿತ್ತಿಯ ತನ್ನ ಕ್ಷೇತ್ರದ ಮದುರೈ ಹಳ್ಳಿಯ ಮಾರಯ್ಯ ಬೀಚೇಯಗೌಡ, ಸಾಮಂತ ಬೊಮ್ಮಯ್ಯ, ಬಿದಿರಕೆರೆ ಶ್ರೀರಂಗಗೌಡ, ಕಂಪಣಾಚಾರ್ಯ, ಅಜೀಯರು, ಮೂವತ್ತಾರು, ರಾಜಗುರುಗಳು ಹಾಗೂ ಕಲಿದೇವರ ಆಸ್ಥಾನಿಕರ ಸಾಕ್ಷಿಯಾಗಿ ದಾನ ನೀಡಿ ಶಾಸನ ನಿಲ್ಲಿಸಿದ್ದಾನೆಂದು ಇನ್ನೂ ಅನೇಕ ವಿಚಾರಗಳನ್ನು ತಿಳಿಸುತ್ತದೆ. ಹಾಗೂ

ರಾಜನ ಬಿರುದಾವಳಿಗಳನ್ನು ಅರೆಹುವ ಈ ಶಾಸನ ಮಧ್ಯಯುಗೀನ ಗದ್ಯಶೈಲಿಯು ಇರುವುದು ವಿಶೇಷವಾಗಿದೆ.

ಊರು–ಕಲ್ಲೇದೇವರಪುರ

ಸ್ಥಳ–ಕಲ್ಲೇಶ್ವರ ದೇವಾಲಯದ ಒಳಗಡೆ ಪಶ್ಚಿಮಾಭಿಮುಖವಾಗಿದೆ.

ಈ ಶಾಸನವು ಕಲ್ಲೇದೇವರಪುರಕ್ಕೆ ಬಸವಣ್ಣನವರು ಭೇಟಿ ನೀಡಿದರ ಉಲ್ಲೇಖವನ್ನು ತಿಳಿಸುತ್ತದೆ ಎಂದು ಹೇಳಲಾಗಿದೆ. ಬಸವಣ್ಣನವರು ಇಲ್ಲಿ ತಂಗಿ 'ಕಾಯಕ ತತ್ವ'[೧೫] ಹಾಗೂ ಐಕ್ಯತೆಯ ಬಗ್ಗೆ ಪ್ರವಚನವನ್ನು ನೀಡಲಾಗಿತ್ತು ಎಂಬುದು ಸ್ಥಳೀಯರ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಶಾಸನವನ್ನು ಗಮನಿಸಿದಾಗ ಇವರು ಇಲ್ಲಿಗೆ ಭೇಟಿ ನೀಡಿದರ ಪ್ರತೀಕವಾಗಿ 'ಬಸವ ಮಂಟಪ' ಸ್ಥಾಪಿಸುವುದನ್ನು ಗಮನಿಸಬಹುದು.

೩.೩ ಮೂರ್ತಿಶಿಲ್ಪಗಳು

ಮೂರ್ತಿಶಿಲ್ಪಗಳ ಉಗಮ

ಭಾರತದ ವಿವಿಧ ನೆಲೆಗಳ ಉತ್ಖನನದಲ್ಲಿ ದೊರೆತ ಪ್ರಾಕ್ತನಶಾಸ್ತ್ರ ಆಧಾರಗಳಿಂದ ಮೂರ್ತಿಶಿಲ್ಪಗಳು ವಾಸ್ತುಶಿಲ್ಪದಷ್ಟೆ ಪ್ರಾಚೀನವಾದವೆಂದು ತಿಳಿದುಬಂದಿದೆ. ಸಿಂಧೂ ನದಿ ಬಯಲಿನ ಸಂಸ್ಕೃತಿಯಲ್ಲಿ ದೊರೆತ ಶಿಲ್ಪಗಳೇ ಈವರೆಗೆ ಲಭ್ಯವಾದ ಭಾರತದ ಅತ್ಯಂತ ಪ್ರಾಚೀನ ಮೂರ್ತಿಶಿಲ್ಪಗಳೆಂದು ಪರಿಗಣಿಸಲಾಗಿದೆ.[೧೬] ಇವು ನಂತರದ ಭಾರತೀಯ ಮೂರ್ತಿಶಿಲ್ಪಗಳ ಬೆಳವಣಿಗೆಗೆ ಪ್ರೇರಕವಾದವು. ವೇದಗಳ ಕಾಲದಲ್ಲಿ ಪ್ರಕೃತಿಯನ್ನು ಪೂಜಿಸುತ್ತಿದ್ದರೂ ಇಂದ್ರ, ವರುಣ, ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯಾಕೃತಿಯ ಕಲ್ಪನೆಯನ್ನು ನೀಡಿರುವುದನ್ನು ಕಾಣಬಹುದು. ರಾಮಾಯಣ ಹಾಗೂ ಮಹಾಭಾರತಗಳಲ್ಲಿ ದೇವಾಲಯಗಳ ಉಲ್ಲೇಖವಿರುವುದರಿಂದ ಆ ಕಾಲದಲ್ಲಿ ವಿಗ್ರಹರಾಧನೆ ಸ್ವಲ್ಪಮಟ್ಟಿಗೆ ಪ್ರಚಲಿತದಲ್ಲಿತ್ತೆಂದು ಪ್ರಾಕ್ತನಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದಿ ಇತಿಹಾಸ ಕಾಲದಲ್ಲಿ ಮೌರ್ಯರ ಶಿಲ್ಪಾಕೃತಿಗಳು ಅತ್ಯಂತ ಪ್ರಾಚೀನವಾದವುಗಳು. ಕಲ್ಲಿನ ಸ್ತಂಭಗಳ ಮೇಲಿನ ವೃಷಭ, ಆನೆ, ಸಿಂಹ, ಕುದುರೆ ಮೊದಲಾದ ಆಕೃತಿಗಳು ಪ್ರಮುಖವಾದವು.[೧೭] ಮೌರ್ಯರ ಶಕ್ತಿಯು ಇಳಿಮುಖವಾಗುತ್ತಿದ್ದಂತೆ ಶುಂಗರು, ಕುಶಾನರು, ಕಳಿಂಗರು ಹಾಗೂ ಗುಪ್ತರ ಕಾಲಗಳಲ್ಲಿ ಮೂರ್ತಿಶಿಲ್ಪಗಳ ರಚನೆಗೆ ಪ್ರೋತ್ಸಾಹ ನೀಡಿದರು. ಅಲ್ಲದೇ ಇದೇ ಕಾಲದಲ್ಲಿ ವಿವಿಧ ಸಂಸ್ಕೃತಿಗಳ ಸಂಗಮವಾದ ಗಾಂಧಾರ ಶಿಲ್ಪಕಲೆಯು ಬೆಳವಣಿಗೆಯಾಯಿತು.[೧೮]

ಕರ್ನಾಟಕವು ಮೂರ್ತಿಶಿಲ್ಪಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಮೂರ್ತಿಶಿಲ್ಪಗಳ ಪ್ರಾಚೀನತೆಯನ್ನು ಗಮನಿಸುವುದಾದರೆ ಪಿಕ್ಲಿಹಾಳ್, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ನೆಲೆಗಳಲ್ಲಿ ನಡೆಸಿದ ಉತ್ಖನನಗಳಿಂದ ನೂತನ ಶಿಲಾಯುಗದ ನಸುಡಾವೆ ಮಣ್ಣಿನ ಮೂರ್ತಿಗಳು

ದೊರೆತಿವೆ. ಅವುಗಳು ಅಂದಿನ ಧಾರ್ಮಿಕ ಸ್ಥಿತಿಗತಿಯ ಜೊತೆಗೆ ಕರ್ನಾಟಕದ ಮೂರ್ತಿಶಿಲ್ಪದ ಪೂರ್ವಭಾವಿ ಹಂತವನ್ನು ಸೂಚಿಸುತ್ತವೆ. ನಂತರ ಚಾರಿತ್ರಿಕ ಯುಗದಲ್ಲಿ ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರ ಅರಸರು ಮೂರ್ತಿಶಿಲ್ಪದ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು.

ದೇವಾಲಯಗಳ ಅವಿಭಾಜ್ಯ ಅಂಗಗಳಾದ ಮೂರ್ತಿಶಿಲ್ಪಗಳು[೧೯] ಕಲ್ಲೇದೇವರಪುರ ಪರಿಸರದಲ್ಲಿ ಕಂಡುಬರುತ್ತವೆ. ಪ್ರಮುಖವಾಗಿ ಚಾಲುಕ್ಯ ಕಾಲದಿಂದ ಹಿಡಿದು ಚಿತ್ರದುರ್ಗದ ಪಾಳೆಯಗಾರರ ಕಾಲದವರೆಗೂ ಸಾಕಷ್ಟು ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಅವುಗಳನ್ನು ಶೈವ, ವೈಷ್ಣವ, ಶಾಕ್ತಮೂರ್ತಿ ಶಿಲ್ಪಗಳನ್ನಾಗಿ ಅಧ್ಯಯನ ಮಾಡಲಾಗಿದೆ.

ನಾಡಿನಲ್ಲಿ ದೇವತಾರಾಧನೆ ಮತ್ತು ದೇವಾಲಯಗಳ ನಿರ್ಮಾಣ ಕಾರ್ಯ ಎಂದು ಆರಂಭವಾಯಿತೋ ಅಂದಿನಿಂದಲೇ ದೇವತಾಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ಸಾಗಿ ಬಂದಿದೆ. ಯಾವುದೇ ದೇವಾಲಯವಾದರೂ ಒಂದಲ್ಲಾ ಒಂದು ಸಾಂಕೇತಿಕ ಮೂರ್ತಿಯನ್ನು ಹೊಂದಿರುವುದು ಸ್ಪಷ್ಟ. ಕಲ್ಲೇದೇವರಪುರದಲ್ಲಿ ಯತಿ, ಸಪ್ತಮಾತೃಕೆಯರು, ನಾರಾಯಣ, ವೀರಭದ್ರ, ಕಾರ್ತಿಕೇಯ, ದಕ್ಷಬ್ರಹ್ಮ ಮತ್ತು ನಂದಿಯ ಶಿಲ್ಪಗಳಿವೆ.

ಮೂರ್ತಿಶಿಲ್ಪಗಳು

ಶಿಲ್ಪ : ಯತಿಶಿಲ್ಪ

ಊರು : ಕಲ್ಲೇದೇವರಪುರ

ಕಾಲ : ೧೨ನೇ ಶತಮಾನ

ಸ್ಥಳ : ಕಲ್ಲೇಶ್ವರ ದೇವಾಲಯದ ನವರಂಗದ ದಕ್ಷಿಣಕ್ಕೆ ಇದೆ.

ಬಳಸಿದ ಶಿಲೆ : ಹಸಿರು ಶಿಲೆ

ಕಲ್ಲೇಶ್ವರ ದೇವಾಲಯದ ನವರಂಗದ ಉತ್ತರಕ್ಕೆ ಇತ್ತೀಚೆಗೆ ವಿಸ್ತರಿಸಿ ಕಟ್ಟಿರುವ ಚಿಕ್ಕ ಕೊಠಡಿಯಲ್ಲಿ ಯತಿಯೊಬ್ಬನ ಶಿಲ್ಪವಿದೆ. ದಕ್ಷಿಣ ದಿಕ್ಕಿಗೆ ಮುಖ ಮಾಡಿರುವ ಈ ಶಿಲ್ಪ ಹಸಿರು ಶಿಲೆಯದು ಹಾಗೂ ಸ್ಥಳೀಯರು ಗುರುತಿಸುವಂತೆ ಈ ಶಿಲ್ಪ ಸಿದ್ದಪ್ಪನದು. ಇದು ೨ ಅಡಿ ಎತ್ತರ, ೧ ಅಡಿ ಅಗಲವಿದೆ. ಶಿಲ್ಪದ ಲಕ್ಷಣವನ್ನು ಗಮನಿಸಿದರೆ ಈತನ ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲ, ಕೊರಳಲ್ಲಿ ಸರ, ರುದ್ರಾಕ್ಷಿಯ ಮಾಲೆ, ಕೈಗಳಲ್ಲಿಯೂ ರುದ್ರಾಕ್ಷಿಯ ಕೆಯೂರು ಮತ್ತು ಕಂಕಣಗಳನ್ನು ಕಾಲಿಗೆ ಕಾಲ್ಗಡಗಗಳನ್ನುಧರಿಸಿರುವರು. ಈತನ ಮುಖಭಾವದಲ್ಲಿ ದೊಡ್ಡ ಕಣ್ಣು, ದಪ್ಪನೆಯ ತುಟಿ, ಊದು ಕೆನ್ನೆಗಳು ಇರುವಂತೆ ಶಿಲ್ಪಿಯು ಕೆತ್ತಿದ್ದಾನೆ. ಸುಖಾಸೀನನಾಗಿ ಕುಳಿತ ಇವನು ತನ್ನ ಎಡಗೈಯನ್ನು ಆರಾಮವಾಗಿ ಮಂಡಿಯ ಮೇಲಿರುವಂತೆ ಇಳಿಬಿಟ್ಟಿರುವನು. ಶಿಲ್ಪದಲ್ಲಿ ಗಮನ ಸೆಳೆಯುವ ಲಕ್ಷಣವೆಂದರೆ, ಬಲಗೈಯಲ್ಲಿ ಹಿಡಿದಿರುವ ದಂಡ, ಇದರ ಉದ್ದ ೧.೧ ಅಡಿ, ಹರಡಿರುವ ಈತನ ಕೇಶರಾಶಿಯು ನೆರಿಗೆ ನೆರಿಗೆಯಂತೆ

ಬಾಚಿದಂತಿದ್ದು ಆತನ ಎರಡು ಭುಜಗಳ ಮೇಲೆ ಇಳಿಬಿದಿದೆ. ಈತನ ನೀಳ ಜಡೆ ದಂಡ ಮತ್ತು ರುದ್ರಾಕ್ಷಿಯ ಮಾಲೆಗಳು ಈತ ಶೈವ ಪಂಥೀಯನೆಂಬುದನ್ನು ಶೃತಪಡಿಸುತ್ತವೆ. ಉದರ ಸಹಿತ ಭುಜ ಮತ್ತು ಬೆನ್ನನ್ನು ಸುತ್ತುವರೆದಿರುವ ಒಂದು ಎಳೆಯ ಉಪವೀತವನ್ನು ಧರಿಸಿರುವನು. ಬಲಗೈಯಲ್ಲಿ ಹಿಡಿದಿರುವ ದಂಡ ಈ ಶಿಲ್ಪದಲ್ಲಿನ ಮುಖ್ಯ ಆಕರ್ಷಣೆ. ದಂಡ ಅಧಿಕಾರದ ಸಂಕೇತ, ಕರ್ನಾಟಕದ ಕೆಲವು ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ದಂಡ ಮತ್ತು ಕಟ್ಟಿಗೆಯವರ ಉಲ್ಲೇಖಗಳಿವೆ. ಕ್ರಿ.ಶ. ೧೧೧೮ರ ಶಿಕಾರಿಪುರದ ಶಾಸನವೊಂದು ಅಗ್ರಹಾರದಲ್ಲಿ ವಾಸಿಸುತ್ತಿದ್ದ ಕಟ್ಟಿಗೆ ಮದುವಯ್ಯನನ್ನು ಹೆಸರಿಸುತ್ತದೆ.[೨೦] ವಿಜಯನಗರ ಕಾಲದ ಶಾಸನಗಳಲ್ಲಿ ಕಟ್ಟಿಗೆ ಅಹಮದ್‌ಖಾನ್ ಮತ್ತು ಕಟ್ಟಿಗೆ ಲಿಂಗಪ್ಪ ಎಂಬೀರ್ವರ ಉಲ್ಲೇಖಗಳಿವೆ.[೨೧] ಇವರೀರ್ವರು ಅಧಿಕಾರವರ್ಗದವರೆಂಬುದು ಸುವಿಧಿತ.

ಪೆರಿಯಾ ಪುರಾಣವು ಶ್ರೀಪರ್ವತದ ಮಹಿಮೆಯನ್ನು ಕೊಂಡಾಡುವಾಗ ಪರಮೇಶ್ವರನ ಆರಾಧನೆಯ ಕಾವಲು ನಾಯಕ ನಮ್ಮೊಡೆಯ ನಂದಿ ದೇವರು ಎಂದೂ ಈ ಕೈಲಾಸ ಮಹಾ ಪರ್ವತದ ರಕ್ಷಕ ನಂದೀಶ್ವರನು ದಟ್ಟವಾದ ನೀಳ್ಜಡೆಯವನಾದ ಪರಶಿವನ ಅನುಗ್ರಹದಿಂದ ಸೇವೆ ಮಾಡಲೊಸುಗ ಚೂರಿ ಮತ್ತು ಬೆತ್ತಗಳನ್ನು ಪಡೆದುಕೊಂಡನೆಂದು ವರ್ಣಿಸುತ್ತದೆ.[೨೨] ಇದು ಶೈವ ಕ್ಷೇತ್ರದ ರಕ್ಷಸನ ಕೈಯಲ್ಲಿ ದಂಡವಿರುವುದನ್ನು ಸೂಚಿಸುವುದು. ಚಿತ್ರದುರ್ಗದ ದವಳಪ್ಪನ ಗುಡ್ಡದ ಕಟ್ಟಿಗೆ ಸಂಗಣ್ಣನ ಶಿಲ್ಪದ ಕೈಯಲ್ಲಿರುವ ದಂಡವೂ ಸಹ ಅಧಿಕಾರದ ಸಂಕೇತವೇ ಸರಿ, ಇದು ೧೨ನೇ ಶತಮಾನದ ಶೈವಪೀಠಗಳ ರಕ್ಷಣಾ ವ್ಯವಸ್ಥೆಯ ಸ್ಥೂಲನೋಟ ನೀಡುತ್ತದೆ. ಈ ಮೇಲಿನ ವಿವರಣೆಗಳು ದಂಡವು ಅಧಿಕಾರದ ಸಂಕೇತವೆಂಬುದನ್ನು ಸೂಚಿಸುತ್ತದೆ. ಇದರಂತೆ ಈ ದಂಡ ಹಿಡಿದ ಶಿಲ್ಪವೂ ಸಹ ಈ ದೇವಾಲಯದ ಮೇಲ್ವಿಚಾರಕರನಾಗಿದ್ದು ದಂಡ ಈತನಿಗೆ ಇದ್ದ ಅಧಿಕಾರದ ಸಂಕೇತ ಎನ್ನಬಹುದು.

ಶಿಲ್ಪ : ವೀರಭದ್ರ

ಊರು : ಕಲ್ಲೇದೇವರಪುರ

ಸ್ಥಳ : ಕಲ್ಲೇಶ್ವರ ದೇವಾಲಯದ ಉತ್ತರಾಭಿಮುಖವಾಗಿದೆ.

ಶಿಲೆ : ಕಪ್ಪು ಶಿಲೆ

ಶೈಲಿ : ಹೊಯ್ಸಳ ಶೈಲಿ.

ಸಂಹಾರ ರೂಪದ ದೈವ ವೀರಭದ್ರ, ದಕ್ಷಬ್ರಹ್ಮನನ್ನು ರಕ್ಷಿಸಲು ಶಿವನ ಕೋಪದ ಫಲವಾಗಿ ಉದಿಸಿದ ಉಗ್ರರೂಪವಿದ್ದು, ಕಲ್ಲೇಶ್ವರ ದೇವಾಲಯದ ಮುಖಮಂಟಪದಲ್ಲಿ ಉತ್ತರಾಭಿಮುಖವಾಗಿ ವೀರಭದ್ರನ ಮೂರ್ತಿಯನ್ನು ಪ್ರತಿಷ್ಠಾಪಿಸಿರುವರು. ಕಪ್ಪು ಶಿಲೆಯಲ್ಲಿ ಕಡೆದ ಈ ಶಿಲ್ಪದ ಎತ್ತರ ೬ ಅಡಿಗಳು, ತ್ರಿಭಂಗಿಯಲ್ಲಿ ನಿಂತಿರುವ ವೀರಭದ್ರನು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಖೇಟವನ್ನು ಹಿಡಿದಿದ್ದಾನೆ. ತಲೆಗೆ ಕಿರೀಟ ಮುಕುಟ, ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲಗಳಿವೆ. ಮುಖದಲ್ಲಿ ರೌದ್ರಭಾವ ತೋರಿಸುವಂತೆ

ಕೋರೆಹಲ್ಲುಗಳು ದುಂಡಾದ ದೊಡ್ಡ ಕಣ್ಣುಗಳಿವೆ. ಉಳಿದಂತೆ ಕೊರಳಲ್ಲಿ, ಹಾರ, ಸರ, ಯಜ್ಞೋಪವೀತ, ಉದ್ದನೆಯ ರುಂಡಮಾಲೆ, ಭುಜವಲ್ಯ, ಕಂಕಣ, ಕೆಯೂರವನ್ನೂ ನಡುವಿನಲ್ಲಿ ನಡುಪಟ್ಟಿಯನ್ನು ಕಾಲಿಗೆ ಕಾಲುಕಡಗಗಳನ್ನು ಧರಿಸಿರುವನು. ವೀರಭದ್ರನು ತೊಟ್ಟ ಉಡುಗೆಯು ಅವನ ಎರಡು ತೊಡೆಗಳನ್ನು ಸುತ್ತುವರೆದಿದ್ದು, ಕೀರ್ತಿಮುಖ ಮತ್ತು ಮಣಿಗಳಿಂದ ಅಲಂಕೃತವಾಗಿದೆ. ಕೆಳಬದಿಯಲ್ಲಿ ಟಗರಿನ ರುಂಡದ ದಕ್ಷಬ್ರಹ್ಮನು ಸಮಭಂಗಿಯಲ್ಲಿ ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಶೈಲಿಯ ದೃಷ್ಟಿಯಿಂದ ಈ ಶಿಲ್ಪ ಹೊಯ್ಸಳರ ಅವಧಿಯದು ಎಂಬುದು ತಿಳಿಯುತ್ತದೆ.

ಶಿಲ್ಪ : ಸಪ್ತಮಾತೃಕೆಯರ ಶಿಲ್ಪಗಳು

ಊರು : ಕಲ್ಲೇದೇವರಪುರ

ಸ್ಥಳ : ತ್ರಿಕೂಟಲಿಂಗ ದೇಗುಲದ ನವರಂಗದಲ್ಲಿ

ಶಿಲೆ : ಕಪ್ಪು ಶಿಲೆ

ಸಪ್ತಮಾತೃಕೆಯರು ಎಲ್ಲಾ ವರ್ಗದವರಿಂದಲೂ ಆರಾಧನೆಗೊಳ್ಳುವ ದೇವತೆಗಳು, ಸ್ಥಳೀಯವಾಗಿ ಇವರನ್ನು ಅಮ್ಮನವರೆಂದೂ, ಮುತ್ತೈದೆಯರೆಂದೂ ಕರೆಯುವುದು ವಾಡಿಕೆ. ರಕ್ತಬೀಜಾಸುರನೊಡನೆ ಕೌಶಿಕದುರ್ಗಿ ಹೋರಾಡುತ್ತಿರುವಾಗ ಆ ಅಸುರನ ರಕ್ತ ನೆಲಕ್ಕೆ ಸೋಂಕಿದ ತಕ್ಷಣ ಮತ್ತೊಬ್ಬ ಬೀಜಾಸುರ ಜನಿಸಿ ದೇವಿಯೊಡನೆ ಹೋರಾಟಕ್ಕಿಳಿಯುತ್ತಿದ್ದ ಆಗ ದೇವಿಯು ತನ್ನ ಸಹಾಯಕ್ಕಾಗಿ ಸೃಷ್ಟಿಸಿದ ೭ ಜನ ದೇವತೆಗಳೇ ಸಪ್ತಮಾತೃಕೆಯರಾದರು. ತ್ರಿಕೂಟ ಲಿಂಗೇಶ್ವರ ದೇವಾಲಯದ ನವರಂಗದಲ್ಲಿ ಸಪ್ತಮಾತೃಕೆಯರ ಶಿಲ್ಪಪಟ್ಟಿಕೆ ಇದೆ. ಇದರಲ್ಲಿ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ಇಂದ್ರಾಣಿ, ವರಾಹಿ ಮತ್ತು ಚಾಮುಂಡಿಯರಿದ್ದಾರೆ. ಇದರೊಂದಿಗೆ ಗಣೇಶ ಮತ್ತು ಶಿಲ್ಪಗಳಿರುವುದು ವಾಡಿಕೆ. ಲಲಿತಾಸನದಲ್ಲಿ ಕುಳಿತಿರುವ ಈ ಶಿಲ್ಪಗಳ ಕೆಳಭಾಗದಲ್ಲಿ ಆಯಾ ದೇವತೆಗಳ ವಾಹನಗಳನ್ನು ಖಂಡರಿಸಿರುವರು.

ಶಿಲ್ಪ : ಕಾರ್ತಿಕೇಯ

ಊರು : ಕಲ್ಲೇದೇವರಪುರ

ಸ್ಥಳ : ತ್ರಿಕೂಟಲಿಂಗ ಲಿಂಗೇಶ್ವರ ದೇಗುಲದ ದ್ವಾರದಲ್ಲಿದೆ

ಶಿಲೆ : ಕಪ್ಪು ಶಿಲೆ

ಕಾಲ : ೧೧ನೇ ಶತಮಾನ

ತ್ರಿಕೂಟ ಲಿಂಗೇಶ್ವರ ದೇಗುಲದ ದ್ವಾರದ ಮೇಲೆ ಇತ್ತೀಚೆಗೆ ಕಟ್ಟಿದ ಗುಡಿಯಲ್ಲಿ ಕಾರ್ತಿಕೇಯನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಕಪ್ಪುಶಿಲೆಯಲ್ಲಿ ಕಡೆದ ಈ ಶಿಲ್ಪದ ಎತ್ತರ ಸುಮಾರು ಮೂರು ಅಡಿಗಳು. ಕಾರ್ತಿಕೇಯನು ತನ್ನ ವಾಹನ ಮಯೂರದ ಮೇಲೆ ಲಲಿತಾಸನದಲ್ಲಿ ಆಸೀನವಾಗಿರುವನು. ಮೂರು ಮುಖಗಳನ್ನು ಹೊಂದಿರುವ ಕಾರ್ತಿಕೇಯನು

ಕಿರೀಟಮುಕುಟ, ಕರ್ಣಕುಂಡಲ, ಕೊರಳಲ್ಲಿ ಕಂಠಿಹಾರ, ಭುಜಾಭರಣ, ಕೆಯೂರ ಕಾಲುಗಡಗಗಳನ್ನು ಧರಿಸಿರುವನು. ಶಿಲ್ಪದ ಲಕ್ಷಣಗಳನ್ನು ಗಮನಿಸಿದರೆ ಕ್ರಿ.ಶ. ೧೧ನೇ ಶತಮಾನದಲ್ಲಿ ನಿರ್ಮಾಣಗೊಂಡ ಶಿಲ್ಪವಾಗಿದೆ ಎಂಬುದು ತಿಳಿದುಬರುತ್ತದೆ.

ಶಿಲ್ಪ : ನಾರಾಯಣ

ಊರು : ಕಲ್ಲೇದೇವರಪುರ

ಸ್ಥಳ : ಕಲ್ಲೇಶ್ವರ ದೇಗುಲದ ನವರಂಗದಲ್ಲಿ ಪಶ್ಚಿಮಾಭಿಮುಖವಾಗಿದೆ.

ಶಿಲೆ : ಹಸಿರು ಮಿಶ್ರಿತ ಕಪ್ಪು ಶಿಲೆ

ಕಲ್ಲೇಶ್ವರ ದೇಗುಲದ ನವರಂಗದಲ್ಲಿ ಪಶ್ಚಿಮಾಭಿಮುಖವಾಗಿರುವ ಶಿಲ್ಪ ನಾರಾಯಣನದು. ಇದು ೨.೬ ಅಡಿ ಎತ್ತರ ೨ ಅಡಿ ಅಗಲವಿದೆ. ಹಸಿರು ಮಿಶ್ರಿತ ಕಪ್ಪುಶಿಲೆಯಲ್ಲಿ ಕಡೆದ ಇದರ ಪ್ರಭಾವಳಿ ಮತ್ತು ಎರಡು ಕೈಗಳು ಭಗ್ನವಾಗಿವೆ. ಉಳಿದ ಎರಡು ಕೈಗಳಲ್ಲಿ ಶಂಖ ಮತ್ತು ಅಭಯ ಮುದ್ರೆಯಲ್ಲಿವೆ. ಕಿರೀಟಮುಕುಟ, ಕರ್ಣಕುಂಡಲ, ಉಪವೀತ, ಹಾರ, ನೂಪುರ, ಕಾಲುಕಡಗಗಳನ್ನು ಧರಿಸಿರುವನು. ಶಿಲ್ಪದ ಕೆಳಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರ ಪುಟ್ಟ ಶಿಲ್ಪಗಳಿವೆ.

ಶಿಲ್ಪ : ನಂದಿ ಶಿಲ್ಪಗಳು

ಊರು : ಕಲ್ಲೇದೇವರಪುರ

ಸ್ಥಳ : ಕಲ್ಲೇಶ್ವರ ದೇಗುಲದ ಪೂರ್ವ-ದಕ್ಷಿಣಾಭಿಮುಖವಾಗಿವೆ.

ಶಿಲೆ : ಕಣಶಿಲೆ

ಶೈಲಿ : ವಿಜನಯಗರ ಶೈಲಿ

ಕಲ್ಲೇಶ್ವರ ದೇವಾಲಯದ ಪೂರ್ವ ದಿಕ್ಕಿಗೆ ತೊಟ್ಟಿಪೆಳೆ ಬಸವಣ್ಣ ಮತ್ತು ದಕ್ಷಿಣ ದಿಕ್ಕಿಗೆ ಅಳಳ್ಳಿ ಬಸವಣ್ಣ ಎಂದು ಕರೆಯುವ ಎರಡು ಬೃಹತ್ ಶಿಲ್ಪಗಳಿವೆ. ಈ ಎರಡು ವಿಗ್ರಹಗಳ ಎತ್ತರ ೪ ಅಡಿಯಿದ್ದು, ೫ ಅಡಿ ಉದ್ದ ಇವೆ. ವಿಶೇಷವೆಂದರೆ ಈ ಎರಡೂ ವಿಗ್ರಹಗಳು ತಮ್ಮ ಎಡ ಮುಂಗಾಲಲ್ಲಿ ಬಾಲಕರ ರುಂಡಗಳನ್ನು ತುಳಿದುಕೊಂಡಿರುವುದು ಇದಕ್ಕೆ ಸ್ಥಳೀಯರು ಅರೋಪಿಸುವ ಕಥೆ ಈ ರೀತಿಯದು.

ಊರಿನ ಭಕ್ತನೋರ್ವನ ದನಗಳು ಕರುಹಾಕದೇ ಹಾಲು ನೀಡದೇ ಇದ್ದಾಗ ತನ್ನ ಹಸುಗಳು, ಕರುಗಳಿಗೆ ಜನ್ಮವಿತ್ತು ಹಾಲು ನೀಡುವಂತಾದರೆ ಅದರ ಮೊದಲ ಗಿಣ್ಣನ್ನು ನಂದಿಗೆ ಮೀಸಲು ನೀಡುವುದಾಗಿ ಹರಕೆ ಹೊತ್ತನಂತೆ. ಇದಾದ ಕೆಲ ದಿನಗಳಲ್ಲಿ ಭಕ್ತನ ಹಸುಗಳಿಗೆ ಕರುಗಳಿಗೆ ಜನ್ಮವಿತ್ತು ಹಾಲು ನೀಡತೊಡಗಿದವು. ಆದರೆ ದೇವರನ್ನು ಮರೆತ ಭಕ್ತ ಅದರ ಹಾಲನ್ನು ಉಪಯೋಗಿಸಿದ ಕೆಲವು ದಿನಗಳ ನಂತರ ತನ್ನ ಹರಕೆ ನೆನಪಾದಾಗ ತಾನು ಬರದೇ ತನ್ನ ಮಗನ ಕೈಯಲ್ಲಿ ಬಸವಣ್ಣನಿಗೆ ಮೀಸಲು ಗಿಣ್ಣು ಕಳುಹಿಸಿದ. ಹರಕೆ

ತೀರಿಸದೇ ತಪ್ಪು ಎಸಗಿದುದಲ್ಲದೆ ತಾನು ಬರದೇ ತನ್ನ ಮಗನನ್ನು ಕಳುಹಿಸಿದ ಭಕ್ತನ ಮೇಲೆ ಕೋಪಗೊಂಡು ನಂದಿ ಆ ಮಗುವನ್ನು ತನ್ನ ಮುಂಗಾಲಿನಲ್ಲಿ ತುಳಿದುಕೊಂಡಿತಂತೆ. ಆ ಮಗುವಿನ ರುಂಡವೇ ಇದು ಎಂಬುದು ಸ್ಥಳೀಯರ ನಂಬಿಕೆ. ಇದಕ್ಕೆ ಅನುಗುಣವಾಗಿ ಕಲ್ಲೇಶ್ವರನನ್ನು ತಮ್ಮ ಮನೆದೇವರನ್ನಾಗಿ ಹೊಂದಿದ ಭಕ್ತರು ತಮ್ಮ ಮನೆಯ ಹಸುಗಳು ಕರುಗಳಿಗೆ ಜನ್ಮವಿತ್ತರೆ ಅದರ ಮೊದಲ ಗಿಣ್ಣನ್ನು ನಂಟ ಶಿಲ್ಪಗಳಿಗೆ ಎಡೆ ನೀಡುವುದು ಇಂದಿಗೂ ಪ್ರಚಲಿತದಲ್ಲಿರುವ ಪದ್ಧತಿ. ಈ ಶಿಲ್ಪಗಳು ಕಣ ಶಿಲೆಯಲ್ಲಿ ಕಡೆದವುಗಳು ಹಣೆಯಲ್ಲಿ ಹಣೆಪಟ್ಟಿ, ಕರ್ಣಾಭರಣ, ಗಂಟೆಸರ, ಲೊಡಗಸರ, ಕೊರಳಲ್ಲಿ ಹಗ್ಗಗಳಿಂದ ಈ ಶಿಲ್ಪಗಳು ಅಲಂಕರಣಗೊಂಡಂತೆ ಖಂಡಿಸಲಾಗಿದೆ. ಶೈಲಿಯ ದೃಷ್ಟಿಯಲ್ಲಿ ಇವು ವಿಜಯನಗರ ಕಾಲದವುಗಳು.

ಶಿಲ್ಪ : ದಕ್ಷಬ್ರಹ್ಮ

ಊರು : ಕಲ್ಲೇದೇವರಪುರ

ಸ್ಥಳ : ಪ್ರಸ್ತುತ ಚಿತ್ರದುರ್ಗ ಸರ್ಕಾರಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ

ಶಿಲೆ : ಕಣಶಿಲೆ

ಶೈಲಿ : ವಿಜನಯಗರ ಶೈಲಿ

ಚಿತ್ರದುರ್ಗದ ಸರ್ಕಾರಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ದಕ್ಷಬ್ರಹ್ಮನ ವಿಗ್ರಹವು ಮೂಲತಃ ಕಲ್ಲೇದೇವರಪುರದ್ದು, ಕಣಶಿಲೆಯಲ್ಲಿ ಕಡೆಯಲಾದ ಈ ಶಿಲ್ಪವು ೨೯ ಸೆ.ಮೀ. ಉದ್ದ ೨೧ ಸೆ.ಮೀ. ಅಗಲ ಮತ್ತು ೧೩ ಸೆ.ಮೀ. ದಪ್ಪವಿದೆ. ಗಾಳಿ ಮಳೆಗೆ ಸಾಕಷ್ಟು ಸವೆದಿರುವ ಈ ಶಿಲ್ಪವು ಸುಖಾಸೀನ ಭಂಗಿಯಲ್ಲಿದ್ದು, ಮೇಲ್ನೋಟಕ್ಕೆ ಇದು ಗಣೇಶ ಶಿಲ್ಪದಂತೆ ಕಾಣಿಸುತ್ತದೆಯಾದರೂ ಅದರ ಸೂಕ್ಷ್ಮ ನೋಟದಿಂದ ದಕ್ಷಬ್ರಹ್ಮನ ಟಗರಿನ ನೀಳಮುಖ, ತಿರುವಿನ ಕೋಡುಗಳು ಕಾಣುತ್ತವೆ. ಸಾಕಷ್ಟು ಸವಕಳಿಯಾದ ಇದು ವಿಜಯನಗರ ಕಾಲದ ಶಿಲ್ಪವಾಗಿದೆ.

ಈ ಶಿಲ್ಪಗಳೊಡನೆ ಪುಟ್ಟದಾದ ಗಣೇಶ, ಮಹಿಷಾಸುರ ಮರ್ಧಿನಿ ಮತ್ತು ಭಗ್ನಗೊಂಡ ಸರಸ್ವತಿಯ ಶಿಲ್ಪಗಳಿವೆ.

ಕಲ್ಲೇದೇವರಪುರ ಪರಿಸರದಲ್ಲಿ ಹೊಯ್ಸಳರ ಆಡಳಿತಾವಧಿಯಿಂದ ಚಿತ್ರದುರ್ಗ ಪಾಳೆಯಗಾರರ ಕಾಲದವರೆಗೂ ಈ ಪ್ರದೇಶದಲ್ಲಿ ದೇವಾಲಯಗಳು ನಿರ್ಮಾಣವಾಗಿವೆ. ಜೊತೆಗೆ ಅನೇಕ ಮೂರ್ತಿಶಿಲ್ಪಗಳನ್ನು ಕಂಡರಿಸಲಾಗಿದೆ. ಅಷ್ಟೇ ಅಲ್ಲದೆ ಈ ದೇವಾಲಯಗಳು ಅಂದಿನ ಕಾಲದ ಸಮಾಜದ ಪ್ರಮುಖ ಅಂಗಗಳಾಗಿ ಪಾತ್ರನಿರ್ವಹಿಸಿವೆ. ಜನರ ನೆಮ್ಮದಿ, ಶಾಂತಿಗಾಗಿ ಈ ದೇವಾಲಯಗಳು ಉಗಮಗೊಂಡಿದ್ದರೂ ಜನರ ಜೀವನದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಅಂದಿನ ದೇವಾಲಯ ಮತ್ತು ಮೂರ್ತಿಶಿಲ್ಪಗಳ ಹಿನ್ನೆಲೆಯಿಂದ ತಿಳಿಯಬಹುದಾಗಿದೆ.

೩.೪ ವೀರಗಲ್ಲುಗಳು

ಕಲ್ಲೇದೇವರಪುರ ಪರಿಸರದಲ್ಲಿ ಕೆಲವು ವೀರಗಲ್ಲುಗಳು ಕಂಡುಬರುತ್ತವೆ. ಉದಾತ್ತವಾದ ಉದ್ದೇಶದಿಂದ ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕವಾಗಿ ನಿಲ್ಲಿಸುವ ಕಲ್ಲುಗಳೇ ವೀರಗಲ್ಲುಗಳು.[೨೩] ಪ್ರಾಚೀನ ಕನ್ನಡ ಶಾಸನಗಳಲ್ಲಿ ದಾನ ಶಾಸನಗಳನ್ನು ಬಿಟ್ಟರೆ ವೀರಗಲ್ಲು ಶಾಸನಗಳ ಸಂಖ್ಯೆಯೇ ಹೆಚ್ಚು. ಇಂತಹವು ಕರ್ನಾಟಕದ ಉದ್ದಗಲಕ್ಕೂ ಪ್ರತಿಯೊಂದು ಊರು ಗ್ರಾಮಗಳಲ್ಲಿಯು ಇಂದಿಗೂ ಕಂಡುಬಂದಿರುವುದನ್ನು ಗುರುತಿಸಬಹುದಾಗಿದೆ.

ಮನುಷ್ಯನ ಜನನ ಅನಿವಾರ್ಯವೇ ಆಗಿರಬಹುದು. ಆದರೆ ಹುಟ್ಟಿದ ಮೇಲೆ ಸಾವು ಎಂಬುದು ಅವನಿಗೆ ಖಚಿತವೂ ಹಾಗೂ ಪ್ರಕೃತಿಯ ನಿಯಮವೂ ಹೌದು.[೨೪] ಕರ್ನಾಟಕದ ಜನರ ಕಲ್ಪನೆಯು ತುಂಬಾ ಮಹತ್ವದ್ದಾಗಿದೆ. ಈ ನಾಡಿನವರು ಗುಣವಂತರು, ಕಲಾರಸಿಕರು, ವಿವೇಕಿಗಳು ಮೇಲಾಗಿ ಅಷ್ಟೇ ಸ್ವಾಭಿಮಾನಿಗಳು, ಉಗ್ರ ಸ್ವರೂಪಿಗಳು ಆಗಿದ್ದರು ಎಂಬ ಮಾತು ಪ್ರಾಚೀನ ಕರ್ನಾಟಕದ ಜನತೆಯ ಜೀವನ ಮೌಲ್ಯವನ್ನು ಎತ್ತಿ ತೋರಿಸುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ಅಸಂಖ್ಯಾತ ಯುದ್ಧಗಳು ನಡೆದಿವೆ.[೨೫] ಯುದ್ಧೋತ್ಸಾಹಕ್ಕೆ ಮೂಲ ಶಕ್ತಿಯಾಗಿದ್ದ ಇನ್ನೂ ಒಂದೆರಡು ಕಾರಣಾಂಶಗಳನ್ನು ನೀಡಬಹುದಾಗಿದೆ. ಶರೀರವೆನ್ನುವುದು ಅಶಾಶ್ವತವಾದುದು ಕೀರ್ತಿಯು ಚಿರಸ್ಮರಣೆಯಾದುದು ಶರೀರ ಹೋದರು ಹೋಗಲಿ ಶಾಶ್ವತವಾದ ಚಿರಸ್ಮರಣೆಯ ಕೀರ್ತಿಯನ್ನು ಗಳಿಸಬೇಕೆಂಬುದು ಅಂದಿನ ಜನರ ಆಸೆಯಾಗಿತ್ತು. ಆ ಕಾಲದಲ್ಲಿ ಒಬ್ಬ ಬಹುದೊಡ್ಡ ಘನವಿದ್ವಾಂಸ ಅಥವಾ ಪಂಡಿತನ ಹೆಸರೂ ನಾಡಿನಲ್ಲಿ ಬೆಳಕಿಗೆ ಬರುತ್ತಿತ್ತೋ ಇಲ್ಲವೋ ಗೊತ್ತಿಲ್ಲ, ಆದರೆ ಹೋರಾಟದಲ್ಲಿ ಜೀವವನ್ನು ಪಣವಿಟ್ಟ ವೀರನ ಹೆಸರು ಈ ಲೋಕದಲ್ಲಿ ಮಾತ್ರವಲ್ಲ ಪರಲೋಕದಲ್ಲಿಯೂ ಚಿರಸ್ಮರಣೆಯ ಮಾತಾಗುತ್ತಿತ್ತು. ಇವನನ್ನು ಎಲ್ಲರೂ ಪ್ರಶಂಸಿಸುವರೇ ಅವನ ಮೇಲೆ ದಂತಕತೆಗಳು ಹುಟ್ಟಿಕೊಳ್ಳುತ್ತಿದ್ದವು. ಜನಗಳ ದೃಷ್ಟಿಯಲ್ಲಿ ಇವನೊಬ್ಬ ಪ್ರಮುಖ ವ್ಯಕ್ತಿಯಾಗುತ್ತಿದ್ದ. ಆ ವೀರನ ಕೀರ್ತಿ ಪ್ರತಿಷ್ಠೆಯು ಇವನು ಮಾಡಿದ ತ್ಯಾಗಗಳು ಮುಂದಿನ ತಲೆಮಾರುಗಳವರೆಗೆ ಇರುತ್ತದೆ ಎಂದು ಶಾಸನವೊಂದು ಹೇಳುತ್ತದೆ.

'ಜತೇನಲಭ್ಯತೆ ಲಕ್ಷ್ಮೀ ಮೃತೇನಾಪಿ ಸುರಾಂಗನಾ ಕ್ಷಣ ವಿದ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ' ಅಂದರೆ ರಣರಂಗನ ಹೋರಾಟದಲ್ಲಿ ಗೆದ್ದರೆ ಇಹಲೋಕದಲ್ಲಿ ರಾಜ್ಯ ಲಕ್ಷ್ಮಿಯೂ, ಹೋರಾಡುತ್ತಾ ಮಡಿದರೆ ಸ್ವರ್ಗದಲ್ಲಿ ಸುರಾಂಗನೆಯರು ದೊರಕುವುದರಿಂದ ಕ್ಷಣದಲ್ಲಿ ನಾಶವಾಗುವ ಈ ಶರೀರಕ್ಕಾಗಿ ಯೋಚನೆಯನ್ನು ಮಾಡಬಾರದು ಎಂದು ಹೇಳುವ ಶ್ಲೋಕವೊಂದು ಅನೇಕ ವೀರಗಲ್ಲುಗಳಲ್ಲಿ ಕೊನೆಗೊಳ್ಳುವುದನ್ನು ನೋಡಬಹುದು.

ವೀರಗಲ್ಲನ್ನು ನಿಲ್ಲಿಸುವಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ದೃಷ್ಟಿಕೋನಗಳೆರಡು ಇತ್ತೆಂದು ತಿಳಿದುಬರುತ್ತದೆ. ವೀರನ ಅಪ್ರತಿಮವಾದ ಹೋರಾಟದ ಗುಣವನ್ನು ಮೆಚ್ಚಿ ವೀರಗಲ್ಲನ್ನು ನೆಡುವುದು ಅವನ ಧೈರ್ಯಶಾಲಿಯಾದ ಜಗತ್ತಿಗೆ ತಿಳಿಯಲೆಂದು ಪರಿಗಣಿಸುವ ಉದ್ದೇಶಗಳಿದ್ದವು

ಲೌಕಿಕ ಜೀವನದ ಉದ್ದೇಶಗಳು ಹೋರಾಟದಲ್ಲಿ ಸಾವನ್ನಪ್ಪಿದ ವೀರನಿಗೆ ವೀರಗಲ್ಲನ್ನು ನಿಲ್ಲಿಸುವುದು ತಮ್ಮ ಕರ್ತವ್ಯವೆಂದು ಭಾವಿಸಿ ಹಾಗೆ ವೀರಗಲ್ಲು ನಿಲ್ಲಿಸುವುದರ ಮೂಲಕ ಅವನಿಗೆ ಸ್ವರ್ಗವೋ ಕೈಲಾಸವೋ, ವೈಕುಂಠವೋ ಪ್ರಾಪ್ತವಾಗುತ್ತದೆಯೆಂದು ನಂಬಿ ವೀರಗಲ್ಲುಗಳನ್ನು ನೆಡುವುದು ಅದರ ಪರಮಾರ್ಥಿಕ ಉದ್ದೇಶಗಳಾಗಿದ್ದವು.[೨೬]

ಕರ್ನಾಟಕದಲ್ಲಿ ಹೆಚ್ಚಿನ ವೀರಗಲ್ಲುಗಳು ಇಂದು ಸಿಗುವಂತಹದ್ದು ದೇಗುಲಗಳ ಬಳಿ, ಶಿವ ದೇಗುಲಗಳ ಬಳಿಯಂತು ವೀರಗಲ್ಲುಗಳು ಸರ್ವೇಸಾಮಾನ್ಯವಾಗಿ ಇದ್ದೆ ಇರುತ್ತವೆ ಎಂದರೆ ತಪ್ಪಾಗಲಾರದು. ಪ್ರಸ್ತುತ ದೇಗುಲಗಳ ಮುಂದೆ ಇರುವ ವೀರಗಲ್ಲುಗಳು ಹಾಗೂ ಊರಿನ ಇತರೆ ಕಡೆಗಳಲ್ಲಿ ಇರುವ ವೀರಗಲ್ಲುಗಳನ್ನು ದೇವರುಗಳೆಂದು ಭಾವಿಸಿ ಅವುಗಳನ್ನು ಸಂರಕ್ಷಣೆಯನ್ನು ಮಾಡಲಾಗುತ್ತಿದೆ. ಇಂತಹ ವೀರಗಲ್ಲುಗಳನ್ನು ಜನ ಸಂಚಾರವಿರುವ ದೇಗುಲಗಳ ಬಳಿ ತಂದು ನಿಲ್ಲಿಸಿರಬಹುದಾದ ಸಾಧ್ಯತೆಗಳು ಹೆಚ್ಚಿವೆ. ಆದರೆ ಇನ್ನೂ ಅನೇಕ ವೀರಗಲ್ಲುಗಳ ಪಾಠದಿಂದ ವೀರಗಲ್ಲನ್ನು ನಿಲ್ಲಿಸುವಾಗಲೇ ಅಂದಿನ ಕಾಲದ ಜನರು ವೀರಗಲ್ಲುಗಳನ್ನು ದೇಗುಲಗಳ ಮುಂಭಾಗದಲ್ಲಿ ನಿಲ್ಲಿಸುತ್ತಿದ್ದರೆಂಬ ಅಂಶ ತಿಳಿಯುತ್ತದೆ. ದೇಗುಲಗಳ ಬಳಿ ಮಾತ್ರವಲ್ಲದೇ ವೀರಗಲ್ಲುಗಳು ಇತರ ಕಡೆಗಳಲ್ಲಿಯೂ ಸರ್ವೇಸಾಮಾನ್ಯವಾಗಿ ಇರುವುದನ್ನು ಗಮನಿಸಬಹುದು. ಊರಿನ ಬಾಗಿಲ ಮುಂದೆ, ಚಾವಡಿಗಳಲ್ಲಿ, ಹೊಂಡಗಳ ಬಳಿ, ಹೊಲಗದ್ದೆ, ತೋಪು ಮೈದಾನಗಳಲ್ಲಿ ವೀರಗಲ್ಲುಗಳನ್ನು ಸ್ಥಾಪಿಸಿರುವುದನ್ನು ಗಮನಿಸಬಹುದು. ಇಂಥ ಕಡೆಗಳಲ್ಲಿ ನೆಡುವುದರ ಉದ್ದೇಶ ಅವು ನಿರಾಯಸವಾಗಿ ಜನರ ಕಣ್ಣಿಗೆ ಬೀಳಬೇಕೆನ್ನುವುದು.[೨೭]

ವೀರಗಲ್ಲುಗಳನ್ನು ದೇಗುಲ ಮುಂಭಾಗದಲ್ಲಿ ನಿಲ್ಲಿಸುವಲ್ಲಿ ಮುಖ್ಯವಾದ ಉದ್ದೇಶವೆಂದರೆ ವೀರನು ದೇವರ ಸನ್ನಿಧಿಯಲ್ಲಿರುತ್ತಾನೆ ಎಂಬ ನಂಬಿಕೆ ಮತ್ತು ದೇಗುಲಗಳಿಗೆ ಸಹಜವಾಗಿ ಜನರು ಹೋಗುತ್ತಿದ್ದ ಕಾರಣದಿಂದಾಗಿ ಅವರಿಗೆ ಅನಾಯಸವಾಗಿ ವೀರನ ಪರಾಕ್ರಮದ ಪರಿಚಯವೂ ಆಗುತ್ತದೆ. ಆದರೆ ವೀರಗಲ್ಲುಗಳನ್ನು ದೇಗುಲಗಳ ಮುಂದೆ ನಿಲ್ಲಿಸುವಲ್ಲಿ ಮುಖ್ಯವಾಗಿ ಧಾರ್ಮಿಕತೆಯನ್ನು ಪ್ರತಿನಿಧಿಸುವ ಅಂಶವಾಗಿ ತೋರಿಬರುವುದನ್ನು ಈ ಮುಂದಿನ ವೀರಗಲ್ಲುಗಳ ಅಧ್ಯಯನದ ಹಿನ್ನೆಲೆಯಲ್ಲಿ ತಿಳಿದುಬರುತ್ತದೆ.

ವೀರಗಲ್ಲುಗಳು

ವೀರನೊಬ್ಬನ ಸವಿನೆನಪಿಗಾಗಿ ಸ್ಮಾರಕವಾಗಿ ನಿರ್ಮಿಸಿದ ಶಿಲೆಗಳನ್ನೇ ವೀರಗಲ್ಲುಗಳು. ಇವು ವೀರತ್ವದ ಸೂಚನ ಫಲಕಗಳನ್ನಾಗಿ ಬಳಸಿಕೊಳ್ಳಲಾಗದೆ. ವ್ಯಕ್ತಿಯೊಬ್ಬ ತನ್ನ ಜೀವವನ್ನು ಇತರರ "ಆಸ್ತಿ, ಸ್ತ್ರೀ, ದನಕರುಗಳ ರಕ್ಷಣೆಗಾಗಿ ಶತೃಗಳೊಡನೆ ಹೋರಾಡುತ್ತಿರುವುದನ್ನು ಇವು ಸೂಚಿಸುತ್ತವೆ."[೨೮] ಕಲ್ಲೇದೇವರಪುರದಲ್ಲಿ ಕಂಡುಬರುವ ಎರಡು ವೀರಗಲ್ಲುಗಳು 'ತುರುಗೋಳ್' ಪ್ರಕಾರದವು. ಇವುಗಳ ಹೆಸರೇ ಹೇಳುವಂತೆ ತುರುಗಳ ಸಂರಕ್ಷಣೆಗಾಗಿ ಹೋರಾಡಿ ಸತ್ತ ವೀರನಿಗೆ ಸಂಬಂಧಿಸಿದ ಸ್ಮಾರಕಗಳೇ ಈ ವೀರಗಲ್ಲುಗಳು.

೧ನೇ ವೀರಗಲ್ಲು

ಈ ವೀರಗಲ್ಲಿನಲ್ಲಿ ನಾಲ್ಕು ಪ್ರಮುಖ ಹಂತಗಳನ್ನು ಕಾಣಬಹುದು. ಕೆಳಗಿನ ಹಂತದಲ್ಲಿ

ವೀರನು ಬಿಲ್ಲುಬಾಣಗಳನ್ನು ಹಿಡಿದು ವೈರಿಗಳೊಡನೆ ಹೋರಾಡುವ ಚಿತ್ರಣವಿದೆ. ಎರಡನೇ ಹಂತದಲ್ಲಿ ಏಳು ತುರುಗಳನ್ನು ಕಡೆದಿರುವರು, ಮೂರನೇ ಭಾಗದಲ್ಲಿ ವೀರನು ಮಂಪಟದಲ್ಲಿ ಪದ್ಮಾಸನದಲ್ಲಿ ಕುಳಿತುಕೊಂಡಿರುವನು. ಆ ವೀರನ ಪಕ್ಕದಲ್ಲಿ ನಿಂತಿರುವ ಸುಂದರವಾದ ಬಾಲೆಯರು ಚಾಮರದಿಂದ ಗಾಳಿಯ ಬೀಸುತ್ತಿರುವರು. ಇದು ಹೋರಾಟದಲ್ಲಿ ಹೋರಾಡಿ ಮಡಿದ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವುದರ ಸೂಚಕವಾಗದೆ. ನಾಲ್ಕನೇ ಭಾಗದಲ್ಲಿ ಶಿವಲಿಂಗ ಒಂದನ್ನು ಮುಂದೆ ಪ್ರಣಾಮ ಮುದ್ರೆಯಲ್ಲಿ ಕುಳಿತಿರುವುವಂತೆಯೂ,[೨೯] ಯತಿಯೋರ್ವ ಶಿವಲಿಂಗನನ್ನು ಭಕ್ತಿಭಾವದೊಂದಿಗೆ ಪೂಜೆಯನ್ನು ಸಲ್ಲಿಸುತ್ತಿರುವಂತೆಯೂ ಚಿತ್ರವನ್ನು ಬಿಡಿಸಲಾಗಿದೆ.

೨ನೇ ವೀರಗಲ್ಲು

ಈ ವೀರಗಲ್ಲಿನಲ್ಲಿ ಮುಖ್ಯವಾಗಿ ಮೂರು ಹಂತಗಳನ್ನು ಗುರುತಿಸಬಹುದು. ಕೆಳಗಿನ ಹಂತದ ಭಾಗದಲ್ಲಿ ತನ್ನ ವೈರಿಗಳೊಂದಿಗೆ ಕಾದಾಡುತ್ತಿರುವನು. ನಂತರ ಮಧ್ಯದ ಭಾಗದಲ್ಲಿ ವೀರನು ಮಂಟಪದಲ್ಲಿ ಅಸೀನನಿರುವಂತೆಯೂ, ಮೇಲಿನ ಹಂತದ ಭಾಗದಲ್ಲಿ ಸ್ವರ್ಗಸ್ತನಾಗಿರುವಂತೆಯೂ ಚಿತ್ರಣವನ್ನು ಬಿಡಿಸಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ವೀರಗಲ್ಲುಗಳನ್ನು ಸಾಮಾನ್ಯವಾಗಿ ವೀರನ ಸ್ವಗ್ರಾಮದಲ್ಲಿ ಹಾಕಿಸಲಾಗುತ್ತಿತ್ತು. ಹೀಗೆ ಹಾಕಿಸಿದ ವೀರಗಲ್ಲುಗಳೂ ದೇವಾಲಯದ ಮುಂಭಾಗದಲ್ಲಿ ಹೆಚ್ಚಾಗಿರುವುದನ್ನು ಗಮನಿಸಬಹುದು. ಇಂತಹ ವೀರಗಲ್ಲುಗಳು ನಿರ್ದಿಷ್ಟ ಪ್ರದೇಶದಲ್ಲಿರಬಹುದು ಅಥವಾ ಜನರಿಗೆ ಪದೇ ಪದೇ ಕಾಣುವಂತಹ ಪ್ರದೇಶದಲ್ಲಿ ಆದರೂ ಇರಬಹುದು. ಇಂತಹ ವೀರಗಲ್ಲುಗಳೂ ಕಲ್ಲೇದೇವರಪುರ ಪರಿಸರದಲ್ಲಿ ಕಂಡುಬರುತ್ತವೆ. ಅಲ್ಲದೇ ಈ ವೀರಗಲ್ಲುಗಳು ಅಂದಿನ ಮಾನವ ಜೀವನದ ಬಗ್ಗೆ ಅವನಿಗೆ ಇರುವ ಧೋರಣೆಯನ್ನು ಅಂದಿನ ಅವನ ನಾಗರೀಕತೆ ಜೀವನ ಹಾಗೂ ಅವನ ಸಂಸ್ಕೃತಿಯ ಹಿನ್ನೆಲೆಯನ್ನು ತಿಳಿಸಿಕೊಡುವಲ್ಲಿ ಪ್ರಮುಖವಾದ ಆಧಾರಗಳಾಗಿವೆ ಎಂದು ಈ ಅಧ್ಯಯನದ ಹಿನ್ನೆಲೆಯಲ್ಲಿ ಹೇಳಬಹುದು.

ಇತರೆ ಅಂಶಗಳು

ಕಾಳಾಮುಖರು ಮತ್ತು ಜಮದಗ್ನಿ ಋಷಿಯ ಮಠ

ಯಾವುದೇ ಒಂದು ದೇಗುಲದ ಅತ್ಯಂತ ಬಹುಮುಖ್ಯವಾದ ಅಂಗವೆಂದರೆ ಅದು ಮಠ. ಸಾಮಾನ್ಯವಾಗಿ ಹೇಳಬೇಕೆಂದರೆ ದೇವಸ್ಥಾನಕ್ಕೆ ಅಂಟಿಕೊಂಡಂತೆ ಅಥವಾ ದೇವಸ್ಥಾನದ ಆವರಣದ ದಕ್ಷಿಣ ದಿಕ್ಕಿನಲ್ಲಿ ಮಠಗಳು ಇರುವುದು ಸರ್ವೇಸಾಮಾನ್ಯ. ಆದ್ದರಿಂದ ಈ ಎರಡು ವಿಭಿನ್ನವಾದವು. ಮಠ ಎಂಬ ಪದಕ್ಕೆ ಸನ್ಯಾಸಿ, ಗುರು, ಯತಿಗಳು, ವಾಸಿಸುವ ಸ್ಥಳ ಎಂಬ ಅರ್ಥವಿದೆ.[೩೦] ಕ್ರಿ.ಶ. ೮ನೇ ಶತಮಾನದ ಸಮಯಕ್ಕೆ ದೇಗುಲಗಳ ಅವಿಭಾಜ್ಯ ಅಂಗಗಳಾಗಿ ಮಠಗಳು ಗುರುತಿಸಿಕೊಂಡಿದ್ದವು ಎಂದು ಹೇಳಬಹುದು.

ಕ್ರಿ.ಶ. ೧೫೨೬ರ ನಿಬಗೂರು ಶಾಸನವು ತಿಳಿಸುವಂತೆ ಕಲ್ಲೇದೇವರಪುರದ ಅಧಿಪತಿಯಾದ ಕಲ್ಲಿನಾತ (ಕಲ್ಲೇಶ್ವರ)ನ ಸನ್ನಿಧಿಯಲ್ಲಿ ಜಮದಗ್ನಿ ಋಷಿಯ ಮಠವಿತ್ತು. ಇದು ಶಿಕ್ಷಣ ಕೇಂದ್ರ ಹಾಗೂ ಉಪಹಾರ ನಿಲಯವಾಗಿ ಕಾರ್ಯನಿರ್ವಹಿಸುತ್ತಿದ್ದು ಇಲ್ಲಿ ಗಮನಿಸಬೇಕಾದ ಗಮನಾರ್ಹ ವಿಷಯವಾಗಿದೆ. ಇಲ್ಲಿನ ೩೫ ಜನ ಬ್ರಾಹ್ಮಣ ವಿದ್ಯಾರ್ಥಿಗಳು ಷಡ್‌ದರ್ಶನಗಳನ್ನು ಅಧ್ಯಯನ ಮಾಡುತ್ತಿದ್ದರು. ಕೃಷ್ಣದೇವರಾಯರಿಗೆ ಪುಣ್ಯವಾಗಲೆಂದು ಅರೆಯ ಕ್ಷತ್ರಿಯರಾದ ವಿಶ್ವನಾಥ ರಾವುತರ ಮಗ ರಂಗನಾಥ ರಾವುತರು ಇಲ್ಲಿನ ಪ್ರಸಾದ ನಿಲಯದ ನಿರ್ವಹಣೆಗಾಗಿ ನಿಬಗೂರು ಗ್ರಾಮವನ್ನು ದಾನ ನೀಡಿದ್ದುದನ್ನು ಈ ಶಾಸನವು ತಿಳಿಸುತ್ತದೆ. ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ದಕ್ಷಿಣ ದಿಕ್ಕಿಗೆ ಸುಮಾರು ೩ ಅಡಿ ಎತ್ತರದ ಕಲ್ಲಿನ ಅಧಿಷ್ಠಾನವಿದೆ. ಈ ಅಧಿಷ್ಠಾನದ ಸ್ಥಳವೇ ನಿಬಗೂರು ಶಾಸನದಲ್ಲಿ ಉಕ್ತವಾಗಿರುವ ಜಮದಗ್ನಿ ಋಷಿಯ ಮಠವಾಗಿದ್ದಿರಬಹುದು. ಸ್ಥಳೀಯವಾಗಿ ಸಾರ್ವಜನಿಕರು ಈ ಪ್ರದೇಶವನ್ನು ಪ್ರಸ್ತುತ ಮಠವೆಂದು ಹೇಳುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಇನ್ನು ಜಮದಗ್ನಿ ಮಠವನ್ನು ತಿಳಿದ ಮೇಲೆ ಜಮದಗ್ನಿ ಋಷಿಯ ಕಡೆ ಗಮನಹರಿಸುವುದು ಮುಖ್ಯ. ಜಮದಗ್ನಿ ಋಷಿ ಯಾರು? ಅವನ ಹಿನ್ನೆಲೆ, ಪರಂಪರೆ ಏನು? ಎಂಬ ವಿಷಯಗಳ ಬಗ್ಗೆ ಯಾವುದೇ ಪ್ರಸ್ತಾಪ ಈ ನಿಬಗೂರು ಶಾಸನದಲ್ಲಿಲ್ಲ. ತನ್ನ ಶ್ರೇಷ್ಠ ಪಾಂಡಿತ್ಯ, ವ್ಯಕ್ತಿತ್ವ, ಅಧಿಕಾರದ ಪ್ರಬಾವದಿಂದ ಕೂಡಿದ ವ್ಯಕ್ತಿಯೊಬ್ಬ ಈ ಪರಿಸರದ ಶೈವ ಕೇಂದ್ರವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದ ಪಕ್ಷದಲ್ಲಿ ಆತನ ನಾಮದೇಹದಿಂದಲೇ ಈ ಸ್ಥಳಗಳನ್ನು ಜನರು ಗುರುತಿಸುವುದು ತೀರ ಸಹಜ.[೩೦] ಅಂತೆಯೇ ಜಮದಗ್ನಿ ಋಷಿಯ ಸವಿನೆನಪಿಗಾಗಿ ಅವರಿದ್ದ ಮಠವನ್ನು ಅವರ ಹೆಸರಿನಿಂದಲೇ ಕರೆದಿರಬಹುದು. ಅನಂತರವೂ ಆತನ ನೆನಪನ್ನು ಹಾಗೆಯೇ ಉಳಿಸುವ ದೃಷ್ಟಿಯಿಂದ ಇದನ್ನು ಹಾಗೆಯೇ ಮುಂದುವರಿಸಿಕೊಂಡು ಬಂದಿರಲೂಬಹುದು ಎಂದು ಸ್ಥಳೀಯರ ಅಭಿಪ್ರಾಯಗಳನ್ನು ಆಧರಿಸಿ ಹೇಳಬಹುದಾಗಿದೆ.

ಕರ್ನಾಟಕದ ಶಾಸನಗಳಲ್ಲಿ ಸ್ಥಾನ ನೈಷ್ಟಿಕ ಸ್ಥಾನ, ಸ್ಥಾನಪತಿ, ಸ್ಥಾನಿಕ ಎಂಬ ಹೆಸರುಗಳನ್ನು ಪದೇ ಪದೇ ಕಾಣಿಸಿಕೊಳ್ಳುತ್ತವೆ. ಶೈವಗುರುಗಳು ವಾಸವಾಗಿದ್ದ ದೇವಸ್ಥಾನಗಳು ಸ್ಥಾನಗಳು. ಇವುಗಳ ಮೇಲ್ವಿಚಾರಣೆಯ ಹೊಣೆ ಹೊತ್ತಿರುವವರು ಸ್ಥಾನಪತಿಗಳು ಅಥವಾ ಸ್ಥಾನಿಕರು. ಒಬ್ಬರಿಗಿಂತ ಹೆಚ್ಚಿನ ಗುರುಗಳಿದ್ದರೆ ಅವರಲ್ಲಿ ಹಿರಿಯವನೇ ಸ್ಥಾನಿಕ ಅಥವಾ ಸ್ಥಾನಪತಿ ಎನಿಸಿಕೊಳ್ಳುತ್ತಿದ್ದನೆಂಬುದು ದೃಡಪಟ ಸಂಗತಿ. ಶೈವಗುರುಗಳು ಅಖಂಡ ಬ್ರಹ್ಮಚಾರಿ ಗಳಾಗಿದ್ದುಕೊಂಡು ಬ್ರಹ್ಮಚಾರಿ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದ ಸ್ಥಾನವೇ ನೈಷ್ಠಿಕ ಸ್ಥಾನ.[೩೧] ಇವರು ಕಾಳಾಮುಖರಾಗಿರುತ್ತಿದ್ದರು. ಕರ್ನಾಟಕದಲ್ಲಿ ಕಲ್ಯಾಣಿ ಚಾಲುಕ್ಯರು ಮತ್ತು ಹೊಯ್ಸಳರ ಅವಧಿ ಶೈವ ಕ್ಷೇತ್ರಗಳಲ್ಲಿ ಕಾಳಾಮುಖರ ಪ್ರಭಾವ ಅಗಾಧವಾಗಿತ್ತು. ಮುಖದ ಮೇಲೆ ಕರಿಯ ಗೆರೆಗಳನ್ನು ಹಚ್ಚಿಕೊಳ್ಳುತ್ತಿದ್ದರಿಂದ ಇವರನ್ನು ಕಾಳಾಮುಖರು ಎಂದು ಕರೆಯುತ್ತಿದ್ದರು. ಇವರ ಹೆಸರುಗಳು ಅಂತ್ಯಗೊಳ್ಳುವುದು ಶಕ್ತಿ, ಪಂಡಿತ, ದೇವ, ಭಟ್ಟಾರಕ,

ಜೀಯ, ಶಿವಮುನಿ ಇತ್ಯಾದಿಯಿಂದ ಕಲ್ಲೇದೇವರಪುರದ ಶಾಸನಗಳಲ್ಲಿ ಈ ಬಗೆಯ ಹೆಸರಿನಿಂದ ಅಂತ್ಯಗೊಳ್ಳುವ ಹೆಸರುಗಳಿವೆ. ಕ್ರಿ.ಶ. ೧೨೩೫ರ ಶಾಸನದಲ್ಲಿ "ಪಾದಾ ಪದ್ಮಾರಾಧಕ...ಕ್ತಿ ಪಂಡಿತರ ಕಾಲುತೊಳೆದು" ಎಂದು ತೇದಿರಹಿತ ಶಾಸನವೊಂದರಲ್ಲಿ "ಶ್ರೀ ಶಕ್ತಿವಿರಚಿತ..... ಧರ್ಮಕಥನಂ" ಎಂದೂ, ಕ್ರಿ.ಶ. ೧೨೭೯ರ ರಾಮಚಂದ್ರದೇವನ ಶಾಸನದಲ್ಲಿ "ಕಲದೇವರ ಸ್ಥಾನಿಕ....ಳುಯಿತಿರು...ಗಳ ಮುಂದಿಟ್ಟು ಕೊಟ್ಟ ಶಾಸನ ಎಂದೂ ಅದೇ ಗ್ರಾಮದ ಮತ್ತೊಂದು ತೇದಿರಹಿತ ಶಾಸನದಲ್ಲಿ "ಕಲಿದೇವರ ದೀಪಾರಧ...ಸೀಜಿಯ...ಕೊಟದ"[೩೩] ಎಂಬ ಉಲ್ಲೇಖಗಳಿವೆ. ಈ ಮೇಲೆ ಉಲ್ಲೇಖಿಸಿದ ಎಲ್ಲಾ ಶಾಸನಗಳಲ್ಲಿಯೂ ಯತಿಗಳ ಹೆಸರುಗಳು ತ್ರುಟಿತವಾಗಿರುವುದು ದುರದೃಷ್ಟಕರ ಸಂಗತಿ. ಕ್ರಿ.ಶ. ೧೦ ಮತ್ತು ೧೧ನೇ ಶತಮಾನದ ಈ ಪರಿಸರದಲ್ಲಿನ ಶಾಸನಗಳು ಚದುರಗೋಳ್[೩೪] ಮತ್ತು ಅಸಗೋಡು ಗ್ರಾಮಗಳಲ್ಲಿ ಕಾಳಾಮುಖರ ಮಠಗಳಿದ್ದು ಪ್ರಸಿದ್ಧ ಶಿಕ್ಷಣ ಕೇಂದ್ರಗಳಾಗಿದ್ದವು. ಚಂದ್ರವಳ್ಳಿಯಲ್ಲಿನ ಅಂಕಲಿಮಠ ಮತ್ತು ಧವಳಪ್ಪಗುಡ್ಡಗಳೂ ಕಾಳಾಮುಖರ ಪ್ರಮುಖ ನೆಲೆಗಳಾಗಿದ್ದವು. ಶಿವಭಕ್ತರಲ್ಲದವರ ಪ್ರವೇಶವನ್ನು ನಿರ್ಬಂಧಿಸುವ ಶಾಸನವನ್ನು ಹೊಂದಿರುವ ದವಳಪ್ಪನ ಗುಡ್ಡ ಕರ್ನಾಟಕ ಕಟ್ಟಾ ಶೈವಾರಾಧನೆಯ ಬಹುಮುಖ್ಯ ಕೇಂದ್ರವಾಗಿತ್ತು.[೩೫] ಕಲ್ಲೇದೇವರಪುರದ ಜಮದಗ್ನಿ ಋಷಿಯ ಮಠ ಸಹ ಕಲ್ಯಾಣದ ಚಾಲುಕ್ಯರ ಅವಧಿಯಲ್ಲೇ ಈ ಪರಿಸರದಲ್ಲಿ ಇದ್ದಿರಬಹುದು. ಈ ಮೇಲೆ ವಿಶ್ಲೇಷಿಸಿದ ಶೈವಯತಿಯ ಶಿಲ್ಪವೂ ಸಹ ಒಬ್ಬ ಕಾಳಾಮುಖಯತಿಯಾದಾಗಿದ್ದು ಈ ಮಠದ ಮತ್ತು ದೇಗುಲದ ಸ್ಥಾನಿಕನಾಗಿ ಕಾರ್ಯನಿರ್ವಹಿಸಿರಬಹುದು. ಎಂದು ಈ ಕಲ್ಲೇದೇವರಪುರದಲ್ಲಿನ ಕಾಳಾಮುಖ ಮಠದ ವಿಶ್ಲೇಷಣೆಯಿಂದ ನಮಗೆ ತಿಳಿದುಬರುವ ಸಂಗತಿಯಾಗಿದೆ.[೩೬]

ಸಂಗೇನಹಳ್ಳಿ ಕೆರೆ

ಚಿತ್ರದುರ್ಗ ತಾಲ್ಲೂಕು ಹಾಗೂ ಜಗಲೂರು ತಾಲ್ಲೂಕಿನ ಮೂಲಕ ಹರಿಯುವ ಜನಗಿಹಳ್ಳವು ಸಾಂಸ್ಕೃತಿಕವಾಗಿ ಬಹಳ ಮಹತ್ವ ಪಡೆದಿದೆ. ಇದನ್ನು ಹಗರಿ, ಚಿನ್ನಹಗರಿ, ಸಣ್ಣ ಹಗರಿ, ಎಂದು ಕರೆಯುವುದುಂಟು. ಅಲ್ಲದೆ ಸ್ಥಳೀಯರು ಜನಗಿಹಳ್ಳವೆಂದೂ ಕರೆಯುವುದುಂಟು. ಜನಗಿ ಎಂದರೆ ನೀರು ಬಸಿಯುವುದು, ಜಿನುಗು, ಜೋಗು ಎಂಬ ಅರ್ಥಗಳನ್ನು ನೀಡಲಾಗಿದೆ.[೩೭] ಈ ಜನಗಿಹಳ್ಳವು ಮೂಲತಃ ಚಿತ್ರದುರ್ಗದ ಪಶ್ಚಿಮ ಬೆಟ್ಟಗಳಲ್ಲಿ ಹುಟ್ಟಿ ಚಿತ್ರಹಳ್ಳಿಯಿಂದ ಹರಿದು ಕಾತ್ರಾಳು ಕೆರೆಯ ಮೂಲಕ ಹರಿದು ಸಂಗೇನಹಳ್ಳಿ ಕೆರೆಗೆ ತಲುಪುತ್ತದೆ. ತರುವಾಯ ಅಲ್ಲಿಂದ ಕಲ್ಲೇದೇವರಪುರ, ದೊಣ್ಣೆಹಳ್ಳಿ, ಚಿಕ್ಕಮಲ್ಲನಹೊಳೆಯ ಮೂಲಕ ಹರಿದು ಬ್ರಹ್ಮಗಿರಿ ಮೊದಲಾದ ಪ್ರಾಚೀನ ಎಡೆಯನ್ನು ದಾಟಿ ಆಂದ್ರಪ್ರದೇಶದ ಗಡಿಭಾಗದಲ್ಲಿ ಹಗರಿಯನ್ನು ಸೇರಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಬಳಿ ತುಂಗಭದ್ರಾ ನದಿಯನ್ನು ಸೇರುತ್ತದೆ.[೩೮] ಹೀಗೆ ಜನಗಿಹಳ್ಳ ಜಗಲೂರು ತಾಲೂಕಿನಲ್ಲಿ ಹರಿಯುವಾಗ ಅದಕ್ಕೆ ಅಡ್ಡಲಾಗಿ ಹಲವಾರು ಕೆರೆಕಟ್ಟೆಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಅವುಗಳಲ್ಲಿ ಸಂಗೇನಹಳ್ಳಿ ಕೆರೆಯು ಒಂದು.

ಜನಗಿಹಳ್ಳ ಹರಿಯುವಾಗ ಅದಕ್ಕೆ ಅಡ್ಡಲಾಗಿ ನಿರ್ಮಿಸಿರುವ ಕೆರೆಗಳಲ್ಲಿ ಅತ್ಯಂತ ಪ್ರಮುಖವಾಗಿದ್ದು ಸಂಗೇನಹಳ್ಳಿಕೆರೆ. ಜಗಲೂರಿನ ಶ್ರೀ ಮಹಮ್ಮದ್ ಇಮಾಮ್ ಸಾಹೇಬರಿಂದ ನಿರ್ಮಿಸಲ್ಪಟ್ಟಿತೆಂದು ಹೇಳುವ ಈ ಕೆರೆಯ ಪರಿಸರವು ಪ್ರಾಗೈತಿಹಾಸಿಕ ಕಾಲದಿಂದಲೂ ಮಹತ್ವ ಪಡೆದಿದೆ. ಈ ಭಾಗದಲ್ಲಿ ಹಳೆಯ ಶಿಲಾಯುಗ, ನೂತನ ಶಿಲಾಯುಗ ಹಾಗೂ ಶಾತವಾಹನ ಕಾಲದ ಹಲವು ಅವಶೇಷಗಳು ಬೆಳಕಿಗೆ ಬಂದಿವೆ. ಇದರಿಂದ ಪ್ರಾಕೃತಿಕವಾಗಿ ಹಳ್ಳ ಹರಿಯುವ ಈ ಪ್ರದೇಶದಲ್ಲಿ ನೂತನ ಶಿಲಾಯುಗ, ಬೃಹತ್ ಶಿಲಾಯುಗ ೩೦ ಶಾತವಾಹನ,[೩೯] ಕಾಲದಲ್ಲಿ ಮಾನವನು ಜಲ ಬಳಕೆಗಾಗಿ ಕೆರೆ ಕಟ್ಟೆಗಳನ್ನು ನಿರ್ಮಿಸಿಕೊಂಡು ನೀರಾವರಿ ಕಾರ್ಯಗಳನ್ನು ಮಾಡಿಕೊಂಡಿರುವ ಸಾಧ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಈ ದೃಷ್ಟಿಯಿಂದ ಗಮನಿಸಿದಾಗ ಸಂಗೇನಹಳ್ಳಿ ಕೆರೆ ಪರಿಸರವು ಬಹು ಪ್ರಾಚೀನತೆಯನ್ನು ಹೊಂದಿದೆ ಎಂದು ಹೇಳಬಹುದಾಗಿದೆ. ಈ ಸಂಗೇನಹಳ್ಳಿಯ ಕೆರೆ ಪರಿಸರದ ಮತ್ತೊಂದು ವಿಶಿಷ್ಟತೆಯೆಂದರೆ ಅದು ಇದರ ನೀರು ನಿಂತುಕೊಳ್ಳುವ ಆಯಕಟ್ಟು ಸ್ಥಳ ಚಿತ್ರದುರ್ಗ ತಾಲೂಕಿನಲ್ಲಿದ್ದರೆ, ಅಚ್ಚುಕಟ್ಟು ಜಗಲೂರು ತಾಲೂಕಿನಲ್ಲಿದೆ. ಕೆರೆಯ ಸಂರಕ್ಷಣೆಯ ಹಿನ್ನೆಲೆಯಲ್ಲಿ ಇದರ ಮೇರೆಯನ್ನು ಅಂಕುಡೊಂಕಾಗಿ ನಿರ್ಮಿಸಿದ್ದಾರೆ. ಈ ಕೆರೆಯ ಏರಿಯ ನಿರ್ಮಾಣಕ್ಕೆ ಒರಟು ದುಂಡುಶಿಲೆ ಹಾಗೂ ಕೆಂಪು ಮಣ್ಣನ್ನು ಬಳಸಿ ಕಟ್ಟಲಾಗಿದೆ. ಈ ಕೆರೆಗೆ ಕಾತ್ರಾಳ ಕೆರೆಯಿಂದ ಕೋಡಿ ಬಿದ್ದು ಹೆಚ್ಚಾಗಿ ಹರಿದು ಬರುವ ನೀರು ಹಾಗೂ ಸುತ್ತಮುತ್ತಲಿನ ಪ್ರಕೃತಿದತ್ತವಾದ ಹಳ್ಳ ಕೊಳ್ಳ ಕಣಿವೆಗಳಿಂದ ಬರುವ ನೀರು ಬಹುಮುಖ್ಯ ಮೂಲಗಳಾಗಿವೆ. ಕೆರೆಗೆ ಪ್ರಸ್ತುತ ಎರಡು ತೂಬುಗಳಿವೆ. ಎಡನಾಲೆ, ಬಲನಾಲೆಗಳು ಸಮವಾಗಿ ೧೨ ಕಿ.ಮೀ. ಇವೆ. ಕೆರೆಯ ಏರಿಯು ೧೧ ಮೀ. ಎತ್ತರ ಹಾಗೂ ೧೩೪೧ ಮೀ ಉದ್ದವನ್ನು ಹೊಂದಿದೆ. ಈ ಕೆರೆಯು ೩೮೯.೫೫ ಎಂ.ಸಿ.ಎಫ್.ಟಿ. ನೀರಿನ ಸಾಮರ್ಥ್ಯ ಹೊಂದಿದೆ. ನೀರಾವರಿ ಅಚ್ಚುಕಟ್ಟು ಒಟ್ಟು ೬೪೭ ಹೆಕ್ಟೇರ್ ಆಗಿದೆ.[೪೦] ಈ ರೀತಿ ಇರುವ ಸಂಗೇನಹಳ್ಳಿ ಕೆರೆಯು ಸಂಗೇನಹಳ್ಳಿಯ ಸುತ್ತಲಿನ ರೈತರ ಕೃಷಿಗೆ ನೀರನ್ನು ಪೂರೈಕೆ ಮಾಡುವಲ್ಲಿ ಜೀವನಾಧಾರವನ್ನು ಒದಗಿಸುತ್ತಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಕಲ್ಲೇದೇವರಪುರ ಸ್ಥಳವು ಹೊಯ್ಸಳರ ಆಡಳಿತಾವಧಿಯಿಂದ ಹಿಡಿದು ವಿಜಯನಗರದ ಅರಸರು, ಚಿತ್ರದುರ್ಗ ಪಾಳೆಯಗಾರರ ಆಡಳಿತಾವಧಿಯವರೆಗೂ ಈ ಪ್ರದೇಶದಲ್ಲಿ ದೇವಾಲಯ, ಶಾಸನಗಳು, ಮೂರ್ತಿಶಿಲಗಳು, ವೀರಗಲ್ಲುಗಳು ಮುಂತಾದ ಪ್ರಮುಖ ಅಂಶಗಳು ಇತಿಹಾಸದ ಪುನರ್ ರಚನೆಗೆ ಆಧಾರಗಳಾಗಿ ಪ್ರತಿನಿಧಿಸುತ್ತವೆ. ಅಂದಿನ ಕಾಲದ ಜನರ ಜೀವನದ ಸಮಾಜದ ಸಾಮಾಜಿಕ ಜೀವನ ಕ್ರಮಗಳು ಆರ್ಥಿಕ ನೀತಿಗಳು, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಂದಿನ ಕಾಲದ ದೇವಾಲಯಗಳ ಹಾಗೂ ಇತರೆ ಆಕರಗಳ ಮೂಲಗಳಿಂದ ತಿಳಿಯಬಹುದಾಗಿದೆ.

ಕೊನೆ ಟಿಪ್ಪಣಿ

೧. ಪ್ರಭಾಕರ್ ಎಂ.ಎನ್. ದೇವಾಲಯ ವಾಸ್ತು, ಪು.ಸಂ. ೧

೨. ಅದೇ ಪು.ಸಂ. ೨, ೩

೩. ಅದೇ ಪು.ಸಂ. ೫, ೬

೪. ಅದೇ ಪು.ಸಂ. ೮, ೯

೫. ಅದೇ ಪು.ಸಂ. ೧೧

೬. ರಾಜಶೇಖರಪ್ಪ ಎಸ್. ೧೯೮೮, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಪು.ಸಂ. ೧೩

೭. ಅದೇ ಪು.ಸಂ. ೧೫

೮. ಮೂರ್ತಿ ಕೆ.ಎಲ್.ಎಂ., ೧೯೯೮, ಕರ್ನಾಟಕ ಕಲೆ ಮತ್ತು ವಾಸ್ತುಶಿಲ್ಪ, ಪು. ೧೭

೯. ಸೋಮಶೇಖರ್ ಎಸ್.ವೈ. (ಸಂ), ೨೦೧೦, ಜಗಲೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ೮೮–೮೯

೧೦. ನಾಯಕರ ಹುಲುಗಪ್ಪ, ಶಾಸನಗಳ ಪ್ರಕಾರ ಮತ್ತು ಅವುಗಳ ಮಹತ್ವ, ಪು.ಸಂ. ೭

೧೧. ಅದೇ ಪು.ಸಂ. ೪

೧೨. ಎಪಿಗ್ರಾಪಿಯಾ ಕರ್ನಾಟಕ, ಸಂಪುಟ–೧೧, ಪು.ಸಂ. ೩೩

೧೩. ಸೋಮಶೇಖರ್ ಎಸ್.ವೈ. (ಸಂ), ಪೂರ್ವೋಕ್ತ, ಪು.ಸಂ. ೯೦

೧೪. ಎ.ಕ.ಸಂ. ಪೂರ್ವೋಕ್ತ, ಪು.ಸಂ.

೧೫. ಗಿರಿಜಾ ಟಿ. ದಾವಣಗೆರೆ–ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ದಾವಣಗೆರೆ, ಪು.ಸಂ. ೬೩೧

೧೬. ಸೋಮಶೇಖರ್ ಎಸ್.ವೈ. (ಸಂ), ಪೂರ್ವೋಕ್ತ ಪು.ಸಂ. ೯೧

೧೭. ಅದೇ ಪು.ಸಂ. ೯೧

೧೮. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.ಸಂ. ೬೨೭

೧೯. ಗಿರಿಜಾ ಟಿ. ಪೂರ್ವೋಕ್ತ, ಪು.ಸಂ. ೬೩೪

೨೦. ತಿಪ್ಪೇಸ್ವಾಮಿ ಎಚ್. ದಾವಣಗೆರೆ ಜಿಲ್ಲೆಯ ದೇವಾಲಯಗಳು, ಪು.ಸಂ. ೧೭೭

೨೧. ಕ.ಸಂ.ಸ. ಪೂರ್ವೋಕ್ತ, ಪು.ಸಂ. ೬೨೯

೨೨. ಕರ್ನಾಟಕ ಚರಿತ್ರೆ ಸಂಪುಟ-೧, ಪು.ಸಂ. ೨೪೧-೨೪೨

೨೩. ಸೋಮಶೇಖರ್ ಎಸ್.ವೈ. (ಸಂ), ಪೂರ್ವೋಕ್ತ, ಪು.ಸಂ. ೩೫

೨೪. ಶಂಕರ್ ಎಸ್. ಅಥಣಿ, 'ದಕ್ಷಬ್ರಹ್ಮನ ಒಂದು ಅಪರೂಪದ ವಿಗ್ರಹ' ಸತ್ಯಶುದ್ಧ ಕಾಯಕ ಸಂ-೭, ಪು.ಸಂ. ೩೭-೩೯, ಇದರ ಎ.ಸಿ.ಪಿ. ಸಂಖ್ಯೆ-೫೩೮

೨೫. ಸೋಮಶೇಖರ್ ಎಸ್.ವೈ. (ಸಂ), ಪೂರ್ವೋಕ್ತ, ಪು.ಸಂ. ೯೫

೨೬. ಅದೇ ಪು.ಸಂ. ೯೫

೨೭. ಅದೇ ಪು.ಸಂ. ೯೫

೨೮. ಅದೇ ಪು.ಸಂ. ೯೫

೨೯. ಶೇಷಶಾಸ್ತ್ರಿ ಆರ್. ೧೯೮೨, ಕನ್ನಡ ಸಾಹಿತ್ಯ ಪರಿಷತ್ ಚಾಮರಾಜಪೇಟೆ, ಬೆಂಗಳೂರು ಪು.ಸಂ. ೧೧

೩೦. ಶೇಷಶಾಸ್ತ್ರಿ ಆರ್. ಪೂರ್ವೋಕ್ತ, ಪು.ಸಂ. ೧೧

೩೧. ಎ.ಕ. ಪೂರ್ವೋಕ್ತ, ಪು.ಸಂ. ೪೧

೩೨. ಸೋಮಶೇಖರ್ ಎಸ್.ವೈ. (ಸಂ), ಪೂರ್ವೋಕ್ತ, ಪು.ಸಂ. ೯೫

೩೩. ಅದೇ ಪು.ಸಂ. ೯೫

೩೪. ಲಕ್ಷ್ಮಣ್ ತೆಲಗಾವಿ, ೧೯೮೯, ಚಿತ್ರದುರ್ಗ ಕೋಟೆ ಮತ್ತು ಬೆಟ್ಟ ಪರಿಸರದ ಮೂರು ವ್ಯಕ್ತಿ ಶಿಲ್ಪಗಳು, ಇತಿಹಾಸ ದರ್ಶನ, ಸಂಪುಟ-೧೪, ಪು.ಸಂ. ೧೪೨

೩೫. ಅದೇ ಪು.ಸಂ. ೧೪೨

೩೬. ಸೋಮಶೇಖರ್ ಎಸ್.ವೈ. (ಸಂ), ಪೂರ್ವೋಕ್ತ, ಪು.ಸಂ. ೯೬

೩೭. ಅದೇ ಪು.ಸಂ. ೯೬

೩೮. ಅದೇ ಪು.ಸಂ. ೯೬

೩೯. ವಿರೂಪಾಕ್ಷಿ ಪೂಜಾರಹಳ್ಳಿ, ಚಿನ್ನಹಗರಿ ನದಿ ಪರಿಸರದ ಪ್ರಾಚ್ಯಾವಶೇಷಗಳು ಒಂದು ಶೋಧನೆ, ಇತಿಹಾಸ ದರ್ಶನ, ಪು.ಸಂ. ೨೦

೪೦. ಅದೇ ಪು.ಸಂ. ೨೦

ಅಧ್ಯಾಯ: ನಾಲ್ಕು

ನಂಬಿಕೆ ಆಚರಣೆಗಳು

ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳು ಬಹುಶ್ರುತ ನೆಲೆಯಲ್ಲಿ ರೂಪಗೊಂಡಾಗ ಅವುಗಳ ವಿಸ್ತಾರ ಮತ್ತು ಮಹತ್ವ ಇಮ್ಮಡಿಗೊಳ್ಳುತ್ತವೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಾಯವನ್ನು ರೂಪಿಸಲಾಗಿದೆ. ನಿರ್ದಿಷ್ಟಪಡಿಸಿದ ಭೌಗೋಳಿಕ ಕ್ಷೇತ್ರದಲ್ಲಿ ಇತಿಹಾಸ ಮತ್ತು ಪುರಾತತ್ವ ಅಧ್ಯಯನದ ವಿವರಗಳು ವಿಜೃಂಭಿಸಿದರೂ ಅದರಾಚೆಗೂ ಇರುವ ಹಲವಾರು ವಿಷಯಗಳು ಹಾಗೆಯೇ ಉಳಿದುಕೊಂಡು ಬಿಟ್ಟಿವೆ. ಆ ಬಗೆಯಲ್ಲಿ ಸೃಷ್ಟಿಗೊಳ್ಳುವ ಕೊರತೆಗಳನ್ನು ತಕ್ಕಮಟ್ಟಿಗಾದರೂ ನಿವಾಸಿಕೊಳ್ಳುವ ಯತ್ನ ಈ ಅಧ್ಯಯನಕ್ಕಿದೆ. ಆದರೆ ಇಂಥ ಸಂದರ್ಭದಲ್ಲಿ ಸಾಕ್ಷಿಗಳನ್ನು ಪ್ರಧಾನವಾಗಿ ಬೇಡುವ ಅಧ್ಯಯನಗಳಿಂದ ಸ್ವಲ್ಪಮಟ್ಟಿಗೆ ಬಿಡಿಸಿಕೊಳ್ಳುವ ಅನಿವಾರ್ಯ ಪ್ರಸಂಗವು ಉಂಟಾಗುತ್ತದೆ. ಇಂಥ ಕ್ರಮಗಳು ಇತಿಹಾಸ ಪುರಾತತ್ವ ಅಧ್ಯಯನಗಳಿಗೆ ವ್ಯತ್ತಿರಿಕ್ತವಾಗಿ ಕಂಡುಬಂದರೂ, ಅಂಥ ಕಥನಗಳಲ್ಲಿ ಆದಿ ಮತ್ತು ಅಂತ್ಯವಿಲ್ಲದ ಸಂಗತಿಗಳು ಅಮೂರ್ತರೂಪದಲ್ಲಿ ನೆಲೆಗೊಂಡಿರುವುದನ್ನು ಈ ಹೊತ್ತಿನ ಇತಿಹಾಸ ಪುರಾತತ್ವ ಅಧ್ಯಯನ ಕ್ರಮಗಳು ಸಾರಾಸಗಟಾಗಿ ತಿರಸ್ಕರಿಸುವುದಕ್ಕೆ ಸಾಧ್ಯವಿಲ್ಲ. ಸಾಂಸ್ಕೃತಿಕ, ಧಾರ್ಮಿಕ ಆಚರಣೆಯ ನೆಲೆಗಳ ವಿವರಗಳು ಹೆಚ್ಚಾಗಿ ಮೌಖಿಕ ಪರಂಪರೆಗಳಲ್ಲಿಯೇ ನೆಲೆಗೊಂಡಿರುತ್ತವೆ. ಅವುಗಳಲ್ಲಿ ಚಾರಿತ್ರಿಕ ತಥ್ಯ ಇದ್ದರೂ ಅದು ಕಾಲಾನುಕ್ರಮದ ಬದ್ದತೆಯಲ್ಲಿ ರೂಪಗೊಂಡಿರುವುದಿಲ್ಲ. ಹಾಗಾಗಿ ಭೂತದಿಂದ ಭವಿಷ್ಯಕ್ಕೂ, ವರ್ತಮಾನದಿಂದ ಭೂತಕ್ಕೂ ಪಯಣಿಸಿದ ಹೆಜ್ಜೆ ಗುರುತುಗಳನ್ನು ನಿರ್ಧಿಷ್ಟವಾಗಿ ಗುರುತಿಸುವುದು ಸಹ ತುಂಬಾ ಕಷ್ಟ.[1]

ಪ್ರಸ್ತುತ ಈ ಅಧ್ಯಯನವು ಕಲ್ಲೇದೇವರಪುರ ಪರಿಧಿಯಲ್ಲಿರುವಂತಹ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆ ನೆಲೆಯಲ್ಲಿ ರೂಪಗೊಂಡಿರುವ ಕೆಲವು ಮಹತ್ವದ ನೆಲೆಗಳ ಕುರಿತು ಚರ್ಚಿಸುವ ಉದ್ದೇಶ ಹೊಂದಲಾಗಿದೆ. ಅಧ್ಯಯನದ ಉದ್ದೇಶ. ವ್ಯಾಪ್ತಿ ಹಾಗೂ ಮಿತಿಗಳ ಹಿನ್ನೆಲೆಯಲ್ಲಿ ಇತಿಹಾಸ ಪುರಾತತ್ವ ಸಂಗತಿಗಳಿಗೆ ಹೆಚ್ಚಿನಾಂಶ ಸಂಬಂಧಪಡಬಹುದಾದ ನೆಲೆಗಳ ಕುರಿತು ಮಾತ್ರ ವಿವೇಚಿಸಲಾಗಿದೆ. ಬಹುವಿಸ್ತಾರವನ್ನು ಪಡೆದಿರುವ ಜಾತ್ರೆ–ಉತ್ಸವ–ಆಚರಣೆ ನಂಬಿಕೆಗಳ ಬಗೆಗೆ ಸಾಹಿತ್ಯ ಮತ್ತು ಜಾನಪದ ಅಧ್ಯಯನಗಳು ನಿಷ್ಕರ್ಷಿಸಬಹುದಾದ

ನೆಲೆಯಲ್ಲಿ ವಿವರಿಸುವ ಉದ್ದೇಶವನ್ನು ಸಹ ಈ ಅಧ್ಯಯನ ಹೊಂದಿದೆ. ಇಲ್ಲಿ ಪ್ರಕಟಿಸಿರುವ ನೆಲೆಗಳ ಕುರಿತು ಜಾನಪದ ಅಧ್ಯಯನದ ಶಿಸ್ತುಗಳ ಹಿನ್ನಲೆಯಲ್ಲಿ ಚರ್ಚೆಗೆ ಒಳಪಡಿಸಬಹುದಾದ ಸನ್ನಿವೇಶಗಳಿದ್ದರೂ ಆ ತರಹದ ಪ್ರಯತ್ನವು ಸಹ ಈ ಅಧ್ಯಾಯದ ಉದ್ದೇಶವಾಗಿದೆ.

ಹಬ್ಬ ಹರಿದಿನಗಳು

ಬಹುಸಂಖ್ಯಾತ ಹಾಗೂ ವಿವಿಧ ಜಾತಿ-ಜನಾಂಗಗಳ ಭೇದವಿಲ್ಲದೇ ಆಚರಿಸುತ್ತಿರುವ ಕಲ್ಲೇಶ್ವರ ಜಾತ್ರೋತ್ಸವ, ಹಿಟ್ಟಿನ ಹುಣ್ಣಿಮೆ, ಶ್ರಾವಣಮಾಸದ ಆಚರಣೆಗಳು, ಕಾರ್ತಿಕ ಮಾಸದ ಆಚರಣೆಗಳಿಗೆ ಸಂಬಂಧಿಸಿದಂತಹ ಗಾದೆ ಮಾತುಗಳು, ಜಾನಪದ ಸಾಹಿತ್ಯ ಆಕರಗಳನ್ನು ಪರಿಗಣಿಸಿ ಪ್ರಸ್ತುತ ವಿವರಗಳನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಸಂಬಂಧಿಸಿದ ಬಿಡಿ ಬಿಡಿಯಾಗಿ ನೋಡದೇ ಒಟ್ಟು ಸಮಗ್ರತೆಯಿಂದ ಕೂಡಿರುವ ಮತ್ತು ಅವೆಲ್ಲವೂ ಸರಿಯಾಗಿ ಹೊರಡಿಸಬಹುದಾದ ಧ್ವನಿಯನ್ನು ಒಟ್ಟಾರೆ ಅಂಶಗಳ ರೂಪದಲ್ಲಿ ಇದರಲ್ಲಿ ಪ್ರಸ್ತಾಪಿಸಲಾಗಿದೆ. ಆಚರಣೆಯ ಪ್ರದೇಶದಲ್ಲಿರುವ ಭೌತಿಕ ಆಕರಗಳ ಹಿನ್ನೆಲೆಯಲ್ಲಿ ಕೆಲವು ವಿವರಗಳನ್ನು ನಿರ್ದಿಷ್ಟ ವ್ಯಾಪ್ತಿಯಲ್ಲಿ ಮಾತ್ರ ವಿಶ್ಲೇಷಿಸಲಾಗಿದೆ. ಬಹುಶಃ ಇದೊಂದು ನ್ಯೂನತೆಯಾಗಿ ಕಾಣಬಹುದು.

೪.೧ ಕಲ್ಲೇದೇವರಪುರದ ಕಲ್ಲೇಶ್ವರ ಜಾತ್ರೋತ್ಸವ ಮತ್ತು ಜನರ ಸಹಭಾಗಿತ್ವ

ಜಾತ್ರೆ ಎಂಬ ಪದವು ಸಂಸ್ಕೃತದ ಯಾತ್ರೆ ಎಂಬ ಪದಕ್ಕೆ ಅನ್ವರ್ಥವಾಗಿ ಬಳಕೆಯಲ್ಲಿರುವ ಪದವಾಗಿದೆ. 'ವರ್ಷಕೊಮ್ಮೆ ನಿರ್ದಿಷ್ಟ ಅವಧಿಯಲ್ಲಿ ಹಾಗೂ ಸ್ಥಳದಲ್ಲಿ ಒಂದು ದಿವಸ ಅಥವಾ ಒಂದಕ್ಕಿಂತ ಹೆಚ್ಚು ದಿನ ಭಕ್ತ ಸಮೂಹದೊಡಗೂಡಿ ನಡೆಸುವ ಉತ್ಸವ ಜಾತ್ರೆಯೆಂದೆನಿಸಿಕೊಳ್ಳುತ್ತದೆ. ಇದು ಹಿಂದಿನಿಂದಲೂ ಹಲವಾರು ತಲೆಮರಿಗೆ ಮೌಖಿಕ ಹಾಗೂ ಕ್ರಿಯಾತ್ಮಕ ಅಭಿವ್ಯಕ್ತಿಯಲ್ಲಿ ಪರಂಪರೆಯಿಂದ ನಡೆದು ಬಂದಿದೆ. ಪ್ರತಿನಿತ್ಯ ಪ್ರಕೃತಿಯ ಒಡಲಲ್ಲಿ ಶ್ರಮವಹಿಸಿ ದುಡಿಯುವ ಜನತೆ ಆ ಬದುಕಿನಿಂದ ಸ್ವಲ್ಪಕಾಲ ವಿಶ್ರಾಂತಿ ಪಡೆಯಲು ಹಬ್ಬ, ಹರಿದಿನ, ಉತ್ಸವ, ಜಾತ್ರೆಗಳಂತ ಸಾಮಾಜಿಕ ಆಚರಣೆಗಳನ್ನು ಕಂಡುಕೊಂಡರು. ಇವುಗಳು ವೈಯಕ್ತಿಕತೆಗಿಂತ ಬಹುಪಾಲು ಸಮುದಾಯಗಳ ಸಮಷ್ಠಿಯ ಹಿತಾಸಕ್ತಿಯತ್ತ ಒಲವು ಮೂಡಿಸುವಂಥವುಗಳು. ಧಾರ್ಮಿಕ ವಾತಾವರಣವೇ ಇಲ್ಲಿ ಪ್ರಧಾನವಾದರೂ ಅನೇಕ ಕೊಡುಕೊಳ್ಳುವಿಕೆಗಳು ಜರುಗುತ್ತವೆ. ಎಲ್ಲಾ ಜನ ಸಮುದಾಯಗಳ ಸಹಭಾಗಿತ್ವ ಇದರ ಯಶಸ್ಸಿನ ಹಿಂದಿರುತ್ತದೆ. ಗ್ರಾಮದ ಎಲ್ಲ ಜನ ಸಮುದಾಯಗಳ ಜನರು ತಮ್ಮ ಕೌಟುಂಬಿಕ ಪರಧಿಯನ್ನು ದಾಟಿ ಒಟ್ಟಾಗಿ ಸೇರಿ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಭಾವೈಕ್ಯತೆಯ ಚೈತನ್ಯದ ಚಿಲುಮೆಯಾಗಿ, ಜನಮನದಲ್ಲಿ ಸೌಹಾರ್ದ, ಸಾಮರಸ್ಯ ಸಹಬಾಳ್ವೆಯ ಭಾವನೆ ಬೆಳೆಸಿ, ಜಾತಿ-ಜಾತಿಗಳ ನಡುವಿನ ಮೇಲು-ಕೀಳು ಎಂಬ ಭಾವನೆಯನ್ನು ತೊಡೆದು ಹಾಕುವಲ್ಲಿ ಜಾತ್ರೆಯ ಪ್ರಭಾವ ಅಗಣಿತವಾದುದೇ ಸರಿ.[೨]

ಕಲ್ಲೇದೇವರಪುರ ಹಾಗೂ ಸುತ್ತಮುತ್ತಲಿನ ಜನರ ಆರಾಧ್ಯದೈವ ಕಲ್ಲೇಶ್ವರ ದೇವರು, ಪ್ರತಿವರ್ಷ ವೈಶಾಖ ಮಾಸದ ಹುಣ್ಣಿಮೆಯಲ್ಲಿ ಕಲ್ಲೇಶ್ವರನ ಜಾತ್ರೆ ಆರು ದಿನಗಳ ಕಾಲ ನಡೆಯುತ್ತದೆ. ಪ್ರತಿದಿನವೂ ಒಂದೊಂದು ವಿಶೇಷ ಉತ್ಸವ ನಡೆಯುವುದು ಪಾರಂಪರಿಕವಾಗಿ ನಡೆದುಬಂದ ಆಚರಣೆಯಾಗಿದೆ.

ಮೊದಲನೆಯ ದಿನದಂದು ಕಲ್ಲೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ಜಾತ್ರೆಗೆ ಅಧಿಕೃತವಾಗಿ ಆರಂಭ ಮಾಡುವರು. ಕಂಕಣಧಾರೆಯಲ್ಲಿ ಪ್ರಧಾನ ಪಾತ್ರ ಪೂಜಾರಿ ದಂಪತಿಗಳಾದ್ದಗಿರುತ್ತದೆ. ಇವರೊಡನೆ ಇತರರು ಸೇರಿ ಸುಮಾರು ಹದಿನೈದು ಜನರು ಒಪ್ಪತ್ತಿರುವರು. ಪೂಜಾರಿ ಕಲ್ಲಪ್ಪನವರ ಮನೆಯಲ್ಲಿ ಕಂಕಣವನ್ನು ಕಟ್ಟಲು ಸಿದ್ದಮಾಡಿಕೊಂಡಾಗ ಬಾಳೆಹನ್ನಾರು ಮತ್ತು ಉಜ್ಜನಿ ಮಠದ ಶರಣರು ಬಂದು ಪೂಜಾರಿ ದಂಪತಿಗಳಿಗೆ ಕಂಕಣ ಕಟ್ಟುವರು. ಬಹುತೇಕ ಜಾತ್ರೆಗಳಲ್ಲಿ ಒಬ್ಬರಿಗೊಬ್ಬರು ಕಂಕಣ ಕಟ್ಟುವ ಪದ್ಧತಿಯನ್ನು ಕಾಣುತ್ತೇವೆ. ಆದರೆ ಈ ಜಾತ್ರೆಯಲ್ಲಿ ಈ ಮೇಲಿನ ಭಿನ್ನತೆಯನ್ನು ಕಾಣುತ್ತೇವೆ. ಈ ಜಾತ್ರೆಯಲ್ಲಿ ಶರಣರು ಪೂಜಾರಿ ದಂಪತಿಗಳಿಗೆ ಕಂಕಣ ಕಟ್ಟುವುದು ವಿಶೇಷತೆ. ಇದರ ತರುವಾಯ ತೇರಿಗೆ ಕಂಕಣ ಕಟ್ಟಿ ಪೂಜಾರಿಯ ಮನೆಗೆ ಬಂದು ಕಳಸ ಸ್ಥಾಪನೆ ಮಾಡುವರು. ಹೊಳೆಪೂಜೆ ಮುಗಿಸಿ ಬಂದ ಮುತ್ತೈದೆಯರು ಮದಲಿಂಗಶಾಸ್ತ್ರ ಪೂಜೆ ಮಾಡುವವರು. ಮದಲಿಂಗಶಾಸ್ತ್ರ ಪೂಜೆಯನ್ನು ಐದು ಭಾರಿ ಮಾಡುವರು. ಅಂದು ಅಕ್ಕಿ, ಬೇಳೆ, ಬೆಲ್ಲ ಸಹಿತ ಹೊಸಬಟ್ಟೆ ಮತ್ತು ಎಡೆಯನ್ನು ದೇವರಿಗೆ ಪೂಜೆ ಮಾಡಿ ಸಮರ್ಪಿಸುವರು. ಅಂದು ಪೂಜಾರರ ಮನೆಯಲ್ಲಿ ಊರೂಟ ಮಾಡುವರು. ಇದು ಅಂದಿನ ಒಪ್ಪತ್ತಿನ ಊಟವಾಗಿದೆ.

ಎರಡನೆಯ ದಿನ ವಿಶೇಷ ಉತ್ಸವ, ಮದಲಿಂಗಶಾಸ್ತ್ರ ಮತ್ತು ಗಜೋತ್ಸವ, ಆನೆ ಈ ದಿನ ಕಲ್ಲೇಶ್ವರನ ವಾಹನ, ಸ್ವಾಮಿಯ ಉತ್ಸವ ಮೂರ್ತಿಯನ್ನು ಅಲಂಕರಿಸಿ ಗಜದ ಮೇಲೆ ಕೂರಿಸಿ ಪೂಜಿಸುವರು. ಅಂದು ಕಲ್ಲೇಶ್ವರ ಸ್ವಾಮಿಗೆ ಬಾಸಿಂಗ ಕಟ್ಟಿ ಮಾದಲಿಂಗನನ್ನಾಗಿ ಮಡುವರು. ಮೂರನೆಯ ದಿನ ಉತ್ಸವ ಅಶ್ವೋತ್ಸವ, ಕುದುರೆ ಈ ದಿನ ಕಲ್ಲೇಶ್ವರನ ವಾಹನ, ಕಲ್ಲೇಶ್ವರ ಉತ್ಸವ ಮೂರ್ತಿಯನ್ನು ಅಲಂಕರಿಸಿ ಅಶ್ವದ ಮೇಲೆ ಕೂರಿಸಿ ಪೂಜಿಸುವರು. ನಾಲ್ಕನೆಯ ದಿನ ವೃಷಭೋತ್ಸವ, ಈ ದಿನ ಕಲ್ಲೇಶ್ವರನ ವಾಹನ ವೃಷಭ, ಕಲ್ಲೇಶ್ವರನ ಉತ್ಸವ ಮೂರ್ತಿಯನ್ನು ಇದರ ಮೇಲೆ ಕೂರಿಸುವರು. ನಾಲ್ಕನೆಯ ದಿನದಂದು ಉತ್ಸವ ಮೂರ್ತಿಯನ್ನು ಗ್ರಾಮದಲ್ಲಿ ಮೆರವಣಿಗೆ ಮಾಡುವುದಿಲ್ಲ.

ಐದನೆಯ ದಿವಸದ ಉತ್ಸವವೇ ರಥೋತ್ಸವ ಅಥವಾ ತೇರು ಎಳೆಯುವುದು. ರಥ ಅಥವಾ ತೇರು ಎಂಬ ಶಬ್ದಗಳನ್ನು ನಾವು ರೂಢಿಯಲ್ಲಿ ಅರ್ಥಬೇದವಿಲ್ಲದೇ ಸಮಾನಾರ್ಥಕ ಪದಗಳಾಗಿ ಬಳಸುತ್ತೇವೆ. ಶಬ್ದಕೋಶದ ದೃಷ್ಟಿಯಲ್ಲಿಯೂ ಇವರೆಡೂ ಸಮಾನಾರ್ಥಕ ಪದಗಳೇ ಆಗಿವೆ. ರಥ, ತೇರು ಆದಾಗ ಶಬ್ದಪಲ್ಲಟದೊಡನೆ ಅರ್ಥಪಲ್ಲಟ ಆಗಿದೆ ಎಂಬುದು ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರ ಅಭಿಮತ.[೩] ಚಾಂದ್ರಮಾನ ಯುಗಾದಿಯ ದಿನದಂದೇ

ಕಲ್ಲೇಸ್ವರ ಸ್ವಾಮಿಯ ತೇರನ್ನು ಪೂಜಿಸಿ. ತೇರಿನ ಮನೆಯಿಂದ ತೇರನ್ನು ಹೊರಗೆ ಎಳೆಯುತ್ತಾರೆ. ಪ್ರಸ್ತುತದ ತೇರು ಇತ್ತೀಚಿನದು. ಹಳೆಯ ತೇರು ದೇವಾಲಯದ ಅವರಣದಲ್ಲಿದೆ. ಇದನ್ನು ಬಳಸುತ್ತಿಲ್ಲ. ಹೊಸ ತೇರನ್ನು ನಾಲ್ಕು ಕಲ್ಲಿನ ಗಾಲಿಗಳು ಹೊತ್ತು ನಿಂತಿವೆ. ಇದರಲ್ಲಿ ಸಿಂಹ, ಕುದುರೆ, ವಿಷ್ಣುವಿನ ವಿವಿಧ ಅವತಾರಗಳಾದ ಕೂರ್ಮಾವತಾರ, ಮತ್ಸ್ಯಾವತಾರ, ನಾರಾಯಣ, ಕೃಷ್ಣನ ಅವತಾರಗಳಿವೆ. ಶಿವ, ಪಾರ್ವತಿ, ಉಮಾಮಹೇಶ್ವರ, ನಂದಿ, ಗಣೇಶ, ಲಕ್ಷ್ಮೀ, ಸರಸ್ವತಿ, ಹಸುಗಳ ಪ್ರತಿಮೆಗಳನ್ನು ಕೆತ್ತಿರುವರು. ತೇರಿನ ದಿನಕ್ಕಿಂತ ಮೊದಲೇ ಅದನ್ನು ಸ್ವಚ್ಛಗೊಳಿಸಿ ಅದರ ಹೊರಮೈಗೆ ಪಾರದರ್ಶಕ ಎಣ್ಣೆಯನ್ನು ಲೇಪಿಸುತ್ತಾರೆ. ನಂತರ ಕಟ್ಟುತ್ತಾರೆ. ಒಟ್ಟಾರೆ ತೇರಿನ ದಿನ ಅಡಿಯಿಂದ ಮುಡಿಯವರೆಗೂ ವಧುವಿನಂತೆ ಸಿಂಗರ ಮಾಡಿರುತ್ತಾರೆ.

ತೇರಿನ ದಿನ ಪೂರ್ವಾಹ್ನ ಸ್ವಾಮಿಗೆ ವಿಶೇಷ ಅಭಿಷೇಕ ಮತ್ತು ಪೂಜೆಗಳನ್ನು ಮಾಡುವರು. ನಂತರ ಜಮಾಪುರದಿಂದ ತಂದ ಎಡೆಯನ್ನು ಸ್ವಾಮಿಗೆ ಅರ್ಪಿಸುವರು. ಇದು ಬಹು ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯ. ಅಪರಾಹ್ನದ ವೇಳೆಗೆ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕಿಯಲ್ಲಿ ಅಳ್ಳಳ್ಳಿ ಬಸವ ದೇಗುಲದ ಬಳಿಗೆ ತಂದು ಪೂಜಿಸಿ, ಪುನಃ ಅಲಂಕೃತ ತೇರಿನ ಬಳಿಗೆ ಹೊತ್ತೊಯ್ಯುವರು. ದೇವರ ಉತ್ಸವ ಮೂರ್ತಿಯನ್ನು ತೇರಿನಲ್ಲಿ ಕೂರಿಸಿದ ತಕ್ಷಣ ಪೂಜೆ ಪ್ರಾರಂಭಿಸುವರು ದೇವಾಲಯದ ಅರ್ಚಕರು ಮತ್ತು ಗ್ರಾಮದ ಜೋಗಳ್ಳಿಯವರ ವಂಶದವರಿಂದ ಎಡೆತಂದು ತೇರಿಗೆ ಹಾಕುವರು. ಈ ಎಡೆಗಳನ್ನು 'ಧೂಳೆಡೆ' ಮತ್ತು 'ಗಾಲಿ ಎಡೆ' ಎಂದು ಕರೆಯುವುದು ಸಂಪ್ರದಾಯ. ತೇರಿಗೆ ಮೊದಲ ಪೂಜೆಯನ್ನು ಹುಚ್ಚಪ್ಪಜ್ಜನ ವಂಶಜರು ಸಲ್ಲಿಸುವರು. ಸ್ಥಳೀಯರ ಅಭಿಪ್ರಾಯದಂತೆ ಹುಚ್ಚಜ್ಜಪ್ಪನಿಗೆ ಕಲ್ಲೇಶ್ವರನಲ್ಲಿ ಅನನ್ಯ ಭಕ್ತಿ. ಇವನ ಅನನ್ಯ ಭಕ್ತಿಯ ಪ್ರತೀಕವಾಗಿ ಇಂದಿಗೂ ಈತನ ಗದ್ದುಗೆ ತೇರು ಹರಿಯುವ ಬಯಲಿನಲ್ಲಿದೆ. ಪೂಜೆಯ ನಂತರ ಈ ಎಡೆಗಳನ್ನು ಆಯಗಾರರು ಹಂಚಿಕೊಳ್ಳುವರು. ನಂತರ ಮೂಲಾ ನಕ್ಷತ್ರ ಬಂದ ತಕ್ಷಣವೇ ಅಸಂಖ್ಯಾತ ಭಕ್ತರ ಸಮ್ಮುಖದಲ್ಲಿ ತೇರನ್ನು ಎಳೆಯುವರು. ಇದೇ ದಿನ ಇದೇ ನಕ್ಷತ್ರದಲ್ಲಿ ಚಿಗಟೇರಿ (ಹರಪ್ಪನಹಳ್ಳಿ ತಾಲೂಕು) ನಾರದ ಮುನಿಯ ಜಾತ್ರೆಯೂ ನಡೆಯುವುದು ವಿಶೇಷ, ಈ ಹಿನ್ನೆಲೆಯಲ್ಲಿ ಜನಪದರು ಈ ಎರಡು ದೈವಗಳನ್ನು ಸಹೋದರರೆಂದು ಸಂಬೋಧಿಸುತ್ತಾರೆ. ಕಲ್ಲೇಶ್ವರ ಸ್ವಾಮಿಯ ತೇರು ಮುಂದೆ ಮುಂದೆ ಸಾಗುತ್ತಿದಂತೆಯೇ ತೇರನ್ನೆಳೆಯಲು ನಾಮುಂದು, ತಾಮುಂದು ಎಂದು ನೂಕುನುಗ್ಗಲು ಆರಂಭವಾಗುತ್ತದೆ. ನೂಕಾಟದಲ್ಲಿ ಮಧ್ಯದಲ್ಲಿ ತೇರು ನಿಧನಗತಿಯಲ್ಲಿಯೇ ಇರುತ್ತದೆ. ತೇರಿನತ್ತ ಮಂಡಕ್ಕಿ ಮೇಣಸು, ಬಾಳೆಹಣ್ಣುಗಳನ್ನು ಎಸೆಯುತ್ತಾರೆ. ತೇರು ಹುಚ್ಚಜ್ಜಪ್ಪನ ಗದ್ದುಗೆಯವರೆಗೂ ಸಾಗುವುದು. ಅಲ್ಲಿ ಮತ್ತು ಗುಗ್ಗರಿ ಬಸವಣ್ಣನ ದೇಗುಲ ಅರ್ಚಕರು ಪೂಜಿಸಿ ಪುನಃ ತೇರನ್ನೇರುವರು. ಅಲ್ಲಿಂದ ತೇರು ವಾಪಾಸು ಹರಿದು ತನ್ನ ಮೂಲ ಸ್ಥಾನಕ್ಕೆ ಬಂದು ನಿಲ್ಲುವುದು. ಒಟ್ಟಾರೆಯಾಗಿ ಹೇಳುವುದಾದರೆ ರಥೋತ್ಸವ ನಿಜವಾಗಿಯೂ ಆನಂದಕರ ದೃಶ್ಯ. ತೇರಿನಿಂದ ಇಳಿಸಿದ ಕಲ್ಲೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು

ಗ್ರಾಮದಲ್ಲಿ ಮೆರವಣಿಗೆ ಮಾಡುತ್ತಾ ಅಲಂಕಾರಿಸಿದ ಉಯ್ಯಾಲೆಯಲ್ಲಿ ಕೂರಿಸುವರು. ಪುತ್ರ ಸಂತಾನವಿಲ್ಲದ ಸ್ತ್ರೀಯರು ಉಯ್ಯೂಲೆಯನ್ನು ಪೂಜಿಸಿ ಮೂರು ಬಾರಿ ಭಕ್ತಿಯಿಂದ ಪ್ರದಕ್ಷಣೆ ಹಾಕಿದರೆ ಅವರಿಗೆ ಪುತ್ರಸಂತಾನ ಭಾಗ್ಯ ದೊರೆಯುತ್ತದೆಂಬುದು ಅಲ್ಲಿನ ಜನರ ನಂಬಿಕೆಯಾಗಿದೆ. ಅಂದು ರಾತ್ರಿ ದೇವರನ್ನು ಸ್ತುತಿಸುತ್ತ ಕೋಲಾಟ ಆಡುವರು.

ಆರನೆಯ ದಿನದ ವಿಶೇಷತೆ ಅಡ್ಡಪಲ್ಲಕ್ಕಿ ಉತ್ಸವ. ಅಡ್ಡಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡುವುದೇ ಇದರ ವಿಶೇಷತೆ. ಅಡ್ಡಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನಿರಿಸಿ ಗ್ರಾಮದಲ್ಲಿ ಮೆರವಣಿಗೆ ಮಾಡುತ್ತಾ ತೇರಿನ ಬಳಿಗೆ ಬಂದು, ತೇರನ್ನು ಪೂಜಿಸಿ, ಪುನಃ ದೇವಾಲಯಕ್ಕೆ ಉತ್ಸವ ಮೂರ್ತಿಯನ್ನು ಕರೆದುಕೊಂಡು ಹೋಗುವರು. ಅಂದು ಒಕುಳಿ ಆಡಿದ ನಂತರದಲ್ಲಿ ಜಿನಗಿಹಳ್ಳಕ್ಕೆ ಗಂಗಾ ಪೂಜೆಗೆ ಉತ್ಸವ ಮೂರ್ತಿಯನ್ನು ಹೊತ್ತೊಯ್ಯುವುದು ವಾಡಿಕೆ. ಅಲ್ಲಿಂದ ಬಂದ ಸ್ವಾಮಿಯನ್ನು ಪುನಃ ತೂಗುಯ್ಯಾಲೆಯಲ್ಲಿ ಕೂರಿಸುವರು. ಇದರ ನಂತರ ಉತ್ಸವ ಮೂರ್ತಿಯನ್ನು ಪೂಜಿಸಿ ಸ್ವಾಮಿಯ ಮೂಲಸ್ಥಾನಕ್ಕೆ. ದೇಗುಲಕ್ಕೆ ಕಲ್ಲೇಶ್ವರ ಸ್ವಾಮಿಯನ್ನು ತಂದು ಕೂರಿಸುವುದರ ಮೂಲಕ ಅತ್ಯಂತ ವಿಜೃಂಭಣೆಯಿಂದ ಜಾತ್ರೆಗೆ ಮುಕ್ತಾಯ ಹೇಳುವರು. ಇದರ ನಂತರದಲ್ಲಿ ದನಗಳ ಜಾತ್ರೆ ಕಲ್ಲೇದೇವರಪುರದಲ್ಲಿ ಹದಿನೈದು ದಿನಗಳ ಕಾಲ ನಡೆಯುತ್ತದೆ. ಕರ್ನಾಟಕದ ವಿವಿಧ ಸ್ಥಳಗಳಿಂದಲ್ಲದೇ ಇತರ ರಾಜ್ಯಗಳಿಂದ ಬಂದ ವ್ಯಾಪಾರಿಗಳು ದನಗಳ ವ್ಯಾಪಾರ ಮಾಡಲು ಮುಂದಾಗುತ್ತಾರೆ. ಇಲ್ಲಿ ಕೊಡುಕೊಳ್ಳುವಿಕೆಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಉತ್ತಮ ಜಾತಿಯ ಎತ್ತುಗಳಿಗೆ ಬಹುಮಾನಗಳನ್ನು ಕೊಡುವರು. ಈ ಮೂಲಕವಾಗಿ ಈ ಜಾತ್ರೆಯು ಧಾರ್ಮಿಕತೆಯ ಹಿನ್ನೆಲೆಯಿಂದ ಹಾಗೂ ವಾಣಿಜ್ಯ ಕೇಂದ್ರವಾಗಿಯೂ ಮತ್ತು ಕೊಡುಕೊಳ್ಳುವಿಕೆಯ ಸಂಕೇತಿಕವಾಗಿ ಕಲ್ಲೇದೇವರಪುರ ಜಾತ್ರೆಯು ಐತಿಹಾಸಿಕವಾಗಿಯೂ ಗುರುತಿಸಿಕೊಂಡಿದೆ ಎಂದು ಹೇಳಬಹುದು.

ಕಲ್ಲೇದೇವರಪುರದ ಜಾತ್ರೆ ಸಂದರ್ಭದ ಕಲೆ ಪ್ರದರ್ಶನ

ಕಲ್ಲೇದೇವರಪುರದಲ್ಲಿ ಯಕ್ಷಗಾನ ನಾಟಕದಲ್ಲಿ ಮುಖವರ್ಣಿಕೆಗಾಗಿ ಬಳಸುವ ವಸ್ತುಗಳು ನೈಸರ್ಗಿಕವಾದವುಗಳಾಗಿದ್ದ ಅವು ಹೀಗಿರುತ್ತವೆ.

೧. ಅರದಾಳ, (ಅರಿಷಿನ ಬಣ್ಣದ ಹರಳು)

೨. ಇಂಗಳೀಕ (ಕೆಂಪುಪುಡಿ)

೩. ಎಣ್ಣೆಮಸಿ (ಎಳ್ಳೆಣ್ಣೆಯ ಕಾಡಿಗೆ)

೪. ಪಚ್ಚೆ, ಕುಂಕುಮ ಬಿಳಿಬಣ್ಣಗಳು.

೫. ಅಕ್ಕಿಯ ಹಿಟ್ಟು

೬. ಸುಣ್ಣ

೭. ಹತ್ತಿ (ಅರಳೆ)

೮. ತೆಂಗಿನಮರದ ಗರಿಯಕಡ್ಡಿ

೯. ಅಂಟಿಸುವ ಬೋನವನ್ನು ತಯಾರಿಸುವ ಅನ್ನ

೧೦. ವಿಭೂತಿ ಮತ್ತು ಮುಂತಾದ ವಸ್ತುಗಳನ್ನು ಬಳಸಿಕೊಂಡು ಯಕ್ಷಗಾನದ ಪಾತ್ರಧಾರಿಗಳಿಗೆ ಮುಖವರ್ಣಿಕೆ ಮಾಡಲಾಗುತ್ತದೆ.

ರಂಗಪ್ರವೇಶಿಸುವುದಕ್ಕಿಂತ ಪೂರ್ವದಲ್ಲಿ ಚೌಕಿಯಲ್ಲಿ ಬಣ್ಣ ಬಳದಿಕೊಳ್ಳಲು ದೀಪದ ಕೆಂಪು ಹುಡಿಗಳನ್ನು ವಿಶೇಷವಾಗಿ ಬಳಸುತ್ತಾರೆ. ಗಡ್ಡಮೀಸೆ ಮತ್ತು ಕೇಶಭಾರಣಗಳನ್ನು ಕೂದಲಿನಿಂದ ಮಾಡುತ್ತಾರೆ. ಆಭರಣಗಳಿಗೆ ಬಣ್ಣದ ಬೇಗಡಿ ಅಂಟಿಸುತ್ತಾರೆ. ಆಯಾ ಪಾತ್ರದವರೇ ಹೆಚ್ಚಾಗಿ ತಮ್ಮ ಮುಖವರ್ಣಿಕೆ ಮಾಡಿಕೊಳ್ಳವವರು. ಈ ರೀತಿಯಾಗಿ ಕಲ್ಲೇದೇವರಪುರದ ಯಕ್ಷಗಾನದಲ್ಲಿ ಕಂಡಬರುವ ಕಲೆಯಾಗಿದೆ. ಅದೇರೀತಿ ಹಿಂದೆ ಇಂತಹ ಬಣ್ಣಗಳನ್ನು ನೀರಿನಲ್ಲಿ ಕಲಿಸುತ್ತಿದ್ದರಂತೆ, ಈಗ ಎಣ್ಣೆಯಲ್ಲಿ ಕಲಿಸಿಕೊಳ್ಳುತ್ತಾರೆ. ಯಕ್ಷಗಾನದ ಸ್ತ್ರೀ ಪುರಷ ಪಾತ್ರದಾರಿಗಳ ಮುಖ್ಯ ವರ್ಣಗಾರಿಕೆ, ಗೌರವರ್ಣ, ಇದಕ್ಕೆ 'ಚಾಯ' ಎನ್ನುತ್ತಾರೆ. ಹಳದಿ ಮತ್ತು ಕೆಂಪು ಮಿಶ್ರಣದ ವರ್ಣವಿದಾಗಿದೆ. ಈ ಗೌರವರ್ಣವನ್ನು ಬಳಿದ ಬಳಿಕ, ಹಲವಾರು ಬಗೆಯ

ಅಲಂಕಾರ ವಿನ್ಯಾಸ ಮಾಡುತ್ತಾರೆ. ಅವು ಈ ರೀತಿ ಇರುತ್ತವೆ,

೧. ನಾಮ

೨. ಚಿಹ್ನೆ

೩. ಮುದ್ರೆ

೪. ಗೀರು

೫. ಗೀರುಗಂಧ

೬. ಮುತ್ತರಿ

೭. ವರ್ಣಛಾಯ

೮. ಚುಟ್ಟಿ

೯. ಸುಳಿ

೧೦. ಅಂಟಿಸುವ ಹತ್ತಿಯ ಗೊಂಡೆ ಇತ್ಯಾದಿಯಾಗಿವೆ.

ಬಣ್ಣದ ವೇಷ : ವೇಷಗಳಲ್ಲಿ ಮುಖವರ್ಣಿಕೆ ಚುಚ್ಚಿಯ ರಚನಾ ವಿನ್ಯಾಸಗಳು ಪ್ರತಿಯೊಂದು ಪಾತ್ರಕ್ಕೂ ಬಿನ್ನವಾಗಿರುತ್ತವೆ ಮತ್ತು ಬಣ್ಣದ ವೇಷಗಳಲ್ಲಿ ಗಂಡುಬಣ್ಣ ಮತ್ತು ಹೆಣ್ಣುಬಣ್ಣವೆಂದು

ಎರಡು ಪ್ರಕಾರಗಳಿವೆ. ರಾಜಸಂಧೆ, ನರಕಾಸುರ, ರಾವಣ ತಾಟಕಿ, ಪೂತನ, ಅಜಮುಖಿ ಮುಂತಾದ ಉಗ್ರಸ್ವಭಾವದ ರಾಕ್ಷಿಸಿವೇಷಗಳಿಗೆ ಹೆಣ್ಣು ಬಣ್ಣವೆಂದು ಕರೆಯಲಾಗಿದೆ. ಗಂಡು ಬಣ್ಣದಲ್ಲಿ ಒಂದು ರಾಜಬಣ್ಣ ಒಂದಿರುತ್ತದೆ. ಇನ್ನೊಂದು ತಾಟು ಬಣ್ಣ ಕಿಮ್ಮರ ಬಕಾಸುರ ಮುಂತಾದವರವೆಂದು ಎರಡು ಪ್ರಕಾರಗಳಾಗಿರುತ್ತವೆ. ಈ ರೀತಿಯಾಗಿ ಕಲ್ಲೇದೇವರಪುರದಲ್ಲಿ ಯಕ್ಷಗಾನ ಒಂದು ಕಲೆಯಾಗಿ ಈ ರೀತಿಯಾಗಿ ಚಿತ್ರಣಗೊಂಡಿದೆ ಎಂದು ಆ ಊರಿನ ಗುರು ಹಿರಿಯರು ಹೇಳಿರವವರು.

ಗೊಂಬೆಯಾಟದ ಚಿತ್ರಕಲೆ

ಕಲ್ಲೇದೇವರಪುರದಲ್ಲಿ ಗೊಂಬೆಯಾಟವು ಒಂದು ಕಲೆಯಾಗಿ ಕಂಡಬಂದಿದ್ದನ್ನು ನಾವು ಕಾಣುತ್ತೇವೆ. ೧೧ ಸೂತ್ರದ ಗೊಂಬೆಯ ವಿಧಾನಗಳು ಪ್ರಾದೇಶಿಕವಾಗಿ ವಿಭಿನ್ನವಾಗಿ ಕಂಡುಬರುತ್ತವೆ. ಕರ್ನಾಟಕದಲ್ಲಿ ಅತ್ತಿ ಹಾಲವಾಣ ಕಡವಲ ಮರದಿಂದ ಸಿಬರುಬಾರದ ಹಗುರಾದ 'ಮರಾಲಿ' ಮರದ ಕಟ್ಟಿಗೆ ಗೊಂಬೆಗಳ ರಚನೆಯಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ ಸೂತ್ರದ ಗೊಂಬೆಗಳ ರಚನೆಯಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಸೂತ್ರದ ಗೊಂಬೆಗಳ ನಿರ್ಮಾಣ ಹಂತದಲ್ಲಿ ಕಟ್ಟಿಗೆಯ ಆಯ್ಕೆ ಬೇಕಾದ ಗಾತ್ರಕ್ಕೆ ಕಟ್ಟಿಗೆಯ ಬಿಡಿಭಾಗಗಳ ತಯಾರಿಕೆ, ಎದೆ, ತೋಳು, ಮುಂಗೈ, ಹಸ್ತ ತೊಡೆ, ಮುಂಗಾಲು, ಪಾದ, ಹೀಗೆ ಸಿದ್ಧಗೊಳಿಸಿಕೊಳ್ಳಲಾಗುವುದು. ಹೀಗೆ ಸಿದ್ದವಾದ ನಂತರ ಗೊಂಬೆಗಳಿಗೆ ಕೀಲು ಜೋಡಿಸಿಲಾಗುತ್ತದೆ. ಇದು ತುಂಬ ಮಹತ್ವದ ಹಂತವೆಂದು ಹೇಳಾಗುತ್ತದೆ. ಇಲ್ಲಿ ಕನಿಷ್ಠ ಆ ಸೂತ್ರಗಳನ್ನು ಜೋಡಿಸಲಾಗುತ್ತದೆ. ಮುಖದ ಎಡಬಲಕ್ಕೆ ಎರಡು ಒಂದು ಕೋಲಿಗೆ ಕೈಗಳಿಗೆ ಕಟ್ಟಿದ ಸೂತ್ರಗಳು ಕಾಲಿಗೆ ಕಟ್ಟಿದ ಎರಡು ಸೂತ್ರಗಳನ್ನು ಮೂರನೆಯ ಕೋಲಿಗೆ ಓೀಗೆ ಅಂಗಾಂಗಗಳ ಚಲಿಸುವಿಕೆಗೆ ಅನುಗುಣವಾಗಿ ಈ ಸೂತ್ರದ ಜೋಡಣೆ ಇನ್ನೂ ಹೆಚ್ಚಾಗಿ ಆಗುವುದು ಉಂಟು ಈ ಸೂತ್ರಗಳಿಗೆ ಕಿವಿ, ಕಪ್ಪದಾರ, ತಂತಿ, ನಾರಾಚಗಳನ್ನು ಬಳಸುತ್ತಾರೆ, ಗೊಂಬೆಗಳೇ ವರ್ಣಾಲಂಕಾರ, ವೇಷ–ಭೂಷಣಗಳ ವಿನ್ಯಾಸ ಸೂತ್ರದ ಗೊಂಬೆಯ ರಚನೆಯ ಇನ್ನೊಂದು ಮಹತ್ವದ ಹಂತವೆಂದು ಹೇಳಬಹುದು ನಯಗಳಿಸಿದ ಈ ರೀತಿಯಾಗಿ ಕಟ್ಟಿಗೆ ಬಿಡಿಭಾಗಗಳಿಗೆ ಅದರಲ್ಲೂ ಮುಖಕ್ಕೆ ಹೆಚ್ಚಿನ ಮಹತ್ವನವನ್ನು ಕೊಡಲಾಗುತ್ತದೆ. ಹರಿದಾಳ, ನೀಲಿ ಕೆಂಪು, ಬಿಳಿಬಣ್ಣದ ಜೊತೆಗೆ ಗಚ್ಚಿನ ಎಣ್ಣೆ ಅರಗು ಬಳಸಿಕೊಂಡು ಮುಖಕ್ಕೆಲ್ಲ ಹರಿದಾಳದ ಲೇಪನಮಾಡಿ ನಂತರ ಕಣ್ಣಿನ ಅಲಂಕಾರ ಮಾಡುತ್ತಾರೆ, ಬಯಲಾಟದ ಪಾತ್ರಗಳಿಗೆ ಹಚ್ಚುವಂತೆ ಇಲ್ಲಿಯೂ ವಿವಿಧ ಪಾತ್ರದ ಗೊಂಬೆಗಳಿಗೆ ಆಯಾ ಪಾತ್ರಗಳ ಸ್ವಭಾವಕ್ಕೆ ಅನುಗುಣವಾಗಿ ಬಣ್ಣಲೇಪನ ಮಾಡುತ್ತಾರೆ. ಮುಖವರ್ಣಿಕೆ ಅತ್ಯಂತ ಆಕರ್ಷಕವಾಗಿರುತ್ತದೆ. ಇಲ್ಲಿ ಚಿತ್ರಕಾರನ ಪರಿಶ್ರಮ, ಕಲ್ಪನಾಶೀಲತೆಗಳು ಎದ್ದು ಕಾಣುತ್ತವೆ, ಮುಖ, ಪಾದ, ಹಸ್ತ ಮುಂಗೈಗಳಲ್ಲಿ ಮಾತ್ರ ವರ್ಣಲೇಪನ ಮಾಡಲಾಗುತ್ತದೆ. ಗೊಂಬೆಯ ಶರೀರದ ಇನ್ನುಳಿದ ಭಾಗಗಳು ಆಯಾ ಪಾತ್ರದ ಗುಣದ ಮುಖಕ್ಕೆನುಗುಣವಾಗಿ ವೇಷ–ಭೂಷಣವನ್ನು ವಿನ್ಯಾಸಗೊಳಿಸಲಾಗುತ್ತದೆ. ಹೀಗೆ ಅಂಗಾಂಗಗಳೆಲ್ಲ ತುಂಬ ಕಲಾತ್ಮಕವಾದ

ಅಲಂಕಾರಗಳಿಂದ ಕೂಡಿರುತ್ತವೆ. ಕಲ್ಲೇದೇವರಪುರದಲ್ಲಿ ಗೊಂಬೆಯಾಟದ ಕಲೆ ಈ ರೀತಿಯಾಗಿ ಹೊಂದಿರುತ್ತದೆ ಎಂದು ಹೇಳಬಹುದು.

ಧರ್ಮ ಮೂಲ ಕಲ್ಲೇದೇವರಪುರದ ಜನರು ಕಲೆಯೂ ಎರಡೂ ರೀತಿಯಲ್ಲಿ ಕವಲೊಡೆದಿರುವುದು ಕಾಣುತ್ತದೆ. ೧. ಧಾರ್ಮಿಕ ಹಿನ್ನೆಲೆಯ ಜನರು ಕಲೆ ೨. ತಾಂತ್ರಿಕ ಹಿನ್ನೆಲೆಯ ಕಲೆ

ಧಾರ್ಮಿಕ ಹಿನ್ನೆಲೆಯ ಜನರ ಕಲೆ ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿಬಂದ ಕರ್ನಾಟದ ಜನರ ಕಲೆಯೂ ಧಾರ್ಮಿಕ ರೀತಿಯ ಮತಾಚಾರಣೆಗಳು ಬೆಳೆದಹಾಗೆಲ್ಲ ಅವುಗಳ ಜೊತೆಯಲ್ಲಿಯೇ ಜನರ ಕಲೆಗಳು ಪೋಷಿತಗೊಂಡು ಬೆಳವಣೆಗೆಯಾಗಿವೆ.

ಹಬ್ಬಹರಿದಿನಗಳಲ್ಲಿ ಚಿತ್ರಿಸುವ ಜನಪದ ಚಿತ್ರವಿನ್ಯಾಸಗಳು ಯಾವುದೇ ಹಬ್ಬ-ಹರಿದಿನಗಳಿಂದ ಆಗ ನೆಲೆಗೋಡೆಗಳು-ಸಾರಣೆಗೊಂಡು ಅಲ್ಲಿ ವಿಶೇಷವಾದ ಚಿತ್ರ ವಿನ್ಯಾಸದ ಅಲಂಕಾರಗಳು ಮೂಡಿಬರುವುದು ಸಾಮಾನ್ಯವಾದ ಒಂದು ಕ್ರಮವಾಗಿದೆ.

ದೇವರ ಉತ್ಸವ ಜಾತ್ರೆಗಳಲ್ಲಿ ಚಿತ್ರಿಸುವ ಜನರ ಚಿತ್ರ ವಿನ್ಯಾಸಗಳು, ಕಲ್ಲೇದೇವರ ಪುರದಲ್ಲಿ ದೇವತಾ ಕಾರ್ಯಗಳು ವ್ಯಕ್ತಿಗಳಿಗೆ ಸೀಮಿತವಾಗಿವೆ ಎಂದು ಹೇಳುವುದು ಜನರ ಮಾತಾಗಿದೆ.

೪.೨ ಶ್ರಾವಣ ಮಾಸದ ಆಚರಣೆಗಳು

ಶ್ರಾವಣ ಮಾಸ ನಾಡಿನ ಪಶುಸಂಗೋಪನೆ ಮತ್ತು ರೈತರ ಕುಟುಂಬಗಳಿಗೆ ಬಹು ಮಹತ್ವದ ಅವಧಿ. ಈ ಮಾಸದಲ್ಲಿ ಪ್ರತಿನಿತ್ಯ ಸ್ವಾಮಿಗೆ ಬೆಳಗಿನ ಸಮಯದಲ್ಲಿ ರುದ್ರಾಭಿಷೇಕ ಮಾಡುವರು.[೪] ನಂತರ ಆಚರಣೆ ಎಂದರೆ ಶ್ರಾವಣಮಾಸದ ಮೊದಲ ದಿನದ ಆರಂಭಿಕ ಪೂಜೆ ಸಲ್ಲಿಸುವುದು ಅರ್ಚಕರ ವಂಶಸ್ಥರ ಕಾರ್ಯವಾಗಿರುತ್ತದೆ. ಈ ಮಾಸದ ಮೂರನೆಯ ವಾರದಲ್ಲಿ ಕಲ್ಲೇಶ್ವರ ಸ್ವಾಮಿಯ ತ್ರಿಶೂಲ, ಬೆತ್ತ, ಪಾದರಕ್ಷೆಗಳೊಂದಿಗೆ ಹೊಳಿಗೆ ಪ್ರಸಾದವನ್ನು ತಗೊಂಡು ಗುಹೇಶ್ವರ ಬೆಟ್ಟದಲ್ಲಿನ ಗುಹೇಶ್ವರ ಲಿಂಗವನ್ನು ಪೂಜಿಸಿ ಬರುವ ಸಂಪ್ರದಾಯ ಜಾರಿಯಲ್ಲಿದೆ.

೪.೩ ಕಾರ್ತಿಕ ಮಾಸದ ಆಚರಣೆಗಳು

ಕಾರ್ತಿಕ ಮಾಸದಲ್ಲಿ ಕಲ್ಲೇಶ್ವರ ಸ್ವಾಮಿಗೆ ಸಲ್ಲುವ ವಿಶೇಷ ಆಚರಣೆ, ದೀಪೋತ್ಸವ, ಜರುಗುವುದು ಕಾರ್ತಿಕ ಮಾಸದ ಮೊದಲ ವಾರದಲ್ಲಿ ದೀಪಗಳನ್ನು ಬೆಳಗಿಸುವುದರ ಮೂಲಕ ಇದು ಜರುಗುವುದು. ಇದೇ ಮಾಸದ ಕೊನೆಯ ವಾರದೆಂದು ಹಿಟ್ಟಿನ ಹುಣ್ಣಿಮೆಯನ್ನು ಮಾಡುವ ಪದ್ಧತಿಯಿದೆ. ಇದೂ ಸಹ ಈ ಮಾಸದ ಹುಣ್ಣಿಮೆಯ ದಿನದಂದೇ ನಡೆಯುತ್ತದೆ. ಈ ಆಚರಣೆಗೆ ಸಂಬಂಧಿಸಿದಂತೆ ಜನಪದರಲ್ಲಿ ಪ್ರಚಲಿತದಲ್ಲಿರುವ ಐತಿಹ್ಯ ಈ ರೀತಿಯದು. ಬಹು ಹಿಂದೆ ಕಾರ್ತಿಕ ಮಾಸದಲ್ಲಿ ಗ್ರಾಮದ ಹೂವಿನ ಮಲ್ಲವ್ವ ಮತ್ತು ಹಿಟ್ಟಿನ ಮಲ್ಲವ್ವ ಎಂಬ

ಸಹೋದರಿಯರು ಸ್ವಾಮಿಯ ನೈವೇದ್ಯಕ್ಕೆ ಮೀಸಲಿಟ್ಟಿದ್ದ ಹಿಟ್ಟನ್ನು ಸೇವಿಸಿದರಿಂದ ಅವರು ಕಲ್ಲಾದರು ಎಂಬುದೇ ಈ ಐತಿಹ್ಯ. ಇದರ ನೆನಪಿಗಾಗಿ ಇಂದಿಗೂ ಜನತೆ ಭಯಭಕ್ತಿಯಿಂದ ಹುಣ್ಣಿಮೆಯೆಂದು ಹೊಸ ನವಣೆ ಅಕ್ಕಿಯನ್ನು ಕುಟ್ಟಿ ಹಿಟ್ಟು ತಯಾರಿಸುವರು. ನಂತರ ಅದನ್ನು ಪ್ರಸಾದವಾಗಿ ಭಕ್ತ ಸಮೂಹಕ್ಕೆ ಹಂಚುತ್ತಾರೆ. ಹಾಗಾಗಿಯೇ ಇದು ಹಿಟ್ಟಿನ ಹುಣ್ಣಿಮೆಯೆಂದು ಪ್ರಸಿದ್ಧಿ ಪಡೆದಿದೆ.[೫]

ಯುಗಾದಿ ಹಬ್ಬ

ಯುಗಾದಿ ಶಾಲಿವಾಹನ ಶಕದ ಎಣಿಕೆ ಆರಂಭವಾಗುವ ಚೈತ್ರಮಾಸ ತಿಂಗಳಿನ ಪ್ರಥಮ ದಿನ. ಈ ಹಬ್ಬದ ಹಿಂದಿನ ದಿನ ನೀರು ತುಂಬುವ ಪಾತ್ರೆಗಳ ಮೇಲೆ ಸುಣ್ಣ ಬಣ್ಣಗಳಿಂದ ಸಿಂಗಾರ ಮಾಡಿ ನೀರು ತುಂಬಿ ಬೇವಿನ ಸೊಪ್ಪನ್ನು ಹಾಕುವರು. ಹಬ್ಬದ ದಿನ ಮನೆಯವರೆಲ್ಲರೂ ತೈಲಾಭ್ಯಂಜನ ಮಾಡುವರು. ಬೇವಿನ ತಪ್ಪಲಿನ ಸತ್ವದಿಂದ ಕೂಡಿದ ನೀರು ಚರ್ಮರೋಗವನ್ನು ದೂರ ಮಾಡುತ್ತದೆಂದು ಹೇಳುತ್ತಾರೆ. ಮನೆಯ ಬಾಗಿಲುಗಳಿಗೆ ತಳಿರು ತೋರಣಗಳನ್ನು ಕಟ್ಟಿ ಮನೆಯ ಮುಂಭಾಗವನ್ನು ರಂಗೋಲಿಯಿಂದ ಅಲಂಕರಿಸುತ್ತಾರೆ. ಇಡೀ ವರ್ಷದ ಶುಭ ದಿನಗಳಲ್ಲಿ ಇದು ಅತ್ಯುತ್ತಮ ದಿನವೆಂದು ಭಾವಿಸಿ ಭಕ್ತಿಪೂರ್ವಕವಾಗಿ ಮನೆಯಲ್ಲಿ ದೇವರನ್ನು ಪೂಜಿಸುವುದಲ್ಲದೇ ಸಂಜೆ ದೇವಸ್ಥಾನಗಳಿಗೆ ಹೋಗಿ ಬರುವ ಸಂಪ್ರದಾಯವೂ ಇದೆ. ಯುಗಾದಿ ದಿವಸ ಮನೆಯಲ್ಲಿ ಬೇವು, ಬೆಲ್ಲವನ್ನು ಸ್ವೀಕರಿಸಿ ವಿಶೇಷ ಭಕ್ಷ್ಯ ಭೋಜ್ಯಗಳಿಂದ ಕೂಡಿದ ಭೋಜನವನ್ನು ಮಾಡುತ್ತಾರೆ. ಈ ರೀತಿಯಾಗಿ ಕಲ್ಲೇದೇವರಪುರದಲ್ಲಿ ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

ಗೌರಿ ಹುಣ್ಣಿಮೆ

ಇದು ಹೆಂಗಸರ ಹಬ್ಬವಾಗಿದೆ. ೫ ದಿನಗಳವರೆಗೆ ಆರತಿ ಮಾಡುತ್ತಾರೆ. ಐದನೇ ದಿನ ಸಕ್ಕರೆ ಆರತಿ ತಂದು ಬೆಳಗುತ್ತಾರೆ. ಗೌರಿ ಪೂಜೆಯಲ್ಲಿ ಹಾಡುವ ಹಾಡುಗಳು ಅತ್ಯಂತ ಹೇರಳವಾಗಿ ಸಿಗುತ್ತವೆ. ಎಲ್ಲ ವರ್ಗದ ಮಹಿಳೆಯರು ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ಕೊನೆಯ ದಿನ ಬರುವಾಗ ಒಂದು ಸಕ್ಕರೆ ಆರತಿಯನ್ನು ಮನೆಯಲ್ಲಿ ಇಟ್ಟು ಬರುತ್ತಾರೆ. ಮದುವೆ ಗೊತ್ತಾದವರು ಹುಡಿಗಿಯ ಮನೆಗೆ ಬಂದು ಸಕ್ಕರೆ ಆರತಿ ಕೊಟ್ಟು ಆರತಿ ಮಾಡಿ ಹೋಗುವ ಸಂಪ್ರದಾಯವನ್ನು ಈ ಪರಿಸರದಲ್ಲಿ ಕಂಡುಬರುತ್ತದೆ.

ಬಸವ ಜಯಂತಿ

ವೈಸಾಖ ಶುದ್ಧ ತೃತೀಯವನ್ನು ಅಕ್ಷಯ ತೃತೀಯವೆಂದು ಕರೆಯುತ್ತಾರೆ. ಈ ದಿನವನ್ನು ಸಮಸ್ತ ಸಂವತ್ಸರದ ದಿನಗಳಲ್ಲಿ ಅತೀವ ಭಾಗ್ಯದಾಯಕ ದಿನವೆಂದು ಇಲ್ಲಿನ ಸ್ಥಳೀಯರ ಅಭಿಪ್ರಾಯ ಹಾಗೂ ನಂಬಿಕೆಯಾಗಿದೆ. ಈ ದಿನವೇ ಭಕ್ತಿ ಭಂಡಾರಿ ಬಸವಣ್ಣನವರ ಜನ್ಮದಿನ. ಈ ಹಬ್ಬವನ್ನು ಭಕ್ತಿಪೂರ್ವಕವಾಗಿ ವೈಭವದಿಂದ ಬಸವ ಜಯಂತಿ ಎಂದು ಆಚರಿಸುತ್ತಾರೆ.

ಇಲ್ಲಿರುವ ವೀರಶೈವ ಗುಂಪಿನವರು ಈ ಹಬ್ಬವನ್ನು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅತ್ಯಂತ ವೈಭವದಿಂದ ಆಚರಿಸುತ್ತಾರೆ. ಈ ದಿನ ರೈತರು ತಮ್ಮ ಎತ್ತುಗಳನ್ನು ಸಿಂಗರಿಸಿ ಸಕಲ ವಾದ್ಯಗಳ ಸಮೇತ ಮೆರವಣಿಗೆಯನ್ನು ಮಾಡುತ್ತಾರೆ. ಈ ಪರಿಸರದ ಅನೇಕರು ತಮ್ಮ ಹೊಸ ಕಾರ್ಯಗಳನ್ನು ಈ ದಿನವೇ ಆರಂಭಿಸುವ ರೂಢಿ ಇದೆ. ಇದರ ಜೊತೆಗೆ ಈ ದಿನವೇ ಮರಾಠ ಛತ್ರಪತಿ ಶಿವಾಜಿಯ ಜನ್ಮದಿನವನ್ನು ಆಚರಿಸುವರು. ಅಂದು ಎಲ್ಲರೂ ಸೇರಿ ಮೆರವಣಿಗೆಯನ್ನು ಮಾಡುವರು.

ಕಾರಹುಣ್ಣಿಮೆ

ಜೇಷ್ಠ ಮಾಸದ ಹುಣ್ಣಿಮೆಯನ್ನು ಕಾರಹುಣ್ಣಿಮೆ ಎಂದು ಕರೆಯುತ್ತಾರೆ. ಕೃಷಿಕರು ಇದನ್ನು ಮಳೆಗಾಲದ ಆರಂಭವೆಂದು ತಮ್ಮ ಊರುಗಳನ್ನು ಸಿಂಗರಿಸುತ್ತಾರೆ. ಎತ್ತುಗಳ ಕೋಡುಗಳಿಗೆ ಬಣ್ಣ ಹಚ್ಚಿ, ಕೋಡೆಣುಸುಗಳನ್ನು ತೊಡಿಸಿ, ಕೋಡು ಬಳೆಗಳನ್ನು ಹಾಕಿ, ಕೊರಳಿಗೆ ಗೆಜ್ಜೆ ಸರವನ್ನು ಕಟ್ಟಿ, ಮೈ ಮೇಲೆ ಅಲ್ಲಲ್ಲಿ ಉರಿಮಂಜಿನ ಬಣ್ಣ ಹಚ್ಚಿ ಅಲಂಕಾರಗೊಳಿಸಿ, ಎತ್ತುಗಳನ್ನು ಮೆರವಣಿಗೆ ಹೊರಡಿಸಿ, ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುತ್ತಾರೆ.

ದೀಪಾವಳಿ

ದೀಪಾವಳಿ ಎಂದರೆ ಮನೆಮನೆಯಲ್ಲಿ ಬೆಳಕನ್ನು ಚೆಲ್ಲುವ ಹಬ್ಬ, ಹಿಂದೂಗಳ ಪ್ರಕಾರ ಎಲ್ಲರೂ ಈ ಹಬ್ಬವನ್ನು ಆಚರಿಸುತ್ತಾರೆ. ಹಸುವಿನ ಸಗಣಿಯ ಉಂಡೆಗಳನ್ನು ಮಾಡಿ ಪಾಂಡವರೆಂದು ಪೂಜಿಸುವ ವಾಡಿಕೆಯಿದೆ. ಇದು ಹಿಂಗಾರು ಬೆಳೆಯ ಸಡಗರ ಹಬ್ಬವೆನಿಸಿದೆ. ಪಾಲ್ಗುಣ ಮಾಸದ ಹುಣ್ಣಿಮೆಯ ದಿನ ಹೋಳಿ ಅಥವಾ ಕಾಮನ ಹಬ್ಬವನ್ನು ಆಚರಿಸುತ್ತಾರೆ. ಆ ದಿನ ಎಲ್ಲರೂ ಬಣ್ಣದ ಓಕುಳಿ ಆಡುವರು.

ಮಕರ ಸಂಕ್ರಾಂತಿ

'ಮಕರ ಸಂಕ್ರಮಣ' ಹಬ್ಬವೇ ಹಿಂದಿನಿಂದಲೂ ಪ್ರಾಧಾನ್ಯತೆಯಿಂದ ನಡೆದುಬಂದಿದೆ. ಈ ಹಬ್ಬವು ಜನವರಿ ತಿಂಗಳಿನಲ್ಲಿ ಆರಂಭವಾಗುತ್ತದೆ. ಹಬ್ಬದ ದಿನದಂದು ಸೂರ್ಯನು ಮಕರ ರಾಶಿಗೆ ಪ್ರವೇಶಿಸಿ ದಕ್ಷಿಣದಿಂದ ಉತ್ತರಾಭಿಮುಖವಾಗಿ ಆರು ತಿಂಗಳಿನವರೆಗೆ ತಿರುಗುತ್ತಾನೆ. ಈ ಒಂದು ದಿನವನ್ನು 'ಮಕರ ಸಂಕ್ರಾಂತಿ' ಎಂದು ಕರೆಯುವರು. ಈ ಹಬ್ಬದಂದು ಎಳ್ಳು-ಬೆಲ್ಲ ಹಂಚುವರು. 'ಭೋಗಿ', ಸಂಕ್ರಮಣ ಮತ್ತು ಕನುಹಬ್ಬ ಎಂದು ಮೂರು ದಿನಗಳವರೆಗೆ ಈ ಹಬ್ಬವನ್ನು ಆಚರಣೆ ಮಾಡುತ್ತಾರೆ. ಈ ವೇಳೆಗೆ ಬೇರೆ ಬೇರೆ ತರಹದ ಬೆಳೆಗಳನ್ನು ಬೆಳೆಯುತ್ತಾರೆ. ಈ ದಿನದಂದು ಮನೆಯಲ್ಲಿನ ಮಕ್ಕಳಿಗೆ ದೋಸೆಯನ್ನು ಮಾಡಿ ಮುಖದ ಮೇಲೆ ಇಳೆತೆಗೆಯುತ್ತಾರೆ. ಅಂದಿನ ದಿನದಂದು ಎಲ್ಲರೂ ಹೊಸ ಬಟ್ಟೆಯನ್ನು ಧರಿಸಿಕೊಂಡು ರಾತ್ರಿಯ ವೇಳೆಯಲ್ಲಿ ಎಳ್ಳು, ಬೆಲ್ಲವನ್ನು ಕೊಟ್ಟು 'ಎಳ್ಳು ಬೆಲ್ಲ ತಿಂದು ಒಳ್ಳೆಯವರಾಗಿ

ಇರೋಣ' ಎಂದು ಶುಭವನ್ನು ಕೋರುವರು. ಹೀಗೆ ಈ ಪರಿಸರದಲ್ಲಿ ಈ ಹಬ್ಬವು ವಿಶೇಷತೆಯನ್ನು ಪಡೆದುಕೊಂಡಿದೆ.

ಗಣೇಶ ಹಬ್ಬ

ಭಾರತದ ಉದ್ದಗಲಕ್ಕೂ ವಿಶೇಷವಾಗಿ ಆಚರಿಸಲ್ಪಡುವ ಹಬ್ಬದಲ್ಲಿ ಗಣೇಶನ ಆರಾಧನೆಯು ಒಂದು. ಭಾರತೀಯ ಸಾಂಸ್ಕೃತಿಕ ಪರಂಪರೆ ಮತ್ತು ಒಗ್ಗಟ್ಟನ್ನು ಪ್ರತಿಬಿಂಬಿಸುವ ಹಬ್ಬವಾಗಿ ಆಚರಿಸಲ್ಪಡುವ ಈ ಹಬ್ಬಕ್ಕೆ ಜಾತಿ, ಮತ, ಪಂಥದ ವ್ಯತ್ಯಾಸವಿಲ್ಲ. ಈ ಹಬ್ಬವನ್ನು ಹಿಂದೂಗಳು ತುಂಬಾ ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ. ತಮ್ಮ ಸ್ಥಿತಿ-ಗತಿಗಳಿಗೆ ತಕ್ಕಂತೆ ಗಣೇಶನನ್ನು ಐದು ದಿನ, ಒಂಭತ್ತು ದಿನ ಮತ್ತು ಒಂದು ತಿಂಗಳಿನವರೆಗೆ ಅಂದರೆ ಗಣೇಶನ ಪ್ರತಿಷ್ಠಾಪನೆಯ ದಿನದಿಂದ ಹಿಡಿದು ಮಹಾನವಮಿ ಅಮವಾಸ್ಯೆಯವರೆಗೆ ಇಟ್ಟು ಪೂಜಿಸಿ ನಂತರ ವಿಸರ್ಜನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವರು. ಈ ಹಬ್ಬದ ವಿಶೇಷವಾದ ಸಿಹಿ ಅಡುಗೆ ಪದಾರ್ಥವೆಂದರೆ ಕಡಬು, ಗೋದಿಯ ಹುಗ್ಗಿ ಮತ್ತು ಗಣಪತಿಯ ಪೂಜೆಗಾಗಿ ಮೋದಕವನ್ನು ಮಾಡುವ ಪದ್ಧತಿ ಇದೆ. ಈ ಹಬ್ಬದಲ್ಲಿ ಪಟಾಕಿ, ಸಿಡಿಮದ್ದುಗಳನ್ನು ಸಿಡಿಸುವುದರ ಮೂಲಕ ತಮ್ಮ ಆನಂದವನ್ನು ವ್ಯಕ್ತಪಡಿಸುತ್ತಾರೆ. ಗಣಪತಿಯನ್ನು ವಿಸರ್ಜನಾ ಕಾರ್ಯಕ್ರಮದಲ್ಲಿ ಮೆರವಣಿಗೆ ಮಾಡಿ, ಯುವಕರು ಕುಣಿಯುತ್ತಾ ಬಾವಿಯಲ್ಲಿ ವಿಸರ್ಜನೆ ಮಾಡುವ ಮೂಲಕ ಈ ಹಬ್ಬವನ್ನು ಮುಕ್ತಾಯಗೊಳಿಸುವರು.

ಹೀಗೆ ಕಲ್ಲೇದೇವರಪುರದಲ್ಲಿ ಹಬ್ಬ-ಹರಿದಿನಗಳು ಹಿಂದಿನ ಕಾಲದಿಂದಲೂ ಇಂದಿನ ಕಾಲದವರೆಗೂ ಸಾಂಪ್ರದಾಯಿಕವಾಗಿ ನಡೆದು ಬಂದಿರುವುದನ್ನು ನಾವು ಕಾಣಬಹುದಾಗಿದೆ.

೪.೪ ಹಿಟ್ಟಿನ ಹುಣ್ಣಿಮೆಯ ವಿಶೇಷ

ಪ್ರತಿವರ್ಷ ಕಾರ್ತಿಕ ಮಾಸದ ಕೊನೆಯಲ್ಲಿ ಹುಣ್ಣಿಮೆಯ ದಿನದಂದು ಹಿಟ್ಟಿನ ಹುಣ್ಣಿಮೆ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದ ವಿಶೇಷತೆ ಎಂದರೆ ಶ್ರೀಕಲ್ಲೆಶ್ವರನಿಗೆ ಹಿಟ್ಟಿನ ಮಲ್ಲಮ್ಮ ಮತ್ತು ಹೂವಿನ ಕಮಲ್ಲಮ್ಮ ಎಂದು ತಂಗಿಯರಿದ್ದರು. ಅವರಲ್ಲಿ ಕಲ್ಲೇಶ್ವರನು ತನ್ನ ತಂಗಿ ಹಿಟ್ಟಿನ ಮಲ್ಲಮ್ಮನ ಮೇಲೆ ಕೋಪಗೊಂಡು ತನ್ನ ಗುಡಿಯಿಂದ ಹೊರಗೆ ಕಳುಹಿಸಿದನು. ಆದ್ದರಿಂದ ಶ್ರೀವೀರಭದ್ರೇಶ್ವರನು ತನ್ನ ಗುಡಿಯಲ್ಲಿ ತಂಗಿಗೆ ಆಶ್ರಯ ನೀಡಿದನು. ಆದ್ದರಿಂದ ಹಿಟ್ಟಿನ ಮಲ್ಲಮ್ಮನನ್ನು ವೀರಭದ್ರಗುಡಿಯಲ್ಲಿ ಕೂರಿಸಿದ್ದಾರೆ. ಹಬ್ಬಕ್ಕೆ ಮೂರು ದಿನಗಳಿದ್ದ ಹಾಗೆ ನಾಡಿಗರ ಮನೆಯ ಮುತ್ತೈದೆಯರು ಒಂದತ್ತು ಇರುತ್ತಾರೆ. ಈ ಹಬ್ಬದಲ್ಲಿ ಪೂಜಾರು ಮನೆಯ ಮುತ್ತೈದೆಯರು ಒಂದತ್ತು ಇರುವಂತಿಲ್ಲ, ಹಬ್ಬದ ದಿನದಂದು ಮೂರು ಜನ ದೇವರನ್ನು ಹೊತ್ತುಕೊಳ್ಳುತ್ತಾರೆ. ಅವರನ್ನು "ಹಲಿಗೆ ಧರಿಸುತ್ತಾರೆ" ಎನ್ನುವರು. ಮುತ್ತೈದೆಯರು ನಡೆ-ಮುಡಿಯ ಮೇಲೆ ಹಿಟ್ಟಿನ ಮಲಮ್ಮನನ್ನು ಹೊತ್ತು ನಿಂತಿರುತ್ತಾರೆ. ಅವರ ಮುಂದೆ "ಹಲಿಗೆ ಧರಿಸಿರುವವರು ಮತ್ತು ವೀರಗಾಸೆಯವರು" ಕುಣಿಯುತ್ತಾರೆ. ವೀರಗಾಸೆಯವರ

ಸಮೂಹ ಕುಣಿತದಲ್ಲಿ ನಂದಿಕೋಲು ಕುಣಿಸುತ್ತಾರೆ. ಮತ್ತು ಪುರೋಹಿತರು ವೀರಗಾಸೆ ಮಾಡುತ್ತಾರೆ. ಊರಿನ ಮಧ್ಯದಲ್ಲಿ ಈ ನೃತ್ಯ ಹಾಗೂ ವೀರಗಾಸೆ ನೋಡಲು ಊರಿನ ಜನರು ಆಸಕ್ತಿಯಿಂದ ನಿಂತಿರುತ್ತಾರೆ. ನಂತರ ದ್ವಾರಬಾಗಿಲಿನಿಂದ ದೇವಸ್ಥಾನಕ್ಕೆ ದೇವರು ಬರುವ ವೇಳೆಯಲ್ಲಿ ಭಕ್ತಾದಿಗಳು ಅವರವರ ಮನೆ ನೇರಕ್ಕೆ ಬಂದಾಗ ಪೂಜೆ ಮಾಡುತ್ತಾರೆ. ನಂತರ ಗುಡಿಯ ಬಳಿಗೆ ದೇವರನ್ನು ಕರೆದೊಯ್ಯದು ವೀರಭದ್ರನ ದರ್ಶನ ಮಾಡುತ್ತಾರೆ. ಈ ಸಂದರ್ಭದಲ್ಲಿ ಕಲ್ಲೇಶ್ವರನ ಗರ್ಭಗುಡಿಗೆ ಪರದೆ ಎಳೆಯುತ್ತಾರೆ. ಇದು ಈ ಹಬ್ಬದ ವಿಶೇಷತೆಯಾಗಿದೆ.

೪.೫ ವಿಭೂತಿ ರಾಶಿಯ ಮಹಿಮೆ

ಕಲ್ಲೇದೇವರಪುರಕ್ಕೆ ೧ ಕಿಲೋ ಮೀಟರ್ ದೂರದಲ್ಲಿ ಒಂದು ಬೇಚಾರಾಕ್ ಗ್ರಾಮವಿದ್ದು, ಅದನ್ನು ಬೊಮ್ಮಗಟ್ಟಿ ಎಂದು ಕರೆಯಲಾಗುತ್ತದೆ. ಆ ಊರು ಈಗ ಹಾಳೂರು ಆಗಿರುವ ಇಲ್ಲಿ ಮಾರಮ್ಮನ ದೇವಸ್ಥಾನ ಹಾಗೂ ಇತರ ಪ್ರಾಚ್ಯ ಅವಶೇಷಗಳಿವೆ.

ಆ ಊರಿನಲ್ಲಿ ಬೊಮ್ಮಯ್ಯ ಎಂಬ ಗೌಡನಿದ್ದನಂತೆ ಅವನು ಬಹಳ ಜೋಳವನ್ನು ಬೆಳೆದು ತುಳಿಸಿ ರಾಶಿಯನ್ನು ಮಾಡಿದ್ದನಂತೆ, ಆಗ ಶ್ರೀ ಕಲ್ಲೇಶ್ವರನು ಜಂಗಮವೇಶದಲ್ಲಿ ಭಿಕ್ಷೆ ಬೇಡಲು ಹೋದಾಗ ಆ ಗೌಡನು ನಾಳೆ ಬಾ, ನಾಡಿದ್ದು ಬಾ ಹೀಗೆ ಹಲವು ಸಾರಿ ಹೇಳಿದನು. ಈ ಜಂಗಮನು ಬರುವುದನ್ನು ತಡೆಯಲು ಸುತ್ತಲೂ ಬೇಲಿಯನ್ನು ಹಾಕಿದನು. ಕೊನೆಗೂ ಭಿಕ್ಷೆ ಕೊಡಲಿಲ್ಲ. ಆದ್ದರಿಂದ ಕೋಪಗೊಂಡ ಜಂಗಮನು ನಿನ್ನ ಜೋಳದ ರಾಶಿಯು ಬೂದಿಯಾಗಿ ಹೋಗಲಿ ಎಂದು ಶಾಪಕೊಟ್ಟನು. ಈಗಲೂ ಆ ರಾಶಿಗಳು ಬೂದಿಯಾಗಿ ಹೋಗಿವೆ. ಆ ಬೂದಿಯು ಹಗುರವಾಗಿಯೂ, ವಾಸನೆಯೂ, ಮುಗ್ಗಾಗಿಯೂ ಇರುತ್ತದೆ. ಇದರಲ್ಲಿ ಮೂರು ರಾಶಿಗಳಿವೆ ಒಂದು ದೊಡ್ಡದು, ಅದಕ್ಕಿಂತ ಚಿಕ್ಕದ್ದು, ಇನ್ನೊಂದು ತುಂಬಾ ಚಿಕ್ಕದ್ದು, ಹಾಗಾಗಿ ವೀಭೂತಿ ರಾಶಿಯು ಮಹತ್ವ ಈ ರೀತಿ ಇದೆ. ಹಾಗೂ ಈ ಊರಿನಲ್ಲಿ ಕಾಳ್ಳೂಬ, ಕಿರಯೋಬ ಎಂಬ ಇಬ್ಬರು ಪುಡಾರಿಗಳಿದ್ದರಂತೆ ಅವರು ಜನರಿಗೆ ತೊಂದರೆ ಕೊಡುತ್ತಿದ್ದರಂತೆ ಆಗ ದೇವರು ಕಿರಯೋಬನಿಗೆ ಕಣ್ಣು ಹೋಗುವಂತೆ, ಕಳ್ಳೋಬನಿಗೆ ಕಾಲು ಹೋಗುವಂತೆ ಮಾಡಿದನು. ಹಾಗೂ ನನ್ನ ಮುಂದೆ ನೀವು ಇರಬೇಕು ಎಂದು ಅಜ್ಞೆ ಮಾಡಿದನಂತೆ. ಆದ್ದರಿಂದ ಇವರನ್ನು ದೇವಸ್ಥಾನದ ಮುಂಭಾಗದಲ್ಲಿ ಕಾಣಬಹುದು.

೪.೬ ಹೊನ್ನುಮರಡಿಯ ಮಹತ್ವ

ಈ ದೇವಸ್ಥಾನಕ್ಕೆ ಈ ಹಿಂದೆ ೧೪-೧೮ನೇ ಶತಮಾನದಲ್ಲಿ ಓರಂಗಲ್ಲಿನ ರಾಜನು ದಂಡೆಯಾತ್ರೆಗೆ ಬಂದಾಗ ಅವನು ಆ ದೇವಸ್ಥಾನದಲ್ಲಿ ಇದ್ದನಂತೆ. ಈ ದೇವರು ಕನಸ್ಸಿನಲ್ಲಿ ಬಂದು ನಿನಗೆ ಒಳ್ಳೆಯದನ್ನು ಮಾಡುತ್ತೇನೆ. ಪುತ್ರಾಭಿವೃದ್ಧಿ ಮಾಡುತ್ತೇನೆ ಎಂದು ಹೇಳಿದನಂತೆ. ಆಗ ರಾಜನು ಅವನ ರಾಜ್ಯಕ್ಕೆ ಹೋದಾಗ ಅವನಿಗೆ ಬಹಳ ಅನುಕೂಲವಾಯಿತು. ಆದ ಕಾರಣ ಅವನು ಕೈಮುಗಿದು ದೇವರೇ ನಾನು ನಿನ್ನ ಸನ್ನಿಧಿಗೆ ಬರುತ್ತೇನೆ. ನಿನ್ನ ಶಿಖರವು

ಎಲ್ಲಿಗೆ ದರ್ಶನವಾಗುತ್ತದೆಯೋ ಅಲ್ಲಿಂದ ಹೊನ್ನು ಬಿಟ್ಟುಕೊಂಡು ಬರುತ್ತೇನೆ ಎಂದು ಅಂದುಕೊಂಡನು. ಆಗ ಅದರಂತೆ ಬರುವಾಗ ಹೊನ್ನಮರಡಿಯ ಹತ್ತಿರ ದರ್ಶನವಾಯಿತು. ಆಗ ಅಲ್ಲಿಂದ ಹೊನ್ನನ್ನು ಸುರಿದುಬಿಟ್ಟನಂತೆ, ಆ ಊರಿನಲ್ಲಿ ಈಗಲೂ ಬಂಗಾರದ ಹೊನ್ನಿನ ಸುರಿದು ಗಣಿಯಿದೆ. ಅದಕ್ಕೆ ಈ ಊರಿಗೆ ಹೊನ್ನಮರಡಿ ಎಂದು ಕರೆಯುತ್ತಾರೆ.

೪.೭ ಗುಗ್ಗರಿ ಹುಣ್ಣಿಮೆ

ಪ್ರತಿವರ್ಷ ಕಾಳ ಹುಣ್ಣಿಮೆಯಲ್ಲಿ ಗುಗ್ಗರಿ ಬಸವಣ್ಣನ ದೇವಾಲಯದಲ್ಲಿ ಗುಗ್ಗರಿ ಉತ್ಸವ ಜರುಗುತ್ತದೆ. ಈ ಉತ್ಸವದಲ್ಲಿ ಗ್ರಾಮದಲ್ಲಿರುವ ಮನೆಗಳಿಂದ ಐದು ಬಗೆಯ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಅದನ್ನು ಬೇಯಿಸಿ ಗುಗ್ಗರಿಯ ರಾಶಿ ಹಾಕುವರು. ಅಂದು ಕಲ್ಲೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಹೊತ್ತು ಪೂಜಿಸಿದ ನಂತರ ಇಡೀ ರಾತ್ರಿ ಸ್ವಾಮಿಯನ್ನು ಸುತ್ತುತ್ತಾ ಕೋಲಾಟ ಆಡುವರು. ಮರುದಿನ ಬೆಳಗ್ಗೆ ಗುಗ್ಗರಿಯನ್ನು ಗ್ರಾಮಸ್ಥರಿಗೆ ಪ್ರಸಾದವಾಗಿ ಹಂಚುವರು. ಪುನಃ ಉತ್ಸವ ಮೂರ್ತಿಯನ್ನು ಗುಡಿದುಂಬಿಸುವುದರ ಮೂಲಕ ಗುಗ್ಗರಿ ಉತ್ಸವವನ್ನು ಮುಕ್ತಾಯಗೊಳಿಸುವರು.

ಈ ಮೇಲ್ಕಾಣಿಸಿದ ವಿಶೇಷ ಆಚರಣೆಗಳೊಡನೆ ಪ್ರತಿ ಸೋಮವಾರ, ಮಕರ ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ವಿಜಯದಶಮಿ, ದೀಪಾವಳಿ ಮುಂತಾದ ಹಬ್ಬಗಳಂದು ವಿಶೇಷ ಪೂಜೆಗಳನ್ನು ಏರ್ಪಡಿಸುವರು.[೬]

ಕ್ರಿ.ಶ. ೧೨೭೯ರ ಕಲ್ಲೇದೇವರಪುರದ ಶಿಲಾಶಾಸನ.[೭] ಈ ಪರಿಸರದ ಧಾರ್ಮಿಕ ಇತಿಹಾಸದ ದೃಷ್ಟಿಯಿಂದ ಮಹತ್ವ ಪಡೆದಿದೆ. ಕಾಳಾಮುಖರು, ನಾಥಸಿದ್ದರು ಹಾಗೂ ವೀರಶೈವ ಶರಣರ ಸಂಪ್ರದಾಯಗಳನ್ನು ಸಮನ್ವಯಗೊಳಿಸಿಕೊಂಡವರು ಈ ಆಸುಪಾಸಿನಲ್ಲಿದ್ದರೆಂಬುದಕ್ಕೆ ಈ ಶಾಸನವೇ ಉಜ್ವಲ ಸಾಕ್ಷಿ. ಇದು 'ಶಿವಯೋಗಿ ಚಕ್ರವರ್ತಿ' ಎನಿಸಿದ ಪ್ರಸಾದದೇವ ಎಂಬ ಒರ್ವಯತಿಯ ಮೇಲೆ ಶೈವ, ವೀರಶೈವ ಹಾಗೂ ನಾಥರ ಪ್ರಭಾವ ಆಗಿದ್ದನ್ನು ತಿಳಿಸುತ್ತದೆ. ಅವನು ರಸ, ರಸಾಯನ, ಅಂಜನ, ಮೂಲಕ ಮತ್ತು ಇಂದ್ರಜಾಲದಲ್ಲಿ ಸಿದ್ದಿ ಪಡೆದಿದ್ದನು. ಈ ಶಾಸನವು ಹನ್ನೆರಡನೆಯ ಶತಮಾನದ ಶರಣರಾದ ಚೆನ್ನಯ್ಯ, ಕಕ್ಕಯ್ಯ, ಮತ್ತು ಬಸವಣ್ಣನವರ ಹೆಸರುಗಳನ್ನು ಹರಹುತ್ತದೆ. ಇದರಲ್ಲಿ ಬಸವಣ್ಣನವರನ್ನು ಬಸವರಾಜನೆಂದು ಉಲ್ಲೇಖಿಸಲಾಗಿದೆ. ಇದರೊಡನೆ ಗೋರಖನಾಥ, ಚತುರರಗಿನಾಥ, ಆದಿಗದೆ ಎದುನಾಥ, ವಿಸ್ತಾರದೇ ಕಾಹಳಿನಾಥ, ಸುರ್ಷ್ಪಾಣನಾಥ, ಲೋಕನಾಥ ಮತ್ತು ನರನಾಥ ಎನ್ನುವ ನಾಥಸಿದ್ದರ ಹೆಸರುಗಳು ಈ ಶಾಸನದಲ್ಲಿವೆ. ಇದು ಈ ಭಾಗದಲ್ಲಿ ವೀರಶೈವ ಜೊತೆಗೆ ನಾಥಸಿದ್ದರ ಪ್ರಭಾವವಿದ್ದುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಕಲ್ಲೇದೇವರಪುರ ಗ್ರಾಮವು ಮಧ್ಯಯುಗೀನ ಕಾಲದ ಬಹುಮುಖ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾಗಿದೆ. ಇದು ಕಾಳಾಮುಖರ ನೆಲೆಯಾಗಿ, ಶಿಕ್ಷಣ ಕೇಂದ್ರವಾಗಿ, ಪ್ರಸಾದ ನಿಲಯವಾಗಿ

ಪ್ರಸಿದ್ಧಿ ಪಡೆದಿತ್ತು. ಕಲ್ಲೇಶ್ವರ ದೇವಾಲಯದ ಅವರಣದಲ್ಲಿಯೇ ಮಠವಿದ್ದು. ಅದು ೧೫೨೮ರ ವೇಳೆಗೆ ಜಮದಗ್ನಿ ಋಷೀಶ್ವರರ ಮಠ ಎಂಬ ಹೆಸರು ಪಡೆದು ಪ್ರಸಿದ್ಧವಾಯಿತು. ಈ ದೇಗುಲದಲ್ಲಿನ ಯತಿಯ ಶಿಲ್ಪವು ಈ ಮಠದ ಮತ್ತು ದೇಗುಲದ ಸ್ಥಾನಿಕನದು. ಈ ವೇಳೆಗಾಗಲೇ ಈ ಪರಿಸರದಲ್ಲಿ ವೀರಶೈವ ಶರಣರ ಮತ್ತು ನಾಥಸಿದ್ದರ ಪ್ರಭಾವವಿದ್ದುದೂ ಸ್ಪಷ್ಟ ಸಂಗಾತಿ.[೮] ಎಂದು ತಿಳಿದುಬರುತ್ತದೆ.

೪.೮ ಕಲ್ಲೇದೇವರಪುರದ ಧಾರ್ಮಿಕ ಸಂಸ್ಕೃತಿ

ಹೊಯ್ಸಳರ ಕಾಲದಲ್ಲಿ ಕಲ್ಲಪ್ಪ ದೇವಾಲಯ ಸ್ಥಾಪಿತವಾದ ಹಿನ್ನೆಲೆ ಚಾಳುಕ್ಯರ ಪತನ ನಂತರ ಕರ್ನಾಟಕದ ತಲೆ ಎತ್ತಿದವರು ಹೊಯ್ಸಳರು ೧೧ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದರು. ಆ ಹಿನ್ನೆಲೆಯಲ್ಲಿ ಬಂದಿರುವ ಕಲ್ಲೇದೇವರಪುರದ ಒಂದು ಹೊಸ ಅಧ್ಯಾಯದಂತೆ ಆರಂಭಗೊಂಡಿರುತ್ತದೆ. ಕರ್ನಾಟಕದಲ್ಲಿ ನೂರಾರು ದೇವಾಲಯಗಳು ಹೆಸರುವಾಸಿಯಾಗಿದ್ದವು ಕಲ್ಲೇದೇವರಪುರದ ದೇವಾಲಯವು ಹೊಯ್ಸಳರ ಕಲೆ ಮತ್ತು ವಾಸ್ತು ಶಿಲ್ಪದ ಸಾಧನೆಯಾಗಿದೆ. ಹೊಯ್ಸಳ ವಾಸ್ತುಶೈಲಿಯನ್ನು ಹೊಂದಿರುವ ಈ ದೇವಾಲಯವು ವಿಶಿಷ್ಟತೆಯಿಂದ ಕೂಡಿದೆ. ಕಲ್ಲೇದೇವರಪುರದ ಕಲ್ಲಪ್ಪದೇವಾಲಯದ ಶಿಲ್ಪ ಕಲೆಗೆ ಇಲ್ಲವೆಂದು ಅತಿ ಆಶ್ಚರ್ಯ ಆಗಬಹುದು. ಆ ನಿಟ್ಟಿನಲ್ಲಿ ನಿರ್ಮಾಣದ ದೇವಾಲಯದ ಜಾಲಂದ್ರಿಯಗಳು ದೇವಾಲಯದ ಮಹಾದ್ವಾರಗಳು ನಾಜೂಕಾದ ಕೆತ್ತನೆಯಿಂದ ಕೂಡಿದೆ. ಮಹಾದ್ವಾರದ ಎರಡು ದ್ವಾರಪಾಲಕರ ಮೂರ್ತಿಗಳಿವೆ. ದೇವಾಲಯವನ್ನು ನಾವು ಪ್ರವೇಶಿಸಿದ ಗಜ ಒಳಗೆ ಹೋಗುತ್ತಿದಂತೆ ಗೋಡೆಗಳ ಮೇಲೆ ಚಿತ್ರಿಸಲಾಗಿರುವುದು ಕಂಡುಬರುತ್ತವೆ.

ಕಲ್ಲೇದೇವರಪುರಕ್ಕೆ ಚಾರಿತ್ರಿಕ ಪರಂಪರೆಯಿಂದ ಅಲ್ಲಿನ ಜನ ಸಂಸ್ಕೃತಿ ಹಿರಿಯರನ್ನು ಗೌರವಿಸುತ್ತಾರೆ. ಅದೇ ರೀತಿಯಾಗಿ ದೇವಾಲಯಗಳಿಗೆ ಹೆಚ್ಚಿನದಾಗಿ ಮಾನ್ಯತೆ ನೀಡುತ್ತಾರೆ. ಅಲ್ಲಿನ ಜನರು ಶ್ರದ್ಧೆ, ಭಕ್ತಿಯಿಂದ ದೇವಸ್ಥಾನದ ಒಳಗಡೆ ಬಂದಿರುತ್ತಾರೆ. ಇಂತಹ ಒಂದು ಸೂಚಕ ಕಂಡುಬರುತ್ತದೆ. ಅದೇ ರೀತಿಯಾಗಿ ಕಲ್ಲಪ್ಪ ದೇವಾಲಯ ಒಂದು ಐತಿಹಾಸಿಕ ದೇವಾಲಯ. ಅದನ್ನು ಜವಾಬ್ದಾರಿಯುತವಾಗಿ ನಡೆಸಿಕೊಂಡು ಹೋಗುವರು, ಲಿಂಗಾಯತ ಜನಾಂಗದವರು. ಪೂಜಾರರು, ಲಿಂಗಾಯತ ಜನರು ಆ ದೇವಾಲಯ ಸುತ್ತಮುತ್ತಾ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಕಲ್ಲಪ್ಪ ಪವಾಡವನ್ನೇ ಸೃಷ್ಟಿಸಿದಂತೆ ಕಲ್ಲಲ್ಲಿ ಜನಿಸಿ ಲಿಂಗವಾಗಿ ಉದ್ಭವವಾಗುತ್ತಾನೆ. ಕಲ್ಲು ಗುಡಿಯೊಳಗೆ ಲಿಂಗಗಳಿಂದ ಕೂಡಿರುತ್ತಾನೆ ಎಂದು ಹೇಳಬಹುದು ಅದೇ ರೀತಿಯಾಗಿ.

'ಇಕ್ಕದ ಗಂಡ ಕೋಪದ ಮಾರಿ' ಯಲ್ಲಿ ಭಿಕ್ಷಾಟನೆಗಾಗಿ ಕಲ್ಲಿನಾಥನು ಹೋದಾಗ ಆಗ ಬಾ ಈಗ ಬಾ ಎಂದು ಹೇಳುತ್ತಿರಲು ಸುಮಾರು ಸಲ ಸತಾಯಸಿದಾಗ ಶ್ರೀ ಸ್ವಾಮಿಯು ಶಾಪಕೋಪದ ರಾಶಿಯೇ ಜೋಳದ ರಾಶಿ ಎಂಬ ಹೆಸರು ಬಂದಿದೆ. ಪ್ರತಿವರ್ಷವು ಚೈತ್ರ

ಬಹುಳ ಮೂಲ ನಕ್ಷತ್ರದಂದು ಶ್ರೀ ಕಲ್ಲಪ್ಪನ ಸ್ವಾಮಿಯ ರಥೋತ್ಸವ ನಡೆಯುತ್ತದೆ. ಹಾಗೂ ಎತ್ತಿನ ಜಾತ್ರೆಯು ಬಸವನ ಜಯಂತಿಯ ದಿನದವರೆಗೂ ನಡೆಯುತ್ತದೆ. ಸಂಪ್ರದಾಯದಂತೆ ಯಳವರ್ತಿ ಎಂಬ ಊರಿನಿಂದ ತೇರಿಗೆ ಗಿಣ್ಣವನ್ನು ತಂದು ನೈವೇದ್ಯ ಮಾಡಲಾಗುತ್ತದೆ. ಶ್ರೀ ಕಲ್ಲೇಶ್ವರ ಸ್ವಾಮಿಯ ಪುರದ ಭಕ್ತಾದಿಗಳು ಅರ್ಚಕರ ಮೂಲಕ ಸೇವಾ ಕಾರ್ಯವನ್ನು ಭಯ, ಭಕ್ತಿ ನಮ್ರತೆಯಿಂದ ದೇವರಿಗೆ ಪೂಜಾರ್ಪಣೆ ಮಾಡಿಸುತ್ತಾರೆ. ಪ್ರತಿವರ್ಷವು ಶ್ರಾವಣ ಮಾಸದಲ್ಲಿ ಶ್ರೀ ರುದ್ರಾಭಿಷೇಕ ಕಾರ್ಯವು ನಡೆಯುತ್ತದೆ. ಈ ದೇವಾಲಯವು ಸರ್ಕಾರದ ಮುಜರಾಯಿ ಆಡಳಿತಕ್ಕೆ ಒಳಪಟ್ಟಿದೆ.

ಒಟ್ಟಾರೆಯಾಗಿ ಕಲ್ಲೇದೇವರಪುರದಲ್ಲಿ ಪಾಂಡುರಂಗ ದೇವಾಲಯ, ದುರ್ಗಾಂಭಿಕ ದೇವಾಲಯ, ಮಾರಮ್ಮದೇವಿ ದೇವಾಲಯ ಹಾಗೂ ಶ್ರೀ ಕಲ್ಲೇಶ್ವರ ಸ್ವಾಮಿ ದೇವಾಲಯಗಳಿವೆ. ಇವುಗಳಲ್ಲಿ ಕಲ್ಲೇಶ್ವರ ಸ್ವಾಮಿ ದೇವಾಲಯವು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ.

ಕಲ್ಲೇಶ್ವರ ಸ್ವಾಮಿಯ ಜಾತ್ರೆಯ ಸಂದರ್ಭದಲ್ಲಿ ಜಾನಪದ ಕಲೆಗಳಾದ ಕೋಲಾಟ, ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ ಮುಂತಾದ ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ಸಾಂಪ್ರದಾಯಿಕವಾಗಿ ಆಚರಿಸುತ್ತಾರೆ.

ಮಂಗಳಂ ಶ್ರೀ ಕಲ್ಲಿನಾಥ ! ಮಂಗಳಂ ಶ್ರೀ ಕ್ಷೇತ್ರನಾಥ ! ಮಂಗಳ ಶ್ರೀ ಪಾರ್ವತಿನಾಥ!
ಮಂಗಳಂ ಶ್ರೀ ಲೋಕನಾಥ !
ಮಂಗಳಂ ಗುರುಗುಹೇಶ ! ಮಂಗಳಂ ಶ್ರೀ ಲಿಂಗಾಯ !
ಮಂಗಳಂ ಶ್ರೀ ಮಂದಲೋಭ್ಯ ಸದಾನಮಃ

ಇಂತಹ ಒಂದು ಧಾರ್ಮಿಕ ಸಂಸ್ಕೃತಿ ಹೊಂದಿರುತ್ತಾರೆ. ಅದೇ ರೀತಿಯಾಗಿ ಕಲ್ಲಪ್ಪನ ಜಾತ್ರೆಯ ಘನ ವೈಭವದಿಂದ ಭಕ್ತಾಧಿಗಳು ಆಚರಣೆ ಗೊಂಡಿರುತ್ತಾರೆ. ಆ ಊರಿನ ಗುರು ಹಿರಿಯರು ಅಷ್ಟೇ ಪರಂಪರೆಯುತವಾಗಿದ್ದಾರೆ. ಬಂದಂತ ಭಕ್ತಾಧಿಗಳಿಗೆ ಪ್ರಸಾದವನ್ನು ನೀಡುತ್ತಾರೆ. ಒಟ್ಟಿನಲ್ಲಿ ಕಲ್ಲಪ್ಪನ ಜಾತ್ರೆಯು ಅದ್ದೂರಿಯಾಗಿ ಮಾಡುತ್ತಾರೆ. ಕಲ್ಲಪ್ಪನ ಜಾತ್ರೆಯು ಒಂದು ವಾರಗಟ್ಟಲೆ ಮಾಡುತ್ತಾರೆ. ಏಕೆಂದರೆ ಅದು ಸುಮಾರು ೨೫ ಅಡಿ ಎತ್ತರದ ರಥೋತ್ಸವ ಹೊಂದಿರುತ್ತದೆ. ಜನ ಕಲ್ಲಪ್ಪನ ಜಾತ್ರೆಯು ಘನವೈಭವದಿಂದ ಕೈಗೊಂಡಿರುತ್ತಾರೆ.

ಶ್ರೀ ಕಲ್ಲೇಶ್ವರ ಸ್ವಾಮಿಯ ದೊಡ್ಡ ರಥೋತ್ಸವ ನಡೆಸಲು ಗುರು-ಹಿರಿಯರು ನಿಶ್ಚಿಯಿಸಿರುವುದರಿಂದ ಸಮಸ್ತ ಭಕ್ತಾಧಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಿರುತ್ತಾರೆ. ಕಲ್ಲಪ್ಪನ ಜಾತ್ರೆಯ ಮೊದಲನೆ ದಿವಸ ಕಲ್ಲಪ್ಪನ ರಥಕ್ಕೆ ಕಂಕಣಧಾರನೆ ಮಾಡುತ್ತಾರೆ.

ಎರಡನೇ ದಿವಸ ಕಲ್ಲಪ್ಪನಿಗೆ ಮದಲಿಂಗ ಶಾಸ್ತ್ರ ಮತ್ತು ಗಜೋತ್ಸವ ನಡೆಸಿ ಗೌರಮ್ಮಳ ಜೊತೆ ಕಲ್ಲಪ್ಪನಿಗೆ ಮದುವೆ ಮಾಡುತ್ತಾರೆ. ಇಂತಹ ಒಂದು ಸಂಸ್ಕೃತಿ ಕಲ್ಲೇದೇವರಪುರದಲ್ಲಿ ಕಂಡು ಬರುತ್ತದೆ. ಮೂರನೆಯ ದಿವಸ ಅಶ್ವವಾಹನೋತ್ಸ ಮತ್ತು ವೃಷಭೋತ್ಸವ ನಂತರ

ನಡೆಯಲಿದೆ. ಶ್ರೀ ಸ್ವಾಮಿಯ ದೊಡ್ಡ ರಥೋತ್ಸವ ನಡೆಯುತ್ತದೆ. ತದನಂತರ ಅಡ್ಡಪಲ್ಲಕ್ಕಿ ಉತ್ಸವ ಮತ್ತು ಕೋಲಾಟ ಕೊನೆಯ ದಿನದಂದು ಓಕುಳಿ ಇರುತ್ತದೆ. ಈ ರೀತಿಯಾಗಿ ಕಲ್ಲಪ್ಪನ ಜಾತ್ರೆಯು ಹೊಂದಿರುತ್ತದೆ. ಧನಗಳ ಜಾತ್ರೆಯು ಸಹ ಕಂಡು ಬರುತ್ತದೆ. ಜಾತ್ರೆಯು ಪ್ರಾರಂಭಗೊಂಡ ದಿನದಿಂದ ಹಿಡಿದು ಪ್ರತಿ ದಿವಸ ಒಂದೊಂದೆ ಕಾರ್ಯಕ್ರಮ ಹೊಂದಿರುತ್ತದೆ. ಆ ದೇವರ ಮೇಲೆ ಭಜನೆಯ ಹಾಡುಗಳನ್ನು ಸಹ ಹಾಡುವರು. ಅಷ್ಟೇ ವೈಭವದಿಂದ ಆ ಜಾತ್ರೆಯು ನೆರವೇರುತ್ತದೆ. ಬಂದಂತ ಭಕ್ತಾಧಿಗಳಿಗೆ ಗೋಡೆಯಲ್ಲಿ ವಿಶಿಷ್ಟ ಶಕ್ತಿ ಧೈರ್ಯ ಶೌರ್ಯ ಸಾಹಸದ ಸಂಕೇತವಾದ ಸಿಂಹಗಳ ಸಾಲು, ಹಲವು ರೀತಿಯ ವಿಗ್ರಹಗಳು ಕೆತ್ತನೆ, ಶಿಲ್ಪಿಯ ಸೌಂದರ್ಯಪ್ರಜ್ಞೆಯನ್ನು ತೋರಿಸುತ್ತದೆ.

೪.೯ ಕಲ್ಲೇದೇವರಪುರದ ಜಾನಪದ ಸಾಹಿತ್ಯ

ಸಾಹಿತ್ಯ ಎನ್ನುವುದು ವಿಶಿಷ್ಟತೆಯಿಂದ ಕೂಡಿದೆ. ಅದರಲ್ಲಿ ಕಥೆ, ಕಾದಂಬರಿ, ನಾಟಕ, ಜನಪದ ಗೀತೆಗಳು, ಒಗಟು, ಲಾವಣಿ, ಗಾದೆ, ಕೋಲಾಟ, ಸೋಬಾನಪದ, ಗದ್ಯ, ಕಥನಗಳು, ಹಲವು ರೀತಿಯಲ್ಲಿ ಸಾಹಿತ್ಯವನ್ನು ಆದರಿಸಿಕೊಂಡಿದೆ. ಕಲೆಗಳೊಂದಿಗೆ ಬೆರೆತಿರುವಂತಹ ಜನಸಾಮಾನ್ಯರು ತಮ್ಮ ವೃತ್ತಿ ಜೀವನದಲ್ಲಿ ಇವುಗಳನ್ನು ಒಂದು ಭಾಗವಾಗಿ ಮಾಡಿಕೊಂಡು ಹಬ್ಬ ಆಚರಣೆಗಳಲ್ಲಿ ಪ್ರತಿಯೊಬ್ಬರು ಸಹ ತನ್ನದೇ ಆದ ರೀತಿಯಲ್ಲಿ ನಿರ್ದಿಷ್ಟ ಮಾಧ್ಯಮ ಭಾಷೆಯನ್ನು ಬಳಸಿಕೊಂಡು ಹಲವು ರೀತಿಯ ಪದಗಳನ್ನು ಆಡುತ್ತಾರೆ. ಸಾಹಿತ್ಯದ ಭಾಷೆ ವ್ಯವಹಾರ ಭಾಷೆಗಿಂತ ಬೇರೆ ಆದದ್ದು. ಅದು ಭಾವ ಉಪಯೋಗ ಭಾಷೆ ಎನ್ನುತ್ತಾರೆ ಶಿವರುದ್ರಪ್ಪನವರು, ಹೇಳಿರುವರು ಮತ್ತು ಹಾಡುಗಳು ಮೂಲಕ ಕಲ್ಲೇದೇವರಪುರದಲ್ಲಿ ಸಾಮಾನ್ಯ ಜನರು ತನ್ನ ನೋವುನಲಿವುಗಳನ್ನು ಇತರರೊಡನೆ ಹಂಚಿಕೊಳ್ಳುವ ಆ ನೋವು ನಲಿವುಗಳನ್ನು ನೆನೆಪಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಹಾಡುಗಳನ್ನು ಬಳಸುತ್ತಾರೆ.

ನಾವು ಸಾಹಿತ್ಯದಲ್ಲಿ ಎರಡು ರೀತಿಯ ಭಾಷೆ ಕಾಣಬಹುದು ೧. ಚಿತ್ರ ೨. ಸಂಗೀತ ಚಿತ್ರಭಾವಕ್ಕೆ ಆಕಾರ ಕೊಟ್ಟರೆ ಸಂಗೀತ ಗತಿ ನೀಡುತ್ತದೆ. ಕಲ್ಲೇದೇವರಪುರದಲ್ಲಿ ಜನರು ಹಲವು ರೀತಿಯ ಹಾಡುಗಳನ್ನು ಹಬ್ಬ ಆಚರಣೆಯ ಮೂಲಕ ಅವರ ನೀತಿ ನಿಯಮಗಳನ್ನು ಅನುಸರಿಸುತ್ತ ಅವರು ಸಾಹಿತ್ಯವನ್ನು ಒಂದು ಭಾಗವಾಗಿ ಮಾಡಿಕೊಂಡಿದ್ದಾರೆ.

ಪ್ರೇರಣೆ : ಸಾಹಿತ್ಯ ರಚನೆ ಹಿನ್ನೆಲೆಯಲ್ಲಿ ಕಲ್ಲೇದೇವರಪುರದ ಜನರು ಪ್ರಯತ್ನದ ನಿಟ್ಟಿನಲ್ಲಿ ಕಷ್ಟ, ಮನುಷ್ಯನಲ್ಲಿ ನೋವು ನಲಿವುಗಳನ್ನು ಆಗುಹೋಗುಗಳನ್ನು ಇತರರೊಡನೆ ಹಂಚಿಕೊಳ್ಳಬೇಕೆಂಬ ಮೂಲ ಪ್ರೇರಣೆಯನ್ನು ಸಾಹಿತ್ಯವಾಗಿ ಬಳಸಿಕೊಂಡು ಬಂದಿದ್ದಾರೆ.

ಈ ಊರಿನ ಜನರು ಜನಪದ ಸಾಹಿತ್ಯವನ್ನು ಅಂತರಂಗದ ಒತ್ತಡ, ಅದರಿಂದ ಬಿಡುಗಡೆಪಡೆಯುವ ಆಶಯವು ಸಾಹಿತ್ಯ ಪ್ರೇರಣೆ ಕಂಡುಕೊಂಡಿದ್ದಾರೆ.

ಕಲ್ಲೇದೇವರಪುರದಲ್ಲಿ ಕಂಡುಬರುವ ಜನಪದ ಸಾಹಿತ್ಯ

೧. ಭಜನೆ

೨. ಗಾಥೆ

೩. ಜನಪದ ಹಾಡುಗಳು

೪. ಒಗಟುಗಳು

೫. ಕೋಲಾಟ

ಭಜನೆ ಹಾಡುಗಳು: ಹಾಡಿದವರು ತಿಪ್ಪೇರುದ್ರಪ್ಪ

ಊರಿಗೆ ಬಂದರೆ ದಾಸಯ್ಯ ನಮ್ಮ ಕೇರಿಗೆ ಬಾಕಂಡ್ಯಾ ದಾಸಯ್ಯ !!ಪ!!
ಕೋಲು ಕೋಳು ಶೈಲಿ ದಾಸಯ್ಯ ನೀ ಕಲ್ಲಿ ವರವಿತ್ತೆ ದಾಸಯ್ಯ
ಮಲ್ಲನ ಮರ್ದಿಶಿ ಮಾವನ ಮಾಡುಹಿಡದ ನೀಲಮೇಘ ಶಾಲ ದಾಸಯ್ಯ !!
!! ಉರಿಗೆ ಬಂದರೆ ದಾಸಯ್ಯ
ಕೊರಳೆಯ್ಯ ವನಮಾಲೆ ದಾಸಯ್ಯ ಬಲು ಗಿರಿಯನು ನೆಗಹಿದ ದಾಸಯ್ಯ
ಇರಳು ಹಗಲು ನಿನ್ನ ಕಾಣದೆ ಇರಲಾರೆ ಮರಳು ಮಾಡುವಂಥ ದಾಸಯ್ಯ
ಆದಿ ನಾರಾಯಣ ದಾಸಯ್ಯ ನಂದಗೋಕುಲದೋಳು
ಹುಟ್ಟಿಗೋವುಳ ಕಾಯ್ದ ಅದಿಕೇಶವರಾದ ದಾಸಯ್ಯ
ಉರಿಗೆ ಬಂದರೆ ದಾಸಯ್ಯ

ಈ ಹಾಡುಗಳಲ್ಲಿ ದೇವರ ನಾಮವನ್ನು ನೆನೆಯುತ್ತ ನಮ್ಮ ಕಷ್ಟಗಳನ್ನು ನೋವುಗಳನ್ನು ನೆನೆಯುತ್ತ ಕೆಲವು ಭಜನೆ ಪದಗಳನ್ನು ಹಬ್ಬ ಆಚರಣೆಗಳಲ್ಲಿ ಮತ್ತು ಸಾವಿನ ಸಮಯದಲ್ಲಿ ಕಲ್ಲೇದೇವರಪುರದ ಜನರು ಹಾಡುವರು.

ಗಾದೆಗಳು

ಸಾಹಿತ್ಯ ಜನರು ಮನಸ್ಸನ್ನು ಸಂತೋಷ ಪಡಿಸುವ ವಿಷಯವಾಗಿತ್ತು ಹಾಗೆಯೇ ಒಂದು ಸುಂದರ ಭವ್ಯಮಾನವಾಗಿ ಸಂಕೋಚಿತ ಮನೋಭಾವನೆಯನ್ನು, ಆತಂಕವನ್ನು ಕಳಿಸುವುದಕ್ಕೆ ಈ ರೀತಿಯಾದ ಸಾಹಿತ್ಯದಲ್ಲಿ ಗಾದೆಗಳನ್ನು ನೈಜ್ಯವಾಗಿ ಹೇಳುತ್ತಿದ್ದಾರೆ.

ಊರು ಪುಕಾರ ಬಲ್ದ ಹೆಣ ಶೃಂಗಾರ ಬಲ್ದ
ಊರು ಹೋಗು ಅಂತದೆ ಕಾಡು ಬಾ ಅಂತದೆ

ಈ ಒಂದು ಗಾದೆಮಾತಿನ ಅರ್ಥವೇನೆಂದರೆ ಒಬ್ಬ ಮನುಷ್ಯ ಊರಿಗೆ ಉಪಕಾರ ಮಾಡಿದ್ದು ಆಯಿತು. ಹೆಣ ಶೃಂಗಾರ ಮಾಡಿದ್ದು ಆಯಿತು. ಕೊನೆಯ ಗಳಿಗೆಯಲ್ಲಿ ಅಂದರೆ ಒಬ್ಬ ವ್ಯಕ್ತಿಗೆ ವಯಸ್ಸು ಬಿಸಿರಕ್ತ ಗಟ್ಟಿ ಇರೋವರೆಗೂ ಅವರ ಜೀವನಕ್ಕೆ ದುಡಿಯುತ್ತಾನೆ.

ಏನೆಲ್ಲ ಮಾಡಿ ವಯಸ್ಸು ಮುಪ್ಪಿಗೆ ಬಂದಾಗ ಊರು ಹೋಗು ಅಂತದೆ ಕಾಡು ಬಾ ಅಂತದೆ. ಮನುಷ್ಯ ಹುಟ್ಟಿದ್ದಾನೆ ಅಂದರೆ ಒಂದಲ್ಲ ಒಂದು ದಿವಸ ಸಾವು ಅನ್ನೋದು ತಪ್ಪಿದ್ದಲ್ಲ ಸಾಯಲೇ ಬೇಕು ಎಂಬ ಈ ಗಾದೆಯು ಮನುಷ್ಯನನ್ನು ಅರ್ಥಪೂರ್ಣವಾಗಿ ಮನುಷ್ಯನನ್ನು ಎಚ್ಚರಿಸುತ್ತದೆ.

ಎದ್ದ ಕಲ್ಲು ಪೂಜಾರಿಗೆ ಬಿದ್ದ ಕಲ್ಲು ಅಗಸನಿಗೆ
ಎಮ್ಮೆ ಮೇಲೆ ಮಳೆ ಹೊಯ್ದಂಗೆ

ಈ ಗಾದೆಯು ಅರ್ಥ ಹಿಂದಿನ ಕಾಲದಲ್ಲಿ ಜನರು ಈ ಮೂಡ ನಂಬಿಕೆಗೆ ಅತೀ ಬೇಗನೆ ಮರಳಾಗುವವರು, ನಮ್ಮ ಗ್ರಾಮೀಣ ಜನರೆ ಹಾಗೆ. ಇವರಿಗೆ ಮೂಡನಂಬಿಕೆಯನ್ನು ನಂಬಿದಷ್ಟು ತಮ್ಮ ಆತ್ಮ ಸಾಕ್ಷಿಯನ್ನು ನಂಬುವುದಿಲ್ಲ. ಯಾರೊ ಬಂದು ಒಂದು ಕಲ್ಲಿಗೆ ಪೂಜೆ ಮಾಡಿ ಹೋದರೆ ಅಲ್ಲಿ ಒಂದು ದೇವರನ್ನು ಸೃಷ್ಟಿ ಮಾಡುವವರು ಅದೇ ರೀತಿ, ಪೂಜಾರಿಯನ್ನು ಆ ಕಲ್ಲನ್ನು ಮಾಡಿದ. ಆ ಕಲ್ಲು ಪೂಜಾರಿಗೆ ಲಾಭವಾಯಿತು. ಬಂದಂತ ಜನರು ಕಾಸು ಹಾಕುವವರು ಇದರಿಂದ ಪೂಜಾರಿ ಶ್ರೀಮಂತನಾದ.

ಬಿದ್ದ ಕಲ್ಲು ಅಗಸನಿಗೆ ಅಂದರೆ ಅಲ್ಲಿ ಪೂಜಾರಿಗೆ ಆಲೆ ಹೊಟ್ಟೆ ತುಂಬಿರುತ್ತದೆ. ದೇವರನ್ನಾಗಿ ಸೃಷ್ಟಿಸಿದ ಕಲ್ಲ ಬಿದ್ದು ಹೋಗುವ ಸಮಯಕ್ಕೆ ಬಂದಿರುತ್ತದೆ. ಅದು ಹೇಗಪ್ಪ ಅಂದರೆ ಎಮ್ಮೆ ಮೇಲೆ ನೀರು ಸುರಿದಂತೆ ಎಂದು ಗಾದೆಯ ಅರ್ಥವಾಗಿದೆ. ಗ್ರಾಮೀಣ ಜನರನ್ನು ಕುರಿತಂತೆ ಇದು ಕಂಡು ಬರುತ್ತದೆ.

ಜನಪದ ಹಾಡುಗಳು

ಮಾನವನು ಸಂಸ್ಕೃತಿಯನ್ನು ತಲೆಮಾರಿನಿಂದ ತಲೆಮಾರಿಗೆ ವಿವಿಧ ಮುಖಗಳಿಂದ ಸಾಗಿಸಿಕೊಂಡು ಬಂದಿದೆ. ಈ ನಿಟ್ಟಿನಲ್ಲಿ ಮನುಷ್ಯನ ಬದುಕಿನ ಎಲ್ಲಾ ವಿಷಯಗಳಲ್ಲಿ ಸಹ ತಮ್ಮ ಸಾಂಪ್ರದಾಯ ಆಚರಣೆಗಳಲ್ಲಿ ಬದುಕುತ್ತಿದ್ದಾರೆ. ಕಲ್ಲೇದೇವರಪುರದ ಜನ ಸಾಮಾನ್ಯರ ವಿಶಿಷ್ಠ ಸಂಸ್ಕೃತಿ ಜನಪದವಾಗಿದೆ. ಜನಪದ ಸಾಹಿತ್ಯಕ್ಕೂ ಮತ್ತು ಮಾನವನಿಗೂ ನಿಕಟವಾದ ಸಂಬಂಧವಿದೆ. ಅದರಲ್ಲಿ ಒಂದು ಜನಾಂಗದಲ್ಲಿರುವ ಹಾಡು, ಕಥೆ, ಪುರಾಣ, ಆಚರಣೆ, ನೃತ್ಯ ಕಲೆಗಳನ್ನು ಇಲ್ಲಿನ ಜನ ಸಾಮಾನ್ಯರು ಬೆಳೆಸಿಕೊಂಡು ತಮ್ಮ ಸಾಂಪ್ರದಾಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಇದ್ದಾರೆ.

ಹಾಡಿದವರು : ಸಣ್ಣ ಪಾಲಯ್ಯ

ಬಡತನದ ಮನೆಯೊಳಗೆ ಹೆಣ್ಣು ಹುಟ್ಟಬಾರದು !!
ಹಡೆದ ತಪ್ಪಿಗಾಗಿ ತಂದೆ ! ಹಡೆದ ತಪ್ಪಿಗಾಗಿ ತಾಯಿ ಕಣ್ಣೀರು ಸುರಿಸ ಬಾರದು !!ಪ!!
ಬಡತನದ ಮನೆಗಯೊಳಗೆ
ಬಡವನ ಮಗಳಾದರು ತಪ್ಪಾಗಿರ ಬಾರದು !!

ಹೆಣ್ಣು ಹಡೆದ ತಾಯಿಗೆ ಎಂದು ಬೈಯ ಬಾರದು
ಹಣದಾಸಿನ ಗುಣದವನ ಹೆಂಡತಿಯಾಗಬಾರದು
ಬಡತನದ ಮನೆಯೊಳಗೆ !!
ಕರುಣೆಯಿಲ್ಲದ ಅತ್ತೆಮನೆಯ ಸೋಸೆಯಾಗಬಾರದು ಒಪ್ಪಿಕೊಂಡು ನಡೆಯುವ ಅತ್ತೆ
ಸೇವೆ ಮರೆಯಬಾರದು.
ಕುರುಡನಿರಲಿ ಕುಂಟನಿರಲಿ !! ಗಂಟುಮಾರಿ ಗಂಡನಾಗಲಿ ಅಸ್ಯಯ ಪಡಬಾರದು !!
ಬಡತನದ ಮನೆಯೊಳಗೆ !!
ಹೆಣ್ಣು ಹೊನ್ನು ಮಣ್ಣು ಒಂದೆ ಎಂದು ಜಗವೆಲ್ಲ ಕೂಗುವುದು !!
ಈ ಲೋಕದಲ್ಲಿ ನಮಗೆ ಭಾಗ್ಯ ಎಂದು ದೊರಕುವುದು !
ಸಾಕು ಈ ಲೋಕದ ಸಂಘ !! ಮರಳಿ ಹುಟ್ಟ ಬಾರದು !!
ಬಡತನದ ಮನೆಯೊಳಗೆ !!

ಈ ಒಂದು ಜನಪದ ಹಾಡು ಯಾವ ಒಂದು ದಾಟಿಯನ್ನು ಹಿಟ್ಟುಕೊಂಡು ಹೇಳುತ್ತದೆ. ಅಂದರೆ ಇದು ಒಂದು ಹೆಣ್ಣು ಬಡತನ ಕುಟುಂಬದಲ್ಲಿ ಎಷ್ಟೊಂದು ಬಾರವಾಗಿ ಕಂಡುಬರುತ್ತಾಳೆ. ಅಂದರೆ ಒಂದು ಸ್ತ್ರೀಯ ನಿಸಹಾಯಕ ಬದುಕನ್ನು ತಿಳಿಸುತ್ತದೆ. ಇದು ಒಂದು ಹೆಣ್ಣು ಬಡತನದಲ್ಲಿ ಹುಟ್ಟಿ ಅವಳು ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಇಲ್ಲಿ ತಿಳಿಸುತ್ತದೆ. ಅದೇ ರೀತಿ ಹೆಣ್ಣಿನ ಪತಿವ್ರತೆಯನ್ನು ಜನಪದರು ಕಾಣುವರು. ಅಷ್ಟೆ ಅಲ್ಲ ಹೆಣ್ಣು ತವರಿನ ಮನೆಯಿಂದ ಗಂಡನ ಮನೆಗೆ ಹೋಗುವಾಗ ಕಣ್ಣೀರು ಸುರಿಸಬಾರದು ಯಾಕೆ ಅಂದರೆ ತವರುಮನೆಗೆ ಅದು ಕಳಂಕ ಬರಬಹುದು ಇಲ್ಲದೆ ಗಂಡನ ಮನೆಗೆ ಅದು ಕಳಂಕ ಬರಬಹುದು ಎಂದು ಒಂದು ಮೂಡ ನಂಬಿಕೆ ಜನಪದರಲ್ಲಿ ಕಾಡುತ್ತಿತ್ತು. ಅಂದರೆ ಒಂದು ಹೆಣ್ಣು ಬಡವರ ಮಗಳಾಗಿದ್ದರಿಂದ ಬಡತನದಲ್ಲಿ ಕೂಡಿರಬೇಕು ಶ್ರೀಮಂತಿಕೆಗೆ ಮರುಳಾಗಬಾರದು ಅದು ಯವತ್ತಿಗೂ ಶಾಶ್ವತವಲ್ಲ. ಅದು ಬರಿ ನಶ್ವರ ಎಂದು ಈ ಜನಪದ ಹಾಡಿನಲ್ಲಿ ಕಂಡುಬರುತ್ತದೆ.

ಹಾಡಿದವರು ಜಿ. ತಿಪ್ಪಯ್ಯ

ಪೂಜೆ ಮಾಡುವ ಬನ್ನಿರೋ ! ಶ್ರೀ ಗುರುಪಾದ !
ಪೂಜೆ ಮಾಡುವ ಬನ್ನಿರೋ !!ಪ!!
ಪೂಜೆ ಮಾಡುವ ಬನ್ನಿ ! ಈ ಜಗ ಸುಳ್ಳೆನ್ನಿ ! ತೇಜೋ
ಮೂರಿತಿಯಾಗಿ ರಜಿಸುವ ಗುರುಪಾದ !!ಅ!! ಪ!!
ಕರುಣಾಮೃತ ತೀರ್ಥದ ಸ್ನಾನವ ಮಾಡಿ ! ಪರಿಶುದ್ಧಾಂತ
ರಂಗದೀ !! ದುರಿತ ಮೈಲಿಗೆ ಬಿಟ್ಟು ವಿರತಿಯ ಮುಡಿಯುಟ್ಟು !!
ಅರಿವು ದೀಪಮೆ ! ಮೆರವೆ ಧೋಪವ ಸುಟ್ಟು !!೧!!

ನಾದ ಗಂಟೆಯ ಬಾರಿಸಿ ! ಮನದೊಳಗಿರ್ವ ! ವಾದಬೇಗಳಿಸಿ !!
ನರನಾಗಿ ಬಂದಿರುವ ನಾರಾಯಣನೆ ಗುರು ರೂಪದಿಂದರುವ !!
ಪರಿಯನ್ನು ಮನದಂದು ! ನಿರುತ ನಿಶ್ಚಯವೆಂದು !
ಗುರುಲಿಂಗ ನರಹಿರಿ ! ಚರಣಕ್ಕೆರೆಗಿನಿಂದ !! ಪೂಜೆ ಮಾಡುವ !!

ಈ ಜನಪದ ಹಾಡು ಭಕ್ತಿಯನ್ನು ಕುರಿತಾಗಿಬೆ. ಮನುಷ್ಯ ಪಾಪ ಪುಣ್ಯವನ್ನು ಪರಿಶುದ್ಧಮಾಡಿಕೊಂಡು ಏನೆ ಇರಲಿ ಅದನ್ನು ದೂರಿಸರಿದು. ಭಕ್ತಿಯಿಂದ ಶಿವನ ಪಾದ ತೊಳೆದು ಅಭಿಷೇಕದಿಂದ ಪದ ತೊಳೆದು, ಶಿವನ ನಾಮಸ್ಮರಣೆ ಮಾಡಿ, ಪಾದಪೂಜೆ ಮಾಡೋಣ ಬನ್ನಿ ಹಾಗೂ ಸ್ನಾನವ ಮಾಡಿಕೊಂಡು ಶ್ರದ್ಧೆ ಭಕ್ತಿಯಿಂದ ನಡೆದುಕೊಂಡು ಪೂಜೆ ಸಲ್ಲಿಸೋಣ ಎಂಬುದು ಈ ಮೇಲಿನ ಹಾಡಿನ ಅರ್ಥವಾಗಿದೆ. ಇದೇ ರೀತಿಯಾಗಿ ಭಕ್ತಿಯನ್ನು ಕುರಿತ ಜನಪದ ಗೀತೆ ಈ ರೀತಿ ಇದೆ.

ಕಲ್ಲೇಶ್ವರ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯಲಿ ನಿನ್ನ ನಾಮ !
ನಾಲೀಗಿ ಮೇಲೆ ಬೆಳೆದೆನೋ !

ಕಲ್ಲೇಶ್ವರ ಅಂದರೆ ಜನರಲ್ಲಿ ನಂಬಿಕೆ. ಭಕ್ತಿ ಪೂಜೆ ಪುರಸ್ಕಾರಗಳನ್ನು ಮಾಡುತ್ತಾ ಧಾರ್ಮಿಕ ಆಚರಣೆಗಳಿಗೆ ಹೆಚ್ಚು ಒತ್ತು ಕೊಡುತ್ತಿದ್ದರು. ಜನಪದ ಸಾಹಿತ್ಯ ಭಾವಪೂರ್ವಕವಾದದ್ದು ಇಲ್ಲಿನ ಜನರು ಕಲ್ಲೇಶ್ವರನನ್ನು ಗೌವಿಸುತ್ತಾ ಸತ್ಯವನ್ನು ಹೇಳುತ್ತ ಸುಳ್ಳನ್ನು ತೊಲಗಿಸಿ ಉತ್ತಮ ಜೀವನ ನಡೆಸುತ್ತಿದ್ದರು.

ಮಂದಿ ಮಂದಿಯೆಂದು ಮಂದಿ ನಂಬಲಿಹೋದ
ಮಂದಿ ಬಿಟ್ಟಾರ ನನಡುನೀರ ! ಕಲ್ಲಯ್ಯ !
ಆಕಾಶದಡವ್ಯಾಗ ದೂಪದ ಹೊಗೆಯೆದ್ದು !
ಆಯ್ತು ಮ್ಲಲಯನ ಶಿವ ಪೂಜೆ ! ಆಗಗ !
ಆಕಾಶದ ಘಂಟೆ ಘಳಲೆಂದು

ವಾಸ್ತವಿಕ ಮತ್ತು ಧಾರ್ಮಿಕವಾಗಿ ನಡೆಯುದಾದರೆ ಇಲ್ಲಿ ಜನರು ಕಲ್ಲಯ್ಯ ದೇವರನ್ನು ನಂಬಿಕೊಂಡು ಜೀವನ ಮಾಡುತ್ತಿದ್ದರು. ನಿನ್ನ ನಂಬಿ ನಾವು ಬಂದಿದ್ದೇವೆ. ನೀನು ನಡುನೀರಲ್ಲಿ ನನ್ನ ಕೈಬಿಡಬೇಡ ನಿನ್ನನ್ನು ದಿನ ನಿತ್ಯವೂ ಪೂಜೆ ಪುರಸ್ಕಾರಗಳನ್ನು ಮಾಡುತ್ತೇವೆ. ನಮ್ಮ ಕಷ್ಟ ಬಡತನಕ್ಕೆ ನೀನೇ ಕೈಹಿಡಿಯಬೇಕೆಂದು ದೇವರಲ್ಲಿ ಬೇಡಿಕೊಳ್ಳುತ್ತಿದ್ದರು.

ಹೊತ್ತು ಮುಳುಗಿದರೇನು ಕತ್ತಲಾದರೇನು !
ಅಪ್ಪ, ನಿನ ಗುಡಿಗೆ ಬರುವೇನೋ ಮಾದಯ್ಯ !
ಮುತ್ತಿನ ಬಾಗಿಲು ತೆರೆದೀರೋ !

ಸಾಮಾನ್ಯ ಜನರು ದೇವರ ಮೇಲೆ ನಂಬಿಕೆ ಇಟ್ಟುಕೊಂಡಿದ್ದಾರೆ. ದೇವರ ದರ್ಶನಕ್ಕೆ ಬರುವ ಸಂದರ್ಭವನ್ನು ಈ ಹಾಡಿನಲ್ಲಿ ಧ್ವನಿಸಲಾಗಿದೆ. ಜನರಿಗೆ ದೇವರ ದರ್ಶನ ಪಡೆಯಲು ಬರುವುದಕ್ಕೆ ಹಗಲು-ರಾತ್ರಿ ಎಂಬುದು ಇರದೆ ಸದಾಕಾಲ ಅವರಿಗೆ ದರ್ಶನವಾಗುವಂತೆ ಇರಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಇದರ ಹಿಂದೆ ಜನರ ಭಕ್ತಿಯನ್ನು ಕುರಿತು ಇದು ಹೇಳುತ್ತದೆ.

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಣ ಭೂಮಿತಾಯಿ
ಎದ್ದೆಂದುಗಳಿಗೆ ನೆನೆವೇನು

ಭೂಮಿಯನ್ನೇ ಜೀವನ ಎಂದು ನಂಬಿಕೊಂಡು ಶ್ರಮಿಕ ಜನರು ಜೀವನ ಮಾಡುತ್ತಾರೆ. ಭೂಮಿಯನ್ನು ನೇಗಿಲು ಆಗಿ ಬಳಸಿಕೊಂಡು ಬಡವರ ಹೊಟ್ಟೆ ನೀಗಿಸುತ್ತದೆ. ಅಂತಹ ಒಂದು ಪವಿತ್ರವಾದ ಭೂಮಿ ತಾಯಿಯು ರೈತನ ಕಷ್ಟ ನೋವುಗಳಲ್ಲಿ ಒಡನಾಡಿಯಾಗಿ ಹೊಂದಿರುತ್ತದೆ. ಇಂತಹ ಒಂದು ದೃಷ್ಟಿಯಿಂದ ರೈತರು ಬೆಳಗಿನ ಜಾವ ಎದ್ದು ಧನ ಕರುಗಳನ್ನು ಹೊಡೆದುಕೊಂಡು ವ್ಯವಸಾಯ ಮಾಡಲು ಹೊಲಕ್ಕೆ ಹೋಗುತ್ತಾರೆ. ಮೊದಲು ಭೂಮಿಗೆ ಪೂಜೆಮಾಡಿ ನಂತರ ವ್ಯವಸಾಯ ಮಾಡುತ್ತಿದ್ದರು. ಅಂದರೆ ಪದ್ಯದಲ್ಲಿ ಕಷ್ಟ ಮತ್ತು ಸುಖ ಎರಡನ್ನು ಆವರಿಸುತ್ತದೆ. ಎಳ್ಳು ಜೀರಿಗೆ ಎಂದರೆ ಸಾವು ಮರಣ ಎಂಬ ಅರ್ಥವನ್ನು ನೀಡುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಶ್ರಮಸಂಸ್ಕೃತಿಯ ಜನರು ನಂಬಿರುವುದೇ ಭೂಮಿಯನ್ನು ಅದು ಅವರ ವೃತ್ತಿಯ ದೈನಂದಿನ ಭಾಗವಾಗಿದೆ. ಭೂಮಿಗೂ ಸ್ತ್ರೀಗೂ ಒಂದು ಸಂಬಂಧದ ಸ್ವರೂಪ ಈ ಪದ್ಯದಲ್ಲಿ ಗೋಚರವಾಗುತ್ತದೆ.

ಈ ರೀತಿಯಾಗಿ ಜನಪದ ಗೀತೆಗಳು ತೇರಿನಲ್ಲಿ ಮಹತ್ವವಾಗಿವೆ. ಇಂತಹ ತೇರಿನಲ್ಲಿ ಜನರ ಮುಖಾಂತರ ಜನಪದ ಗೀತೆಗಳು ರಚನೆಯಾದವು ಎಂದು ತಿಳಿಯಬಹುದಾಗಿದೆ. ಅದೇ ರೀತಿ ಕಲ್ಲೇದೇವರಪುರದ ಸಾಹಿತ್ಯವು ಕೂಡ ಈ ತರ ಹೊಂದಿದೆ. ಏಕೆಂದರೆ ಸಾಮಾನ್ಯವಾಗಿ ಹಳ್ಳಿಗಳು ಗ್ರಾಮೀಣ ಪ್ರದೇಶಗಳು ಎಂದು ಬಂದರೆ ಹೆಚ್ಚಿನವಾಗಿ ನೋಡುವುದಾದರೆ ಜನಪದರನ್ನು ಅವರು ತಮ್ಮ ಯಾವ ರೀತಿ ಸಾಹಿತ್ಯಕ್ಕೆ ಪ್ರೇರಣೆಯನ್ನು ನೀಡಿದ್ದಾರೆ. ಜನಪದರು ಸಾಹಿತ್ಯವನ್ನು ಯಾವ ರೀತಿ ಕಟ್ಟಿಕೊಟ್ಟಿದ್ದಾರೆ, ಎಂಬ ಉದ್ದೇಶವನ್ನು ಹಿಟ್ಟುಕೊಂಡು ರಚನೆ ಮಾಡಿರುವವರು. ಜನಪದರ ಕಲೆ ಆಶಯ ಅವರ ಭಾವನೆಗಳನ್ನು ವ್ಯಕ್ತಪಡಿಸುತ್ತ ಒಗಟು, ಗಾದೆ, ನಾಟಕ ಜನಪದಗೀತೆಗಳು ಇತ್ಯಾದಿಗಳಲ್ಲಿ ಕಂಡುಕೊಂಡರು ಎಂದು ತಿಳಿಯಬಹುದಾಗಿದೆ. ಈ ರೀತಿಯಾಗಿ ಕಲ್ಲೇದೇವರಪುರದ ಸಾಹಿತ್ಯವು ಅಲ್ಲಿನ ಜನಪದರಿಂದ ಬೆಳೆದು ಬಂದ ದಾರಿಯಾಗಿದೆ.

ಒಗಟುಗಳು

'ಹಸಿರು ಗಿಡದಾಗ ಮೊಸರು ಚೆಲ್ಲೈತಿ'

ಅಂದರೆ ಹಸಿರು ಗಿಡಕ್ಕೆ ಮತ್ತು ಮೊಸರಿಗೆ ಹೋಲಿಕೆ ಮಾಡಿದಾಗ ಮಲ್ಲಿಗೆ ಹೂವು ಸಹ ಬೆಳ್ಳಗೆ ಇರುತ್ತದೆ ಎಂದು ಸೂಚಿಸುತ್ತದೆ. ಮಲ್ಲಿಗೆ ಗಿಡನೇ ಹಸಿರು ಆಗಿ ಇರುತ್ತದೆ. ಈ ಒಗಟು ಮಲ್ಲಿಗೆ ಹೂವು ಅರ್ಥಹೊಂದಿದೆ.

'ಸುತ್ತ ಮುತ್ತ ಸುಣ್ಣದ ಗೋಡೆ ಎತ್ತ ನೋಡಿದರು ಬಾಗಿಲಲ್ಲಿ'

ಈ ಒಗಟಿನ ಅರ್ಥ ಮೊಟ್ಟೆಯನ್ನು ಸೂಚಿಸುತ್ತದೆ. ಏಕೆಂದರೆ ಅದು ಎತ್ತ ನೋಡಿದರು ಸುತ್ತ ಗೋಡೆ ಮುಚ್ಚಿಕೊಂಡಾಗೆ ಮುಚ್ಚಿಕೊಂಡಿರುತ್ತದೆ. ಅದಕ್ಕೆ ಒಂದು ಬಾಗಿಲು ಸಹ ಇರುವುದಿಲ್ಲ. ಹೀಗಿರುವಾಗ ಒಗಟಿನ ಅರ್ಥ ಮೊಟ್ಟೆಯನ್ನ ಅವಲಂಬಿಸಿದೆ.

'ಎಲ್ಲಾರು ಹೊಡೆದಾಡಿ ಸತ್ತರೆ ನನ್ನ ಗಂಡ ಬಡಿದಾಡಿ ಸತ್ತ'

ಅಂದರೆ ಹಿರಿಯರು ಹೇಳಿದ ಗಾದೆಗಳು ಎಂದಿಗೂ ಸುಳ್ಳಾಗದು ಅವರು ಸಮಾಜದೊಳಗಡೆ ನಡೆಯುವಂತ್ತದನ್ನೆ ನುಡಿವವರು. 'ಎಲ್ಲಾರು ಹೊಡೆದಾಡಿ ಸತ್ತರೆ' ಅಂದರೆ ಒಬ್ಬ ಮನುಷ್ಯ ತಾನು ಬೇಗ ಶ್ರೀಮಂತನಾಗಬೇಕು ಎಂಬ ಆಸೆಪಟ್ಟರೆ ಇಲ್ಲಿ ನ್ಯಾಯಕ್ಕಾಗಿ ಸತ್ತನಂತೆ ಎಂಬುದೇ ಈ ಗಾದೆ ತಿಳಿಸುತ್ತದೆ.

ಕೋಲು ಪದಗಳು

ಪದ – ೧

ದನಿತ್ತಾ ದನಿತ್ತೋ ! ಆನಂ ಗೌವುತೋ
ಗೌವುತ್ತಾ ! ವಿನಯ ನಾಯಕ ! ದಿಗಡದಂ
ದಿಗಡದಂ ದಿಗ್ಗಿಡದಿಗ್ಗಿತ್ತಾ ಕಡಗಡದಾಕ್ಕೆ ದದ್ದಾರಿ ದಿದ್ದುಂದಂ !!
ದದ್ದಮರೆ ಸಂಗೀತಾ ! ದದ್ದಮಿಕಿತಾ !
ಮೊದಲು ನೆನೆದೇನೋ ಗಜಮುಖದೈಯ್ಯನಾ !
ಸೊಬಗಿನ ಸೊನುಗಿನ ಬ್ಯಾನವನಾ ! ಯೇದತ್ತಾತ್ತಾ
ಆಡಿ ಪಾಡಿ ಬೇಡಿ ಜನರು ಕೊಂಡಾಡಿ ಹುಲಿಗೇರಿ ಸೋಮಯ್ಯನ
ನೆನೆಯಕ್ತಿ ನೆನಗಡಲೆ ಗೊನೆಯ ಬಾನೆಯ ಬಾಳೆಯ ಹಣ್ಣು
ಬಿಗಳೆ ತಂಬಿಟ್ಟೆನುಂಡೆ ಘನಿಪಾರ ! ಕೊಟ್ಟೆವು
ನಮಗೊಳ್ಳೆ ಮರೆಯಾ ಕೊಡು ಬೆನವಾ !!
ಯಳ್ಳಿನುಂಡಲಿಗೆ ನೆನಗಡೆಲೇ ! ಕೊಟ್ಟೆವು
ದುದ್ದುಳ ಮರೆಯೊ ಕೊಡು ಬೆನವಾ !!೧!!

ಕಡಲೆ ಹೊಲದಾಗಳ ! ಒಡಲ ಹೊಟ್ಟೆಯ ಬೆನವಾ
ಕಡಲೆ ನುಂಡಗೆ ನೆನಗಡಲೇ ! ಕೊಟ್ಟವು
ಕಡಲುಳ್ಳ ಮತಿಯ ಕೊಡ ! ಬೆನವಾ !!೨!!
ತುರುಮಂದೆಯೊಳಗಿರುವ ! ಕರಿಮುಖ ಬೆನವನೇ !
ಕರೆದು ಕೊಡುಬೆನೋ ನೊರೆಹಾಲು ಸಕ್ಕರೆ
ಕಡಲುಳ್ಳ ಮತಿಯ ಕೊಡು ಬೆನವಾ !!೩!!
ಕೋಲ್ ಕೋಲ್ ಕೋಲೆ ! ಕೋಲೇ ಕೋಲೇ
ತಾಳ್ ಮದ್ದಾಳೆ ಹಾಕಿ ದಮ್ಮಕಿನ ಕೋಲೇ !!

ಪದ – ೨

ಕೋಲೆ ಕೋಲೆ ಕೋಲೆನ್ನ ಕೋಲೆ !!ಪದ!!
ಈ ಕೋಲು ಪಿಡುದವನ ಯಾರ್‍ಯಾರು ಬಲಗೊಂಬೆ !!೧!!
ವೀರಾ ನಾರಾಯಣನ ಗದುಗಿನ ಶ್ರೀ ಬೆಂಬಕನಾ !!೨!!
ದೇವಾರ ಮೊದಲಿನ ಬಲಗೊಂಬೆ ಕೋಲೆ !!೩!!
ನಾ ಬಾಲ ಗೊಂಬೆ ಕಾಣೆ ಭೂಮಿ ದೇವತೆಯಾ !!೪!!
ಸೆರಿಯೊಳ್ಳರಾ ಬಲಗೊಂಬೆ ! ಗೊಲ್ಲ ದೇವತೆಯಾ !!೫!!
ಮೂಡಲ ಮರದ ಮುತ್ತಿನ ಕೋಲಿಗೆ ಸೂರ್ಯಚಂದ್ರರ ಕಾವಲೆ !!೬!!
ತೆಂಕಲ ಮರದ ದಿಂದಕ ಕೋಲಿಗೆ ಲಂಕೇ ಹನುಮನ ಕಾವಲೆ !!೭!!
ಬಡಗಲು ಮರದ ! ಬಣ್ಣದ ಕೋಲಿಗೆ ವೀರಭದ್ರನ ಕಾವಲೆ !!೮!!
ಪಡವಲ ಮರದ ಬೆಡಗಿನ ಕೋಲಿಗೆ ಹರಿಬ್ರಹ್ಮನ ಕಾವಲೆ !!೯!!
ಮಿಕ್ಕದ ಕೋಲಿಗೆ ! ಮುಕ್ಕಣ್ಣನಾ ಕಾವಲೇ !!೧೦!!
ಮತ್ತು
ತರುಣಿ ನೀ ತೋರೆ ! ತವಕ ನಿಲ್ಲಲಾರೆ
ಪುರದ ಕಲ್ಲೇಶನ ! ಕರೆತಾರೆ ನೀರೋ !!

ಪದ – ೩

ಕೋಲು ಕೋಲಿನ ಕೋಲು ಕೋಲೆನಾ ಕೋಲು
ಕೋಲು ಕೋಲೇ ಕೋಲನಾಡುವ ಪುರದಕಲ್ಲೇಶನೆ
ಕೋಲು ಕೋಲೇ !!
ಕಲ್ಲೇಶಲಿಂಗನು ಕಾಣಿಸಿಕೊಳ್ಳಲಿನ್ನೇನಾ ಮಾಡಲೇ !
ಕಂಡುಮಿಂಚಾದನು ಸಂಬೆತಾ ಶಿವನು ಇನ್ನೇನಾ ಮಾಡಲೇ

ಕೊರಳು ಕೆಂಜೆದೆಬಾಳ ! ನೇತ್ರಾ ಮೌನಿನ ಬಾರಿನ್ನೇನಾ
ಚಿಕ್ಕ ತುರುಳೆ ಹೆಣ್ಣಿಗಾಗಿ ತಲೆಜಡಗನ್ಯಾವನ್ನೇನಾ ಮಾಡಲಿಯನ್ನ
ಹರಳು ಮಂಚಕೆ ಕರವೆದಾಡಿದನ್ನೇನ್ನಾ ಮಾಡಲೆ
ವರ ಪದ್ಮ ಹಸ್ತಿವ ಕಂಚಿದ ಮ್ಯಾಲಿರಿಸ್ಯಾ ನಿನ್ನಾ ಮಾಡಲೆ
ಯನ್ನ ಪರ ಪ್ರಾಣೇಶನ ನಿಲಿಸಿ ಮಾತಾಡಲಿನ್ನೆನಾ ಮಾಡಲಿ !
ಜನರನೇ ಕೇಳ್ವ ಇನಕೋಟೆ ತೇಜಿಗಿನ್ನೇನಾ ಮಾಡಲೇ
ಯನ್ನ ಘನತೊಂಬೆ ಕುಚಗಳ ಕೊನೆಗೆಳೆಂದೊತ್ಯಾವಿನ್ನೇನ
ಮಾಡಲಿ !
ತಚ್ಚಟ್ಟಿಗೊಂಡಿತು ಮನಕೇಳ್ನೋಡಿತ್ತೇನಾ ಮಾಡಲಿ
ಶಿವನಾ ಮೆಬ್ಬುಮದ ಕಾಮು ಹಬ್ಬಿತ್ತು ಮೈಯ್ಯಾಳಿಗಿನ್ನೇನಾ ಮಾಡಲೇ
ಧರೆಯೊಳಗೊಬ್ಬ ಸಿಡುಕ ಪ್ರಚಂಡಗಿನ್ನೇನ ಮಾಡಲೆ
ಶಿವನಾ ಮುಂದೆ ಮಾಚಿಕೊಂಡು ! ಹಚ್ಚು ತೆಲೈತಿನ್ನೇನಾ ಮಾಡಲೆ
ಧರೆಯೊಳಗೊಬ್ಬ ಪುರದಾದಿ ಪುಂಡಗಿನ್ನೇನಾ ಮಾಡಲೆ
ಶಿವನ ಭೂಮಂಡಲದೊಳಗೆಲ್ಲಾ ! ಶುಭನಿಗೆ ಬಾರಿನ್ನೇನಾ ಮಾಡಲೇ !!
ಮತ್ತು
ಕರ್ಪೂರಾರ್ಗಂದ ಕೋಳ್ ಗುಪ್ಪೆ ತೋರುದಯ್ಯಾನಾ !
ಮೇಲ್ಲುಪ್ಪರಿಗೆ ಒಂದು ಸ್ಥಾನ ಪುರದ ಕಲ್ಲಯ್ಯ

ಒಟ್ಟಾರೆ ಕಲ್ಲೇದೇವರಪುರ ಪರಿಸರದಲ್ಲಿ ಕಂಡುಬರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳು ವಿಶಿಷ್ಟ ಸಾಂಸ್ಕೃತಿಕ ಪರಂಪರೆಯೋಪಾದಿಯಲ್ಲಿ ಉಳಿದುಬಂದಿವೆ. ಈ ಪರಿಸರದ ನಂಬಿಕೆ ಮತ್ತು ಆಚರಣೆಗಳು ಜಾತಿ ಹಬ್ಬ ಹರಿದಿನಗಳು ಜನಪದರ ಅಥವಾ ಜನಸಾಮಾನ್ಯರ ಸಾಂಸ್ಕೃತಿಕವಾಗಿ ಪ್ರತಿಬಿಂಬಿತವಾಗಿದೆ. ಹಾಗಾಗಿ ಪ್ರಸ್ತುತ ಅಧ್ಯಯನಕ್ಕಾಗಿ ನಿರ್ವಹಿಸಿದ ಕ್ಷೇತ್ರಕಾರ್ಯದಲ್ಲಿ ಕಂಡುಬರುವ ಸಾಂಸ್ಕೃತಿಕ-ಧಾರ್ಮಿಕ ಆಚರಣೆಗಳನ್ನು ಪುರಾತತ್ವ ಅಧ್ಯಯನದ ನೆಲೆಯಲ್ಲಿ ಸಮೀಕರಿಸಿಕೊಂಡು ಹೇಳುವ ಕಿರು ಪ್ರಯತ್ನವನ್ನು ಮಾಡಲಾಗಿದೆ.

ಕೊನೆ ಟಿಪ್ಪಣಿ

೧. ರಮೇಶ ನಾಯಕ, ೨೦೧೫, ಯಾದಗಿರಿ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೩೫೧

೨. ಸೋಮಶೇಖರ್ ಎಸ್.ವೈ. (ಸಂ), ೨೦೧೦. ಜಗಲೂರು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೯೭

೩. ಧ್ರುವರಾಜ ನಾ, ಗದಗಕರ, ೧೯೯೯ ದೇಗುರಥಶಿಲ್ಪ, ಪು. ೩೫.

೪. ಸೋಮಶೇಖರ್ ಎಸ್.ವೈ. (ಸಂ), ಜಗಲೂರು ಪುಟ ೧೦೦.

೫. ಅದೇ ಪುಟ ೧೦೦-೧೦೧

೬. ಅದೇ ಪುಟ ೧೦೧

೭. ಎಫಿಗ್ರಾಫಿಯಾ ಕರ್ನಾಟಕ, ಸಂಪುಟ - ೧೧, ಜಗಲೂರು - ೧೪

೮. ಸೋಮಶೇಖರ್ ಎಸ್.ವೈ. (ಸಂ), ಪೂರ್ವೋಕ್ತ ಪುಟ ೧೦೧-೧೦೨

೯. ಅದೇ ಪುಟ ೬೮

೧೦. ವಿರೂಪಾಕ್ಷಿ ಪೂಜಾರಹಳ್ಳಿ, ಚಿನ್ನಹಗರಿ ನದಿ ಪರಿಸರದ ಪ್ರಾಚ್ಯವಶೇಷಗಳು, ಒಂದು ಶೋಧನೆ, ಇತಿಹಾಸ ದರ್ಶನ, (ಪು)-೨೦.

೧೧. ಅದೇ ಪು. ೨೦

೧೨. ಗೋಪಾಲ ಆರ್ (ಸಂ) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೫, ಪುಟ ೨೪.

೧೩. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ ಪುಟ ೨೧.

❖❖❖

ಅಧ್ಯಾಯ: ಐದು

ಸಮಾರೋಪ

ಯಾವುದೇ ಒಂದು ಪರಿಸರದ ಸ್ಥಳೀಯ ಇತಿಹಾಸವನ್ನು ತಿಳಿಯಬೇಕಾದರೆ ತಳಮಟ್ಟದ ಅಧ್ಯಯನ ಕೈಗೊಳ್ಳುವುದು ಅವಶ್ಯಕವಾಗಿದೆ. ಗ್ರಾಮ, ಹೋಬಳಿ, ತಾಲೂಕು ಹಾಗೂ ಜಿಲ್ಲೆಗಳ ಮಟ್ಟದಲ್ಲಿ ನಡೆಯುತ್ತಿರುವ ಸ್ಥಳೀಯ ಸಂಶೋಧನೆಗಳು ಇತಿಹಾಸ ಅಧ್ಯಯನದಲ್ಲಿ ಮಹತ್ತರವಾಗಿವೆ. ಸ್ಥಳೀಯ ಅಧ್ಯಯನವು ರಾಜಕೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳ ದಾಖಲೆ ಹಾಗೂ ಅವುಗಳ ವಿಶ್ಲೇಷಣಾತ್ಮಕ ಅಧ್ಯಯನವಾಗಿದೆ.

ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಪ್ರಸ್ತುತ ಸಂಪ್ರಬಂಧದಲ್ಲಿ ಕಲ್ಲೇದೇವರಪುರ ಪರಿಸರದ ಸ್ಥಳೀಯ ಇತಿಹಾಸ ಹಾಗೂ ಸಂಸ್ಕೃತಿಯನ್ನು ಸಮಗ್ರವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ದಾವಣಗೆರೆ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ಜಿಲ್ಲೆ. ಜಿಲ್ಲೆಯ ಜಗಲೂರು ತಾಲೂಕು ಇತರೆ ತಾಲೂಕುಗಳಿಗಿಂತ ಭೌಗೋಳಿಕವಾಗಿ ಮತ್ತು ಪ್ರಾಕೃತಿಕವಾಗಿ ವಿಭಿನ್ನವಾದದ್ದು. ಇಲ್ಲಿನ ಬೆಟ್ಟಗುಡ್ಡ, ಕಲ್ಲು, ಮಣ್ಣು, ಕೆರೆ, ಮರಗಿಡಗಳು ಇತರೆಗಿಂತ ತುಂಬಾ ವಿಭಿನ್ನ ಹಾಗೂ ವೈಶಿಷ್ಟಮಯವಾದದ್ದು.

ಇಂಥ ಭೌಗೋಳಿಕ ಪರಿಸರದಲ್ಲಿ ಪ್ರಾಗಿತಿಹಾಸ ಕಾಲದಿಂದ ಹಿಡಿದು ಆಧುನಿಕ ಕಾಲಾವಧಿಯವರೆಗೂ ನಿರಂತರವಾಗಿ ಮಾನವನ ಸಾಂಸ್ಕೃತಿಕ ಪರಂಪರೆಯನ್ನು ಕೊಂಡಿಯೋಪಾದಿಯಲ್ಲಿ ಸಾಗಿಬಂದಿರುವುದು ಗಮನಾರ್ಹ ಸಂಗತಿಯಾಗಿದೆ. ಶಿಲಾಯುಗ ಕಾಲದಿಂದ ಮಾನವ ಇಲ್ಲಿನ ನೈಸರ್ಗಿಕ ಸಂಪತ್ತನ್ನು ವ್ಯವಸ್ಥಿತವಾಗಿ ಬಳಸಿ ಜೀವನ ಸಾಗಿದ್ದ ಎಂಬುದು ಸಾಂಸ್ಕೃತಿಕ ಅವಶೇಷಗಳು ಎಂದು ದೃಢವಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಜನವಸತಿಯಾಗಿತ್ತೆಂದು ಸಂಶೋಧನೆಗಳಿಂದ ಸಾಬೀತಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಸಂಗೆನಹಳ್ಳಿ ಕೆರೆಯು ಹಳೆಯ ಶಿಲಾಯುಗ ಹಾಗೂ ನವಶಿಲಾಯುಗದ ಪ್ರಸಿದ್ಧ ನೆಲೆಯಾಗಿದ್ದುದು ಸ್ಪಷ್ಟವಾಗುತ್ತದೆ.

ಚಾರಿತ್ರಿಕವಾಗಿ ಹಲವು ಪ್ರಾಚೀನ ಕುರುಹುಗಳನ್ನು ಹೊಂದಿರುವ ಈ ಪರಿಸರವು ಕೆಲವು ರಾಜಮನೆತನಗಳ ಆಳ್ವಿಕೆಯ ಕಾರ್ಯಕ್ಷೇತ್ರವಾಗಿತ್ತು. ಈ ಪರಿಸರವು ವಿವಿಧ ಚಾರಿತ್ರಿಕ ಕಾಲಘಟ್ಟಗಳಾದ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ನೊಳಂಬ, ಹೊಯ್ಸಳ, ವಿಜಯನಗರ ಅರಸರು ಮತ್ತು ಚಿತ್ರದುರ್ಗ ಪಾಳೇಗಾರರು ಸೇರಿದಂತೆ ಮುಂತಾದವರ ಆಳ್ವಿಕೆಗೆ ಒಳಪಟ್ಟಿರುವುದು ಗಮನಾರ್ಹ ಸಂಗತಿ.

ಕಲ್ಲೇದೇವರಪುರ ಪರಿಸರದಲ್ಲಿ ಪ್ರಚಲಿತವಿರುವ ಸಾಂಸ್ಕೃತಿಕ-ಧಾರ್ಮಿಕ ಆಚರಣೆಗಳು ಇಲ್ಲಿನ ಸಂಸ್ಕೃತಿ, ಜನರ ಆಚಾರ-ವಿಚಾರ ಮೊದಲಾದ ಸಾಂಸ್ಕೃತಿಕ ವಿಚಾರಗಳನ್ನು ತಿಳಿಸುತ್ತವೆ. ಈ ಆಚರಣೆಗಳು ಕಲ್ಯಾಣ ಚಾಲುಕ್ಯರ ಕಾಲದಿಂದಲೂ ನಡೆದುಕೊಂಡು ಬಂದಿವೆ ಎಂಬುದು ಶಾಸನಗಳ ಹಿನ್ನೆಲೆಯಿಂದ ಸ್ಪಷ್ಟವಾಗುತ್ತದೆ. ಇಂದಿಗೂ ಜಾತ್ರೋತ್ಸವ ಸಂದರ್ಭದಲ್ಲಿ ಶ್ರೀಸಾಮಾನ್ಯರು ಭಕ್ತಿಯ ಪ್ರತಿರೂಪವಾಗಿ ಪಾಲ್ಗೊಳ್ಳುವುದನ್ನು ಗುರುತಿಸಲಾಗಿದೆ. ಶ್ರಾವಣಮಾಸ, ಕಾರ್ತೀಕಮಾಸದ ಆಚರಣೆಗಳು ಇಲ್ಲಿನ ಧಾರ್ಮಿಕ ಆಚರಣಾಂಶಗಳನ್ನು ದಾಖಲಿಸಲಾಗಿದೆ. ಮಾನವನ ಸಂಸ್ಕೃತಿಯ ವಿಕಾಸದಲ್ಲಿ ಕೆರೆ ವ್ಯವಸ್ಥೆಯನ್ನು ಆಧರಿಸಿದ ನೀರಿನ ಪಾತ್ರ ಪ್ರಧಾನವೆಂದು ತಿಳಿದುಬರುತ್ತದೆ.

ಕಲ್ಲೇದೇವರಪುರ ಪರಿಸರದ ದೇವಾಲಯ, ಮೂರ್ತಿಶಿಲ್ಪಗಳು, ವೀರಗಲ್ಲುಗಳು ಚಾಲುಕ್ಯರು, ಹೊಯ್ಸಳ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲಘಟ್ಟದವು. ಸ್ಮಾರಕಶಿಲ್ಪಗಳು ಗತಕಾಲದ ಮಾನವನ ಚಾರಿತ್ರಿಕ ಅಂಶಗಳನ್ನು ಯುದ್ಧ ಮತ್ತು ವೀರತ್ವ, ದೇಶಭಕ್ತಿ, ಸಮುದಾಯಗಳ ಚರಿತ್ರೆ, ಗ್ರಾಮ ಸಂಸ್ಕೃತಿ ಮುಂತಾದ ಅಂಶಗಳನ್ನು ತಿಳಿಸಿಕೊಡುತ್ತವೆ. ಈ ಕಲ್ಲೇದೇವರಪುರ ಪರಿಸರದಲ್ಲಿನ ದೇವಾಲಯಗಳ ವಾಸ್ತುಶೈಲಿ ಮತ್ತು ಶಿಲ್ಪಗಳ ಕುರುಹುಗಳು ಇವೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿನ ಗತಕಾಲದ ಮಾನವನ ಸಾಂಸ್ಕೃತಿಕ ಬದುಕಿನ ಹಾಗೂ ವಿಭಿನ್ನ ಬದುಕಿನ ಆಯಾಮಗಳ ಕೈಗನ್ನಡಿಗಳೆನ್ನಬಹುದು.

ಶಾಸನ, ಸಾಹಿತ್ಯ, ಸ್ಮಾರಕ ಶಿಲ್ಪಗಳಿಂದ ಇತಿಹಾಸಕ್ಕೆ ಪರಿಪೂರ್ಣತೆ ದೊರೆಯುವುದಿಲ್ಲ. ಇದಕ್ಕೆ ಪೂರಕವಾಗಿ ಮೌಖಿಕ ಸಂಪ್ರದಾಯ, ನಂಬಿಕೆ ಮತ್ತು ಆಚರಣೆಗಳು ಇಂದಿಗೂ ಜೀವಂತವಾಗಿರುವ ಐತಿಹಾಸಿಕವಾದ ಕುರುಹುಗಳು. ಈ ಬಗೆಯ ಸಾಂಸ್ಕೃತಿಕ ವಿಶೇಷತೆಗಳಿಂದ ಚರಿತ್ರೆಯ ನಿಜವಾದ ಚಿತ್ರಣ ಸಾಧ್ಯ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಪರಿಸರದಲ್ಲಿನ ಕಲ್ಲೇಶ್ವರ ದೇವಾಲಯ, ತ್ರಿಕೂಟಲಿಂಗ ದೇವಾಲಯ, ವೀರಭದ್ರ ದೇವಾಲಯ ಆಂಜನೇಯ ಪಾಂಡುರಂಗ-ರುಕ್ಮಿಣಿ ಮುಂತಾದ ದೇವಾಲಯಗಳ ಮತ್ತು ಅವುಗಳ ಆರಾಧಕರು ಅನೂಚಾನವಾಗಿ ಅಳವಡಿಸಿಕೊಂಡು ಆಚರಿಸುತ್ತಿರುವಂತಹ ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಪರಂಪರೆಯು ವಿಶಿಷ್ಟವಾದದ್ದು.

ಒಟ್ಟಿನಲ್ಲಿ 'ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯ ಈ ಸಂಪ್ರಬಂಧದಲ್ಲಿ ಪ್ರಾಗಿತಿಹಾಸದಿಂದ ಆಧುನಿಕ ಕಾಲದವರೆಗಿನ ಮಾನವನ ಸಾಂಸ್ಕೃತಿಕ ಸಂಗತಿಗಳನ್ನು, ಸಾಹಿತ್ಯಿಕ, ಪುರಾತತ್ವೀಯ, ಚಾರಿತ್ರಿಕ, ಶಾಸನಾತ್ಮಕ ಹಾಗೂ ಮೌಖಿಕ ಆಧಾರಗಳ ಹಿನ್ನೆಲೆಯಲ್ಲಿ ವಿವೇಚಿಸಿ, ವಿಶ್ಲೇಷಿಸುವ ಸೂಕ್ಷ್ಮ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯ ಆಧಾರಿತವಾದ ಈ ಅಧ್ಯಯನಕ್ಕೆ ಆಕರಗಳನ್ನು ವಸ್ತುನಿಷ್ಟವಾಗಿ ಬಳಸಿಕೊಳ್ಳುವುದರ ಮೂಲಕ ಕಲ್ಲೇದೇವರಪುರ ಪರಿಸರದ ಸಾಂಸ್ಕೃತಿಕ ಇತಿಹಾಸ ಸಮಗ್ರ ಅಧ್ಯಯನಕ್ಕೆ ಒತ್ತು ನೀಡಲಾಗಿದೆ. ಈ ಪ್ರದೇಶದಲ್ಲಿ ಲಭ್ಯವಾಗಿರುವ ಪ್ರಾಚ್ಯಾವಶೇಷಗಳು, ಛಾಯಾಚಿತ್ರವನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ, ಕಲ್ಲೇದೇವರಪುರದ ಸ್ಥಳೀಯ ಇತಿಹಾಸವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿ ಸೀಮಿತವಾಗಿದ್ದರೂ ಇದರಿಂದ ಇತರೆ ಪ್ರದೇಶಗಳ ತುಲನಾತ್ಮಕ ಅಧ್ಯಯನವನ್ನು ಕೈಗೊಳ್ಳಬಹುದು ಎಂಬುದನ್ನು ಈ ಪ್ರೌಢಪ್ರಬಂಧವು ತೆರೆದಿಡುತ್ತದೆ.

❖❖❖

ಪರಾಮರ್ಶನ ಗ್ರಂಥಗಳು

ಅಣ್ಣಿಗೇರಿ ಎಂ.ಆರ್. ಶೇಷಶಾಸ್ತ್ರಿ (ಸಂ) ೧೯೮೨, ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

ಅಂಬಳಿಕೆ ಹಿರಿಯಣ್ಣ (ಸಂ) ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣ ಎಂ.ಹೆಚ್. ೧೯೫೭, ಕರ್ನಾಟಕದ ಪೂರ್ವ ಚರಿತ್ರೆ, ಕನ್ನಡ ಸಂಶೋಧನಾ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಖಂಡೋಬರಾವ್ ಹೆಚ್. ೨೦೦೨, ನಾಣ್ಯ ಕರ್ನಾಟಕ, (ವಸ್ತುವಿನಿಮಯದಿಂದ ಕ್ರಿ.ಶ. ೨೦೦೦ ದವರೆಗೆ) ಮಗರ್ ಪಬ್ಲಿಕೇಶನ್ಸ್ ಸಹನಾ, ಗಾಂಧಿನಗರ ಮುಖ್ಯರಸ್ತೆ, ಶಿವಮೊಗ್ಗ.

ಗಿರಿಜಾ ಟಿ, ೨೦೦೧, ದಾವಣಗೆರೆ–ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ದಾವಣಗೆರೆ.

ಗೋಪಾಲ ಬಾ.ರಾ ಮತ್ತು ವೆಂಕಟಚಲಶಾಸ್ತ್ರಿ (ಸಂ) ೧೯೭೫, ಸಂಶೋಧನಾ ಲೇಖನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಗೋಪಾಲ ಬಾ.ರಾ. ೧೯೯೬, ಇತಿಹಾಸ ಮತ್ತು ಸಿದ್ದಾಂತ, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಗೋಪಾಲರಾವ್ ಎಚ್.ಎಸ್, ೨೦೦೧, ಶಾಸನ ಸಂಕಲನ, ಅಳಿಲು ಸೇವಾ ಸಂಸ್ಥೆ ಬಸವನ ಗುಡಿ, ಬೆಂಗಳೂರು.

ಗೋಪಾಲ್ ಆರ್. ೨೦೦೫, ಚಿತ್ರದುರ್ಗ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಚೆನ್ನಕ್ಕ ಪಾವಟೆ, ೨೦೦೩, ಶಾಸನ ಸಂಜೀವಿನಿ, ಚೆನ್ನಗಂಗಾ ಪ್ರಕಾಶನ, ಧಾರವಾಡ.

ಚಿದಾನಂದಮೂರ್ತಿ ಎಂ. ೨೦೦೨, ಕನ್ನಸ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕ್ರಿ.ಶ. ೪೫೦–೧೧೮೦, ಸಪ್ನಬುಕ್ ಹೌಸ್, ಬೆಂಗಳೂರು.

ತಿಪ್ಪೇರುದ್ರಪ್ಪ ಹೆಚ್. ೧೯೯೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

ದೇಸಾಯಿ ಪಿ.ಬಿ. ೧೯೬೧, ಕನ್ನಡ ನಾಡಿನ ಶಾಸನಗಳು, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪುಟ್ಟಣ್ಣ ಎಂ.ಎಸ್, ೧೯೯೭, ಚಿತ್ರದುರ್ಗ ಪಾಳೆಯಗಾರರು, ಕಾವ್ಯಾಲಯ ಪ್ರಕಾಶಕರು, ಜಯನಗರ, ಮೈಸೂರು.

ಪ್ರಭಾಕರ ಎಂ.ಎನ್. ೨೦೧೧, ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಭಟ್‌ಸೂರಿ ಕೆ.ಜಿ. ೨೦೦೯, ಕರ್ನಾಟಕ ಶಾಸನ ಸಂಶೋಧನೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಮಂಜುನಾಥ ಎಂ.ಜಿ. ೨೦೦೯, ಕರ್ನಾಟಕ ಸಾಂಸ್ಕೃತಿಕ ಇತಿಹಾಸ, ಸುಮುಖ ಪ್ರಕಾಶನ, ಬೆಂಗಳೂರು.

ಮಹಾಂತೇಶ ಎನ್.ಎಸ್. ೨೦೦೮, ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ರೇಖಾ ಪ್ರಕಾಶನ, ಚಿತ್ರದುರ್ಗ.

ಮೂರ್ತಿ ಕೆ.ಎಸ್.ಎಂ. ೧೯೯೮, ಕರ್ನಾಟಕ ಕಲೆ ಮತ್ತು ವಾಸ್ತುಶಿಲ್ಪ, ರಂಜಿತ ಪ್ರಕಾಶನ, ತುಮಕೂರು.

ರಮೇಶ್ ನಾಯಕ (ಸಂ), ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ರಮೇಶ್ ಸ.ಚಿ. ೨೦೧೦, ಕರ್ನಾಟಕ ಜನಪದ ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ರಾಜಶೇಖರ್ ಎಸ್. ೧೯೮೮, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸಂಜಾತ ಪಬ್ಲಿಕೇಶನ್ಸ್, ಧಾರವಾಡ.

ರಾಮಚಂದ್ರ ರಾವ್, ಎನ್.ಕೆ. ೧೯೭೫, ಮೂರ್ತಿಶಿಲ್ಪ-ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಮಯ್ಯಂಗಾರ್, ೧೯೯೬, ಪ್ರಾಚೀನ ಭಾರತದ ಹಿಂದೂ ರಾಜ್ಯಗಳ ಬಸವನಗುಡಿ ಬೀದಿ, ಅಡ್ಡರಸ್ತೆ, ಬೆಂಗಳೂರು.

ರಾಜಶೇಖರಪ್ಪ ಬಿ. ೨೦೧, ದುರ್ಗಶೋಧನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ರಾಜಶೇಖರಪ್ಪ ಬಿ. ೨೦೦೧, ಇತಿಹಾಸ ಕಥನ, ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು.

ರಾಜಾರಾಮ್ ಹೆಗಡೆ (ಸಂ) ೨೦೦೩, ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಲಕ್ಷ್ಮಣ ಅಳವಂಡಿ, ೧೯೯೭, ಇತಿಹಾಸಕೋಶ, (ಭಾಗ-೧ ಪ್ರಾಚೀನ ಕರ್ನಾಟಕ) ಕಾವ್ಯಶ್ರೀ ಪ್ರಕಾಶನ, ಕೊಪ್ಪಳ ಜಿಲ್ಲೆ.

ಲಕ್ಷ್ಮಣ್ ತೆಲಗಾವಿ (ಸಂ) ೨೦೦೧, ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಲಕ್ಷಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಾಸುದೇವ ಬಡಿಗೇರ (ಸಂ) ೨೦೦೮, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೨, ಹಾನಗಲ್ಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿರೂಪಾಕ್ಷ ಪೂಜಾರಹಳ್ಳಿ, ೨೦೦೬, ಕಾಮಗೇತಿ ವಂಶಜರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿರೂಪಾಕ್ಷ ಪೂಜಾರಹಳ್ಳಿ, ೨೦೦೨, ಚಿತ್ರದುರ್ಗ, ಜಿಲ್ಲೆಯ ಬುಡಕಟ್ಟು, ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವೆಂಕಟರತ್ನ ಎ.ಬಿ. ಮತ್ತು ಪದ್ಮ ಎಂ.ಬಿ. ೧೯೯೧, ಇತಿಹಾಸ ಸಂಶೋಧನಾ ಮಾರ್ಗ, ಪ್ರಿಂಟಿಂಗ್ ಪಬ್ಲಿಷಿಂಗ್ ಕಂಪನಿ, ಲಿಮಿಟೆಡ್, ಬೆಂಗಳೂರು.

ಷೇಕ್ ಅಲಿ ಬಿ ಮತ್ತು ಇತರರು, ೧೯೭೬, ಇತಿಹಾಸ ಪರಿಚಯ ಭಾಗ-೨, (ಭಾರತೀಯ ಸಂಸ್ಕೃತಿಯ ರೂಪರೇಷೆಗಳು) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಿವರಾಮ ಕಾರಂತ, ೧೯೬೯, ಚಾಲುಕ್ಯ ವಾಸ್ತು ಶಿಲ್ಪ, ಮೈಸೂರು ರಾಜ್ಯದ ಲಲಿತಕಲಾ ಅಕಾಡೆಮಿ, ಮೈಸೂರು.

ಶಿವರಾಮ ಕಾರಂತ, ೧೯೭೫, ಭಾರತೀಯ ಶಿಲ್ಪ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶಿವತಾರಕ್ ಕೆ.ಬಿ. ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶಿರೂರು ಬಿ.ವಿ. ೨೦೦೮, ಸಂಶೋಧನೆಯ ಸ್ವರೂಪ, ಅನ್ನಪೂರ್ಣ ಪ್ರಕಾಶನ ಹುಬ್ಬಳ್ಳಿ.

ಶೇಷಶಾಸ್ತ್ರಿ ಆರ್. ೧೯೮೨, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು.

ಶೇಷಶಾಸ್ತ್ರಿ ಆರ್. ೧೯೮೨, ಶಾಸನ ಪರಿಚಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶ್ರೀನಿವಾಸ ಪಾಡಿಗಾರ, ೧೯೮೭, ಪುರಾತತ್ವ ಪರಿಚಯ ಗಾಯಿತ್ರಿ ಪ್ರಕಾಶನ, ಧಾರವಾಡ.

ಸದಾಶಿವಪ್ಪ ಕುಂಬಾ, ೧೯೯೦, ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಮೂಲತೇಷ ಪ್ರಕಾಶನ, ಕುಂಟೂರು.

ಸದಾಶಿವಪ್ಪ ಕುಂಬಾ, ೧೯೯೨, ಹರಪ್ಪನಹಳ್ಳಿ ಪಾಳೆಯಗಾರರು, ಮಾಲತೇಶ ಪ್ರಕಾಶನ, ಹರಪ್ಪನಹಳ್ಳಿ.

ಸಿ.ಪಿ.ಕೆ. ೨೦೦೧, ಶಾಸನಶಾಸ್ತ್ರ ಪ್ರವೇಶ, ಚೇತನ್ ಬುಕ್‌ಹೌಸ್, ಮೈಸೂರು.

ಸುರೇಶ ಬಿ, ೨೦೦೯, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ದೇವಾಲಯಗಳು, ಸಂಶೋಧನ ಪ್ರಕಾಶನ, ಬಾಲೆನಹಳ್ಳಿ, ಚಳ್ಳಕೆರೆ.

ಸೂರ್ಯನಾಥ ಕಾಮತ್, ೨೦೦೮, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಸೋಮಶೇಖರ್ ಎಸ್.ವೈ. ೨೦೧೦, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೪, ಜಗಲೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಸೋಮಶೇಖರ್ ಎಸ್.ವೈ. ೨೦೧೭, ಕರ್ನಾಟಕ ದೇವಾಲಯ ಕೋಶ: ಚಿತ್ರದುರ್ಗ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಗ್ಯಾಸೆಟಿಯರ್‌ಗಳು

ಎಫಿಗ್ರಾಫಿಯ ಕರ್ನಾಟಕ ಸಂಪುಟ-೧೧

ಸೂರ್ಯನಾಥ ಕಾಮತ್ (ಸಂ) ೧೯೮೪, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೧, ಕರ್ನಾಟಕ ಸರ್ಕಾರ, ಬೆಂಗಳೂರು.

ಸೂರ್ಯನಾಥ ಕಾಮತ್ (ಸಂ) ೧೯೮೬, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೩, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು.

ಪಿಹೆಚ್.ಡಿ. ಪ್ರಕಟಿತ ಪ್ರಬಂಧಗಳು

ತಿಪ್ಪೇಸ್ವಾಮಿ ಹೆಚ್. ೨೦೦೦, ದಾವಣಗೆರೆ ಜಿಲ್ಲೆಯ ದೇವಾಲಯಗಳು, ಅಪ್ರಕಟಿತ ಪಿಹೆಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಮತಿ ಜಯಮ್ಮ ಹೆಚ್. ೨೦೦೨, ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪಿಹೆಚ್,ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ತಿಪ್ಪೇಸ್ವಾಮಿ ಎಸ್, ೨೦೦೬, ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ, ಅಪ್ರಕಟಿತ ಪಿಹೆಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಮತಿ ಮಹಾನಂದ ಎಂ.ಗೊಂದಿ, ೨೦೦೮, ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ, ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಮಂಜಣ್ಣ ಪಿ.ಬಿ. ೨೦೦೯, ಕಣಕುಪ್ಪೆ ಪರಿಸರ : ಚಾರಿತ್ರಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶ್ರೀಮತಿ ಶಕುಂತಲಾ ಎಸ್. ೨೦೦೯, ಚಿತ್ರದುರ್ಗ ಪಾಳೇಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಒಂದು ಅಧ್ಯಯನ, ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.


ಸಿದ್ದಪ್ಪ ಜಿ, ೨೦೧೧, ಜಗಲೂರು ಪರಿಸರ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

❖❖❖

ವಕ್ತೃಗಳ ವಿವರ


ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಸ್ಥಳ
೧.	ಕಲ್ಲಪ್ಪ	೭೮	ಶಿಕ್ಷಕರು	ಕಲ್ಲೇದೇವರಪುರ
೨.	ಜಿ. ತಿಮ್ಮಪ್ಪ	೫೮	ವ್ಯವಸಾಯ	ಕಲ್ಲೇದೇವರಪುರ
೩.	ಸಣ್ಣ ಪಾಲಯ್ಯ	೬೨	ವ್ಯವಸಾಯ	ಕಲ್ಲೇದೇವರಪುರ
೪.	ಕಲ್ಲೇಶ್ ಎಂ.	೫೩	ವ್ಯವಸಾಯ	ಕಲ್ಲೇದೇವರಪುರ
೫.	ಮಾರಣ್ಣ ಸಿ	೫೦	ಕೂಲಿ	ಕಲ್ಲೇದೇವರಪುರ
೬.	ಶೇಖರಯ್ಯ	೪೭	ವ್ಯವಸಾಯ	ಕಲ್ಲೇದೇವರಪುರ

ಕಲ್ಲೇಶ್ವರ ದೇವಾಲಯದ ತಲಾನಕ್ಷೆ




KARNATAKA
DISTRICT
N
MAHARASHTRA
TELANGANA
ANDHRA PRADESH
TAMIL NADU
KERALA
GOA
BIDAR
Bidar
GULBARGA
Kalaburagi
VIJAYAPURA
Vijayapura
YADGIR
Yadgir
BELGAUM
Belagavi
BAGALKOT
Bagalkot
RAICHUR
Raichur
DHARWAD
Dharwad
GADAG
Gadag
KOPPAL
Koppal
BELLARY
Ballari
UTTARA KANNADA
Karwar
HAVERI
Haveri
DAVANGERE
Davangere
CHITRADURGA
Chitradurga
SHIVAMOGGA
Shivamogga
UDUPI
Udupi
CHIKKAMAGALURU
Chikkamagaluru
TUMAKURU
Tumakuru
CHIKKABALLAPUR
Chikkaballapura
KOLAR
Kolar
BENGALURU RURAL
Bengaluru
BENGALURU
HASSAN
Hassan
DAKSHINA KANNADA
Mangaluru
MANDYA
Mandya
RAMANAGARA
Channapatna
Coorg
KODAGU
MYSURU
Mysuru
CHAMARAJANAGAR
Chamarajanagar
LEGEND
State Boundary
District Boundary
State Headquarter
District Headquarter
Map not to Scale
Copyright © 2017 www.mapsofindia.com


ದಾವಣಗೆರೆ
Davangere
ಹರಪನಹಳ್ಳಿ
Harpanahalli
ಜಗಳೂರು
Jagalur
ಹರಿಹರ
Harihar
ದಾವಣಗೆರೆ
Davangere
ಹೊನ್ನಾಳಿ
Honnali
Channagiri


ಜಗಲೂರು ತಾಲೂಕು
ಬಸವನ ಕೋಟೆ
ಕಣಕುಪ್ಪೆ
ಜಗಲೂರು

ಕೃಪೆ - ಜಗಲೂರು.



ಕಲ್ಲೇಶ್ವರ ದೇವಾಲಯ



ಕಲ್ಲೇಶ್ವರ ಸ್ವಾಮಿ ಹೊಸ ರಥ



ಕಲ್ಲೇಶ್ವರ ಸ್ವಾಮಿ ಹಳೆಯ ರಥ



ಕಲ್ಲೇಶ್ವರ ದೇವಾಲಯದ ಮಹಾ ಪ್ರವೇಶದ್ವಾರ



ಕಲ್ಲೇಶ್ವರ ದೇವಾಲಯದ ಗೋಪುರ ಹಾಗೂ ಉಯ್ಯಾಲೆ ಕಂಬ



ಕಲ್ಲೇಶ್ವರ ದೇವಾಲಯದ ನವರಂಗ



ಕಲ್ಲೇಶ್ವರ ದೇವಾಲಯದ ನವರಂಗದಲ್ಲಿರುವ ಪುಟ್ಟ ನಂದಿ



ಕಲ್ಲೇಶ್ವರ ವಿಗ್ರಹ



ಮಹಾಮಂಟಪದಲ್ಲಿರುವ ಶೈವ ದ್ವಾರಪಾಲಕರು



ಕಲ್ಲೇಶ್ವರ ದೇವಾಲಯದ ವಿಜಯನಗರೋತ್ತರ ಮಹಾಮಂಟಪ




ಹೊಯ್ಸಳ ಶೈಲಿಯ ಕಂಬ



ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿರುವ ದೊಡ್ಡ ನಂದಿ ವಿಗ್ರಹ



ಕಲ್ಲೇಶ್ವರ ದೇವಾಲಯದ ಉಗ್ರಾಣ



ತ್ರಿಕೂಟ ಲಿಂಗ ದೇವಾಲಯದಲ್ಲಿರುವ ಸಪ್ತಮಾತೃಕೆಯರ ಶಿಲ್ಪಗಳು

ತ್ರಿಕೂಟ ಲಿಂಗ ದೇವಾಲಯದ ಗರ್ಭಗೃಹದಲ್ಲಿರುವ ಮೂರು ಶಿವ ಲಿಂಗಗಳು









ಕಲ್ಲೇದೇವರಪುರದ ಆಂಜನೇಯ ಸ್ವಾಮಿ



ಕಲ್ಲೇಶ್ವರ ಮತ್ತು ಗೌರಮ್ಮ ಮೂರ್ತಿಶಿಲ್ಪಗಳು



ಹಿಟ್ಟಿನ ಮಲ್ಲಮ್ಮನ ವಿಗ್ರಹ



ಕಲ್ಲೇಶ್ವರ ದೇವಾಲಯದಲ್ಲಿರುವ ಶಾಸನ

ಕಲ್ಲೇಶ್ವರ ದೇವಾಲಯದಲ್ಲಿರುವ ವೀರಗಲ್ಲುಗಳು










ಕಲ್ಲೇಶ್ವರ ದೇವಾಲಯದಲ್ಲಿರುವ ನವಗ್ರಹಗಳು



ಕಲ್ಲೇಶ್ವರ ದೇವಾಲಯದಲ್ಲಿರುವ ಪಾಂಸನ ಅಥವಾ ಕದಂಬ ನಾಗರ ಶೈಲಿಯ ಶಿಖರ



ಬೊಮ್ಮಘಟ್ಟ ಸಮಾಧಿ



ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿರುವ ಗಜಲಕ್ಷ್ಮಿ ಶಿಲ್ಪ



ಕಲ್ಲೇದೇವರಪುರದ ಎತ್ತಿನ ಜಾತ್ರೆ



ಕಲ್ಲೇಶ್ವರ ಜಾತ್ರೆಯ ಸಂದರ್ಭದಲ್ಲಿ ಡೊಳ್ಳು ಕುಣಿತ



ಕಲ್ಲೇಶ್ವರ ರಥೋತ್ಸವ ಸಂದರ್ಭ



ಕಲ್ಲೇದೇವರಪುರದಲ್ಲಿ ಕಂಡುಬರುವ ಕೋಲಾಟ



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ